ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ಮಿತ್ರರಾದ ವಿ. ಎನ್. ಪಾಟೀಲರವರ, ನಾಗಪ್ಪನವರ ಮತ್ತು ಇವಕ್ಕೆ ಪ್ರತಿಯಾಗಿ ಮಾನ್ಯ ಗೋಪಾಲಗೌಡರ, ಮಾನ್ಯ ನಂಜೇಗೌಡರ ಮತ್ತು ಮಾನ್ಯ ಸಿದ್ಧವೀರಪ್ಪನವರ ಪ್ರಸ್ತಾವನೆ ಮತ್ತು ಪ್ರತಿ ಪ್ರಸ್ತಾವನೆಗಳು ಬಂದಿವೆ. ಈ ಸಭೆಯ ಮುಂದೆ ಪ್ರಸ್ತಾವನೆಗಳನ್ನು ಮತ್ತು ಪ್ರತಿ ಪ್ರಸ್ತಾವನೆಗಳನ್ನು ತರಬೇಕಾದಂತಹ ಅವಶ್ಯಕತೆ ಏನಿತ್ತು ಎಂಬ ಅನುಮಾನ ಬರುತ್ತದೆ. ಇದೇ ಸಭೆಯಲ್ಲಿ ತಾ|| 19-12-1967 ರಂದು ಮಹಾಜನ್ ಕಮಿಶನ್ ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕೆಂದು ಸರ್ಕಾರದ ವತಿಯಿಂದ ಬಂದಂತಹ ಒಂದು ಪ್ರಸ್ತಾವನೆಯನ್ನು ಒಪ್ಪಿಕೊಂಡ ಮೇಲೆ ಮತ್ತೊಮ್ಮೆ ಈ ಪ್ರಸ್ತಾವನೆ ಬರಬೇಕಾದುದು ಅನಾವಶ್ಯಕವಾದುದು ಎಂದು ನನ್ನ ಭಾವನೆ. ಇದಕ್ಕೆ ಕಾರಣವಾದರೂ ಇಷ್ಟೇ. 1956ರಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆಯಾದವು. ಅಲ್ಲಿಂದ ಈಚೆಗೆ ನಮ್ಮ ರಾಜ್ಯಸರ್ಕಾರದವರು ಭಾಷಾರಾಜ್ಯ ಪ್ರಗತಿಗೆ ಏನು ಕೆಲಸವನ್ನು ಮಾಡಿದ್ದಾರೆ ? ಮಹಾರಾಷ್ಟ್ರ ಏಕೀಕರಣ ಸಮಿತಿಯ ಪ್ರತಿನಿಧಿಗಳು ಕಳೆದ ಮೂರು ಚುನಾವಣೆಗಳಲ್ಲೂ ಅಲ್ಲಿಂದ ಆರಿಸಿ ಬರುತ್ತಿದ್ದಾರೆ. ಅಲ್ಲಿಂದ ಎಂ.ಇ.ಎಸ್. ಪ್ರತಿನಿಧಿಗಳು ಆರಿಸಿ ಬರದೆ, ಕನ್ನಡಿಗರ ಪ್ರತಿನಿಧಿಗಳು ಆರಿಸಿ ಬರುವುದಕ್ಕೆ ಸರಕಾರ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ? ಈ ದಿವಸ ಕಾಸರಗೋಡು ನಮಗೆ ಬರಬೇಕೆಂದು ಕೇಳುತ್ತಿದ್ದೇವೆ. ಅಲ್ಲಿಂದ ಕನ್ನಡಿಗರಾದ ಮಹಾಬಲ ಭಂಡಾರಿಯವರು ಪ್ರತಿನಿಧಿಯಾಗಿ ಆರಿಸಿ ಬಂದಿದ್ದಾರೆ. ಅದು

(ಶ್ರೀ ಎನ್. ಎ. ಚನ್ನೇಗೌಡ)

ಕನ್ನಡಿಗರಿಗೆ ಸೇರಿರತಕ್ಕ ನೆಲವಾಗಿದೆ ಎನ್ನುತ್ತೇವೆ. ಮಹಾಜನ್ ಕಮಿಶನ್ ಪ್ರಕಾರ ಬೆಳಗಾಂ ನಮಗೆ ಬೇಕೆಂದು ಒತ್ತಾಯಪೂರ್ವಕವಾಗಿ ಪದೇ ಪದೇ ಪ್ರಸ್ತಾವನೆಗಳ ಮೂಲಕ ಹೇಳುವ ಬದಲು ಸರ್ಕಾರ ಕಾರ್ಯತಃ ಕೆಲಸಮಾಡದೆ ಈ ಮೂರು ಚುನಾವಣೆಗಳ ಕಾಲದಲ್ಲೂ ನಿದ್ರೆ ಮಾಡುತ್ತಿತ್ತೇ? ಅಲ್ಲಿ ಕನ್ನಡಿಗರು ಆರಿಸಿ ಬರುವುದಕ್ಕೆ ಸರ್ಕಾರದವರು ತಕ್ಕ ಕ್ರಮವನ್ನು ತೆಗೆದು ಕೊಳ್ಳದಿರುವುದು ಸರ್ಕಾರದ ಕರ್ತವ್ಯಲೋಪವೆಂದು ಹೇಳಬೇಕಾಗಿದೆ. ಅಲ್ಲದೆ, ಈ ಗೊತ್ತುವಳಿ ಯನ್ನು ಒಪ್ಪಿಕೊಂಡರೆ ನಮಗೆ ಸಿಕ್ಕತಕ್ಕ ಫಲವಾದರೂ ಏನು? ಈಗಾಗಲೇ ಹಿಂದೆ ಮಾಡಿದ ಗೊತ್ತುವಳಿಯ ಮೇಲೆ ಕೇಂದ್ರ ಮತ್ತು ರಾಜ್ಯಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಗಡಿ ಪ್ರಶ್ನೆ ರಾಜಕೀಯ ಚದುರಂಗದಲ್ಲಿ ಉಪಯೋಗಿಸುವ ಒಂದು ಕಾಯಿಯಂತಾಗಿದೆ. ಕೇಂದ್ರ ಸರ್ಕಾರದವರು ಗಡಿ ಪ್ರಶ್ನೆ ಬಗ್ಗೆ ನಿರ್ದಿಷ್ಟವಾದ ಸಲಹೆಗಳನ್ನು ಕೊಡದಿದ್ದರೆ ರಾಜ್ಯಸರ್ಕಾರವೇ ಈ ಸಮಸ್ಯೆ ಬಗ್ಗೆ ಹೀಗೆ ಅಲ್ಲ, ಹಾಗೆ ಎಂದು ಹೇಳಬಹುದಿತ್ತು. ಕೇಂದ್ರಸರ್ಕಾರದವರು ಇದು ವರೆಗೂ ಅದರ ಬಗ್ಗೆ ಒಂದು ಚಕಾರವನ್ನೂ ಎತ್ತಲಿಲ್ಲ. ಮುಖ್ಯಮಂತ್ರಿಯವರು ನನಗೆ ಅಧಿಕೃತ ವಾಗಿ ಲಿಖಿತ ಮೂಲಕ ಯಾವ ಸಲಹೆಯೂ ಬಂದಿಲ್ಲ, ಅದು ಬರುವತನಕ ಏನೂ ಹೇಳುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಇದರ ಬಗ್ಗೆ ಈಗಿನ ಮುಖ್ಯಮಂತ್ರಿಯವರು ಏನು ಮಾಡುತ್ತಿದ್ದಾರೆ? ಹಿಂದಿನ ಮುಖ್ಯಮಂತ್ರಿಯವರಾದ ನಿಜಲಿಂಗಪ್ಪನವರು ಇಷ್ಟುರವರೆಗೆ ಏನು ಮಾಡುತ್ತಿದ್ದರು? ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗಲೇ ಈ ಗೊತ್ತುವಳಿ ಪಾಸಾದುದು. ಅವರು ಕಾಂಗ್ರೆಸ್ ಅಧ್ಯಕ್ಷರಾದಾಗ ಶ್ರೀ ಚವಾನ್ ಸಹಾ ಇವರ ಸಿಂಡಿಕೇಟ್ ಗುಂಪಿಗೆ ಸೇರಿದ್ದರು. ಆಗ ಕೇಂದ್ರದಲ್ಲಿ ಕಾಂಗ್ರೆಸ್ ಬಹುಮತ ಸರಕಾರವಿತ್ತು. ಆಗ ಇವರು ಕುಂಭಕರ್ಣ ನಿದ್ದೆ ಮಾಡುತ್ತಾ ತಮ್ಮ ಸ್ಥಾನಮಾನ, ಪ್ರಭಾವವನ್ನು ಉಪಯೋಗಿಸಿ ಕನ್ನಡ ರಾಜ್ಯಕ್ಕೋಸ್ಕರ ಶ್ರಮಿ ಸುವ ಬದಲು ತಮ್ಮ ಸ್ವಾರ್ಥಸಾಧನೆ ಮಾಡಿರುವುದು ನಿಜವಾಗಿಯೂ ಶುದ್ಧ ತಪ್ಪೆಂದು ನಾನು ಹೇಳುತ್ತೇನೆ. ಅಲ್ಲದೆ ಇನ್ನೊಂದು ವಿಚಾರವನ್ನು ಹೇಳುತ್ತೇನೆ. ನಮ್ಮ ರಾಜ್ಯದ ಮುಖ್ಯಮಂತ್ರಿ ಯವರು ಹೇಳುತ್ತಾರೆ, ''ನಾನು ಡೆಲ್ಲಿಗೆ ಹೋಗಬೇಕಾಗಿಲ್ಲ, ಕೇಂದ್ರಸರ್ಕಾರದವರು ಲಿಖಿತ ಮೂಲಕ ಬರೆದ ಕೊಟ್ಟರೆ ಮಾತ್ರ ಅದರ ಬಗ್ಗೆ ಮಾತನಾಡುತ್ತೇನೆ, ಎಂದು. ಆದರೆ ನಮ್ಮ ಸರ್ಕಾರದವರು ಕೇಂದ್ರಸರ್ಕಾರದವರಿಗೆ ನಮ್ಮ ಸಭೆಯ ನಿಲುವನ್ನು ಹೇಳದೆ ಅವರಾಗಿ ನಿಮಗೆ ಕಾಸರಗೋಡು, ತಾಳವಾಡಿ, ಬೆಳಗಾಂ ಎಲ್ಲವನ್ನೂ ತಟ್ಟೆಯಲ್ಲಿಟ್ಟು ಕೊಡುತ್ತಾರೇನು? ಖಂಡಿತ ವಾಗಿಯೂ ಇಲ್ಲ. ಮುಖ್ಯಮಂತ್ರಿಗಳಿಗೆ ಕನ್ನಡ ಜನರ ಮೇಲೆ ನಿಜವಾದ ಹಿತಾಸಕ್ತಿ ಇದ್ದಿದ್ದರೆ ಆ ದಿವಸವೇ ಡೆಲ್ಲಿಗೆ ಹೋಗಬೇಕಾಗಿತ್ತು. ಈದಿನ ಬಜೆಟ್ ಅಧಿವೇಶನದ ನಾರ್ಮಲ್ ಕಾರ್ಯ ಕಲಾಪಗಳನ್ನು ಮುಂದೆ ಹಾಕಿ, ಈ ಸಭೆ ಕಳೆದ ಮೂರು ದಿವಸಗಳಿಂದ ಈ ವಿಷಯವನ್ನು ಚರ್ಚೆ ಮಾಡುತ್ತಿದೆ. ಪರಿಸ್ಥಿತಿ ಇಷ್ಟು ಗಂಭೀರವಾಗಿದ್ದರೂ ಕೂಡ ನಮ್ಮ ಮುಖ್ಯಮಂತ್ರಿಯವರು ಡೆಲ್ಲಿಗೆ ಹೋಗಿ ನಮ್ಮ ಸಭೆಯ ನಿಲುವನ್ನು ತಿಳಿಸಬೇಕೆಂಬುದು ಅವರಿಗೆ ಇಷ್ಟವಿಲ್ಲ. ಆದರೆ ಬೆಳಗಾಂನಲ್ಲಿ ಹೋಗಿ ಒಂದು ಇಂಚು ನೆಲವನ್ನೂ ಮತ್ತು ಒಂದು ತಿಲಕ ಇಡುವಷ್ಟು ಧೂಳನ್ನೂ ಕೊಡುವುದಕ್ಕೆ ಬಿಡುವುದಿಲ್ಲವೆಂದು ಹೇಳಿದ್ದಾರೆ. ಇದರಿಂದ ಏನು ಸಾಧಿಸಿದಂತಾಗುತ್ತದೆ? ಇದು ರಾಜಕೀಯ ಮುತ್ಸದ್ದಿತನದ ಕೆಲಸವಲ್ಲ. ಕೇಂದ್ರಸರ್ಕಾರ ಯಾವ ಹೊಣೆಯನ್ನು ಹೊರಲಾರದು, ಪಾರ್ಲಿ ಮೆಂಟೇ ಈ ಗಡಿ ಸಮಸ್ಯೆಯನ್ನು ಅಂತಿಮವಾಗಿ ತೀರ್ಮಾನ ಮಾಡಬೇಕು. ಈಗ ಕೇಂದ್ರ ದಲ್ಲಿರುವುದು ಮೈನಾರಿಟಿ ಸರಕಾರ. ಮೈನಾರಿಟಿ ಸರ್ಕಾರ ಅದನ್ನು ತೀರ್ಮಾನ ಮಾಡಿದರೆ ಅದು ತೀರ್ಮಾನವಾಗುವುದಿಲ್ಲ. ಪಾರ್ಲಿಮೆಂಟ್ ಸದಸ್ಯರ ಮತ್ತು ಬೇರೆ ಬೇರೆ ಪಕ್ಷಗಳ ಬಹುಮತವನ್ನು ಪಡೆಯುವುದಕ್ಕೆ ನಮ್ಮ ಮುಖ್ಯಮಂತ್ರಿಯವರು ಏನು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ? ವಿರೋಧಪಕ್ಷದಲ್ಲಿ ಒಡಕು ತರುವುದಕ್ಕೆ ಪ್ರಸ್ತಾವನೆಗಳನ್ನೂ ಅವಕ್ಕೆ ಪ್ರತಿ ಪ್ರಸ್ತಾವನೆಗಳನ್ನು ತಂದು, ತಮ್ಮ ಸ್ವಪ್ರತಿಷ್ಠೆಯನ್ನು ಬೆಳೆಸುವುದಕ್ಕೋಸ್ಕರ ಹೀಗೆಲ್ಲಾ ಮಾಡುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿಯವರಿಗೆ, ಬಹಳ ಹೆದರಿಕೆ ಇದೆ. ಎಲ್ಲಿ ಯಾವಕ್ಷಣದಲ್ಲಿ ಇವರಿಗೆ, ಇವರ ಸರ್ಕಾರಕ್ಕೆ ದೆಹಲಿಯಿಂದ ''ಬುಲಾವೋ'' ಬರುತ್ತದೋ ಎಂದು ತಲ್ಲಣಿಸಿಹೋಗಿದ್ದಾರೆ. ಇವರ ವೀರತ್ವ ಬೆಳಗಾಂನಲ್ಲಿ ಮಾತ್ರ ಹೊರಹೊಮ್ಮಿತು. ಇವರ ವೀರತ್ವ ಚೀಣಿಯರು 14 ಸಾವಿರ ಚದುರಮೈಲಿ ಭಾರತ ಪ್ರದೇಶವನ್ನು ಆಕ್ರಮಿಸಿಕೊಂಡಾಗ, ಪಾಕಿಸ್ಥಾನದವರು ಅರ್ಧ ಕಾಶ್ಮೀರ್ ಮತ್ತು ರಾಣ್ ಆಫ್ ಕಚ್ ಆಕ್ರಮಿಸಿಕೊಂಡಾಗ ಎಲ್ಲಿಹೋಗಿತ್ತು. ಇಂದಿರಾ ಗಾಂಧೀಜಿಯವರನ್ನು ಪ್ರತ್ಯೇಕವಾಗಿ ನೋಡಿ ನಮ್ಮ ಜನರ ಹಿತಾಸಕ್ತಿಗಳನ್ನು ಮುಂದಿಡುವುದಕ್ಕೆ ಇವರಿಗೆ ವೀರತ್ವವಿಲ್ಲ. ಬೆಂಗಳೂರಿನಲ್ಲಿ ಯಾವ ಎ.ಐ.ಸಿ.ಸಿ. ಸಭೆ ಆದಮೇಲೆ ದೆಹಲಿಗೆ ಹೋದತಕ್ಷಣ ತಮ್ಮ ಅರ್ಥಿಕ ಮಂತ್ರಿಯವರಾದ ಶ್ರೀ ಮುರಾರಜಿಯವರನ್ನು ಕೆಲಸದಿಂದ ತೆಗೆದು ಮನೆಗೆ ಕಳಿಸಿದರೋ, ಅದೇ ರೀತಿ ತಮಗೆ

ಎಲ್ಲಿಯಾದರೂ ಮಾಡುತ್ತಾರೋ, ತಮ್ಮ ಮಂತ್ರಿಮಂಡಳಿಯನ್ನು ಕಿತ್ತು ಹಾಕಿ, ಯಾವ ಗಳಿಗೆಯಲ್ಲಿ ಮನೆಗೆ ಕಳಿಸುತ್ತಾರೋ ಎಂಬ ಹೆದರಿಕೆ ಇವರನ್ನು ಡೆಲ್ಲಿಗೆ ಹೋಗಲು ಬಿಡುವುದಿಲ್ಲವೆಂದು ಹೇಳುತ್ತೇನೆ. ನಾವು ಈ ದಿವಸ ಕೇವಲ ಮಹಾಜನ್ ಕಮಿಶನ್ ವರದಿಯನ್ನು ಒಪ್ಪಿಕೊಂಡರೆ ಕನ್ನಡದ ಜನರಿಗೆ ಅನ್ಯಾಯವನ್ನುಂಟುಮಾಡಿದಹಾಗೆ ಆಗುತ್ತದೆ. ಇದರಿಂದ ನಾನಾದರೂ ಹೇಳುವುದು ಇಷ್ಟೆ. ಇದಕ್ಕೆ ಮೂಲ ಕಾರಣ—ಭಾಷಾವಾರು ರಾಜ್ಯಗಳನ್ನು ರಚನೆ ಮಾಡಿದ್ದು—ಜಗತ್ತಿನ ಯಾವ ರಾಷ್ಟ್ರದಲ್ಲೂ ಕೂಡ ಈ ಒಂದು ಗಡಿ ನೆಲಕ್ಕಾಗಿ ಇಷ್ಟು ಹೊಡೆದಾಟ ನಡೆಯುತ್ತಾ ಇಲ್ಲ. ನಮ್ಮಲ್ಲಿ ಈ ದಿನ ಭಾರತೀಯತನ ಕಣ್ಮರೆಯಾಗುತ್ತಿದೆ. 19ನೆ ಶತಮಾನದ ಪಶ್ಚಿಮ ಯುರೋಪಿನಲ್ಲಿ ಉದ್ಭವಿಸಿದ ಸಬ್‌ನ್ಯಾಷನಲಿಸಂ ಇಂದು ಭಾರತದಲ್ಲಿ ಮನೆಮಾಡಿದೆ. ನಾವು ಪಂಜಾಬಿನವರು, ನಾವು ಬಂಗಾಳಿಯವರು, ನಾವು ಮದ್ರಾಸಿನವರು. ನಾವು ಕನ್ನಡಿಗರು ಎಂಬ ಪ್ರಾಂತ್ಯ ಮನೋಭಾವವು ಬೆಳೆಯುತ್ತಾ ಇದೆ. ಇದರಿಂದ ರಾಜಕೀಯದಲ್ಲಿ ಒಂದು ದೊಡ್ಡ ಹುಣ್ಣು ಬೆಳೆದುಬಂದಿದೆ. ಅದು ರಾಜಕೀಯವೆಂಬ ಶರೀರದಲ್ಲಿ ಗುಣಪಡಿಸಲಾರದ ಕ್ಯಾನ್ಸರ್ ಆಗಿಬಿಟ್ಟಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. The Concept of linguistic state has become all incurable ulcer in the body politic of India. It cannot be cured but must be operated upon. ಸದ್ಯದ ಗಡಿ ಸಮಸ್ಯೆಗಳು ಭಾಷಾವಾರು ರಚನೆ ಪಾಪದ ಫಲವೆಂದು ಮತ್ತೊಮ್ಮೆ ನಾನು ಒತ್ತಾಯವಾಗಿ ಹೇಳುತ್ತೇನೆ. ಈಗಲೂ ಕೂಡ ಕಾಲ ಮಿಂಚಿಹೋಗಿಲ್ಲ. ಭಾಷಾವಾರು ಪ್ರಾಂತಗಳಿಗಾಗಿ ಯಾರು ತನುಮನಧನಗಳನ್ನು ಅರ್ಪಿಸಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರೋ, ಅಂತಹ ನಾಯಕಮಣಿ ನೆಹರುರವರು ಯಾವಾಗಲಾದರೂ ನಮ್ಮ ದೇಶದಲ್ಲಿ ಏನಾದರೂ ಭಾಷಾವಾರು ಪ್ರಾಂತ ರಚನೆಯಿಂದ ಅಶಾಂತಿ, ಅರಾಜಕತೆಯಾದರೆ, ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ಬಂದರೆ ಭಾಷಾವಾರು ಪ್ರಾಂತ ರಚನೆಯನ್ನೇ ಬದಲಾಯಿಸಬೇಕೆಂದು ಹೇಳಿದ್ದರು. ಮಾನ್ಯ ಶ್ರೀ ನಿಜಲಿಂಗಪ್ಪನವರೂ ಹಿಂದೆ ಒಂದುಸಾರಿ ಇದೇ ಮಾತನ್ನು ಹೇಳಿದ್ದಾರೆ. ಭಾಷಾವಾರು ಪ್ರಾಂತಗಳಿಂದ ರಾಷ್ಟ್ರೈಕ್ಯತೆಗೆ ಧಕ್ಕೆ ಬರುವುದಾದರೆ ಭಾಷಾವಾರು ಪ್ರಾಂತಗಳೇ ಬೇಡವೆಂದೂ ಹೇಳಿದ್ದಾರೆ. ರಾಷ್ಟ್ರೈಕ್ಯತೆಗೆ ಧಕ್ಕೆ ಬಂದಿರುವುದಕ್ಕೆ ಇನ್ನೂ ಸಾಕ್ಷಿ ಬೇಕೆ ? ಈ ದಿವಸ ಮಹಾರಾಷ್ಟ್ರ ಮತ್ತು ಮೈಸೂರಿನ ಗಡಿ ಬಗ್ಗೆ ಈ ಗಡಿ ವ್ಯವಹಾರ ಬಂದಿದೆ. ನಾಳೆದಿವಸ ಹೊಸೂರಿನ ಬಗ್ಗೆ ಆಂಧ್ರದವರದು ಬರಬಹುದು. ನನ್ನ ಮಿತ್ರರಾದಂಥ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ತಾಳವಾಡಿ ಬಗ್ಗೆ ಈಗಾಗಲೇ ಜಾತಾ ಹೊರಟಿದ್ದಾರೆ. ಅದರಿಂದ ತಮಿಳುನಾಡಿನವರಿಗೂ ಮತ್ತು ಮೈಸೂರಿನವರಿಗೂ ಇನ್ನುಮುಂದೆ ವ್ಯವಹಾರ ಬರಬಹುದು. ಕಾಸರಗೋಡಿನ ಬಗ್ಗೆ ಕೇರಳದವರು ಒಂದು ನಿರ್ದಿಷ್ಟ ನಿಲುವನ್ನು ತಳೆದಿದ್ದಾರೆ. ಸುತ್ತಲೂ ವಿರೋಧಿಗಳು ಮೈಸೂರು ರಾಜ್ಯ ಸರ್ಕಾರಕ್ಕೆ ಇರುವಾಗ ಕನ್ನಡದವರನ್ನು ಉಳಿಸುವುದಕ್ಕೆ ಭಾಷಾವಾರು ಆಧಾರದಲ್ಲಿ ಹೇಗೆ ಸಾಧ್ಯವಾಗುತ್ತದೆನ್ನುವುದನ್ನು ಸರಕಾರ, ಸಭೆ ಮತ್ತು ಜನತೆ ಕೂಲಂಕಷವಾಗಿ ಭಾಷಾವಾರು ನಿಲುವನ್ನು ಪುನರ್ವಿಮರ್ಶೆ ಮಾಡಬೇಕು. ಈ ಸಭೆಯಲ್ಲಿ ತಮ್ಮ ಮೂಲಕ ನನ್ನ ಸನ್ಮಾನ್ಯ ಮಿತ್ರರಿಗೆ ಅರಿಕೆ ಮಾಡುವುದೇನೆಂದರೆ, ನಮ್ಮ ಸರ್ಕಾರದವರು ಈಗಲೇ ಮನಸ್ಸುಮಾಡಿ ಪುನಃ ಕೇಂದ್ರಸರಕಾರದವರು ಎರಡನೇ ಎಸ್. ಆರ್. ಸಿ. ಒಂದನ್ನು ನೇಮಕಮಾಡಿ ಭಾಷಾವಾರು ಆಧಾರದ ಮೇಲೆ ವಿಂಗಡಣೆ ಮಾಡುವುದು ಒಳ್ಳೆಯದಲ್ಲ. ಆಡಳಿತ ಸೌಲಭ್ಯ, ಆರ್ಥಿಕ ವೈಯಬಿಲಿಟಿ ಮತ್ತು ಭೌಗೋಳಿಕ ಆಧಾರದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಬೇಕೆಂದು ಒತ್ತಾಯಿಸುವ ಪ್ರಸ್ತಾವನೆಯನ್ನು ಸಭೆಯಮುಂದೆ ತರಬೇಕು ಇಲ್ಲದಿದ್ದರೆ ಭಾಷಾವಾರು ಗೊಂದಲ ಎಂದೆಂದಿಗೂ ಇರುತ್ತದೆ. ಈ ಭಾಷಾವಾರು ಪ್ರಾಂತರಚನೆಯಿಂದ ಪ್ರಜೆಗಳ ಆರ್ಥಿಕಮಟ್ಟ ಹೆಚ್ಚಲಿಲ್ಲ. ಸುಖ ಶಾಂತಿ ಹೆಚ್ಚಲಿಲ್ಲ. ಜನತೆಯಲ್ಲಿ ಸೌಹಾರ್ದ ಕಣ್ಮರೆಯಾಯಿತು. ಪ್ರಾಂತೀಯ ಅಸಮಾನತೆ ಹೆಚ್ಚಿದೆ. ಆದ್ದರಿಂದ ಪ್ರಜೆಗಳು ಸುಖವಾಗಿರಬೇಕಾದರೆ, ನೆರೆಹೊರೆಯ ಪ್ರಾಂತಗಳ ವಿಶ್ವಾಸವನ್ನು, ಸುಖ ಶಾಂತಿ ಸೌಹಾರ್ದತೆಗಳನ್ನು ಜನತೆಗೆ ಕೊಡಬೇಕಾದರೆ ಪ್ರಪ್ರಥಮವಾಗಿ ಭಾಷಾವಾರು ಪ್ರಾಂತರಚನೆ ತತ್ವಕ್ಕೆ ತಿಲಾಂಜಲಿ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಮತ್ತು ಸಮಯಕೊಟ್ಟ ಅಧ್ಯಕ್ಷರನ್ನು ವಂದಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸ್ವಾಮಿ, ಇವತ್ತಿನದಿವಸ ನಮ್ಮ ಎದುರಿಗೆ ಇರತಕ್ಕಂಥ ಅನೇಕ ನಿರ್ಣಯಗಳಲ್ಲಿ ಕೆಲವು ನಿರ್ಣಯಗಳು ವಾಪಸ್ಸಾಗಿವೆ. ಇನ್ನು ಕೆಲವು ನಿರ್ಣಯಗಳು ನಮ್ಮ ಎದುರಿಗೆ ಇವೆ. ಈಗ ಪ್ರಾಮುಖ್ಯವಾಗಿ ಎರಡು ನಿರ್ಣಯಗಳು ಅಥವಾ ಎರಡು ಅಭಿಪ್ರಾಯಗಳು ಇವೆ. ಎಲ್ಲ ನಿರ್ಣಯದಲ್ಲಿಯೂ ಮುಖ್ಯವಾಗಿ ಅಡಗಿರುವ ಒಂದು ಮುಖ್ಯ ಅಭಿಪ್ರಾಯ ಮಹಾಜನ್ ಕಮಿಷನ್ ವರದಿಯನ್ನು ಇದ್ದಕ್ಕಿದ್ದಹಾಗೆ ಒಪ್ಪಬೇಕು ಮತ್ತು ಅದರ ಇಂಪ್ಲಿಮೆಂಟೇಷನ್ ಸಲುವಾಗಿ ರಾಜ್ಯದಿಂದ ಎಲ್ಲಾ ಪಕ್ಷಗಳನ್ನೊಳಗೊಂಡಂತೆ ಒಂದು ನಿಯೋಗ ಹೋಗಬೇಕೆಂದು ಹೇಳುವುದಾಗಿದೆ. ಇನ್ನೊಂದು, ಮಹಾಜನ್ ಕಮಿಷನ್ನಿನಿಂದ

(ಶ್ರೀ ಕೆ. ಎಚ್. ಪಾಟೀಲ್)

ಈಗಾಗಲೇ ನಮ್ಮ ರಾಷ್ಟ್ರಕ್ಕೆ ಬಹಳ ಹಾನಿಯಾಗಿದೆ, ಸಿಂಡಿಕೇಟ್ ಕಾಲದಲ್ಲಿ ಮಹಾಜನ್ ಕಮಿಷನ್ ನೇಮಕವನ್ನು ಕರ್ಣಾಟಕದ ಶಿಲ್ಪಿಗಳೆಂದು ಹೇಳಿಕೊಳ್ಳುವ ಶ್ರೀಮಾನ್ ನಿಜಲಿಂಗಪ್ಪನವರು ನಮ್ಮ ರಾಜ್ಯದ ಹಿತಕ್ಕಿಂತ ನಮ್ಮ ಹಿತ ದೊಡ್ಡದು ಎಂದು ಭಾವಿಸಿ ಒಪ್ಪಿದ್ದಾರೆ. ಯಾರು ಮಹಾಜನ್ ಕಮಿಷನ್ ವರದಿಯನ್ನು ಹಿಂದೆ ಸ್ವಾಗತ ಮಾಡಿದ್ದರೋ ಅವರೇ ಈಗ ಬೇಡವೆಂದು ಹೇಳುತ್ತಿದ್ದಾರೆ. ಈಗ ನಮ್ಮ ರಾಜ್ಯವನ್ನು ಹಾಳು ಮಾಡಿಕೊಳ್ಳುವುದು ಬೇಡ, ನಮಗೆ ಬರಬೇಕಾದ್ದನ್ನು ಬೇರೆಯವರಿಂದ ಪಡೆಯೋಣವೆನ್ನುವ ರೀತಿಯಲ್ಲಿ ಮಾನ್ಯ ಶ್ರೀ ಸಿದ್ದವೀರಪ್ಪನವರು ಮತ್ತು ಇತರರು ಒಂದು ತಿದ್ದುಪಡಿಯನ್ನು ಇಲ್ಲಿ ಮಂಡಿಸಿದ್ದಾರೆ. ಈ ಎರಡು ತಿದ್ದುಪಡಿಗಳಲ್ಲಿ ಯಾವ ತಿದ್ದುಪಡಿ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಸ್ವಾಗತಾರ್ಹವಾಗಿದೆ ಎಂಬುದನ್ನು ನಿರೀಕ್ಷಣೆ ಮಾಡಬೇಕಾಗಿದೆ. ಮಹಾಜನ್ ವರದಿ ಪ್ರಕಾರ ಇವತ್ತು ಮೈಸೂರಿನಿಂದ ಮಹಾರಾಷ್ಟ್ರಕ್ಕೆ ಕೊಡಬೇಕಾದ ಹಳ್ಳಿಗಳ ಸಂಖ್ಯೆ 264. ಅವುಗಳ ಚದುರಮೈಲಿ 666. ಜನಸಂಖ್ಯೆ 2 ಲಕ್ಷ 31 ಸಾವಿರ. ಆದ್ರೆ ಮಹಾರಾಷ್ಟ್ರದಿಂದ ಮೈಸೂರಿಗೆ ಬರತಕ್ಕದ್ದು ಅದಕ್ಕಿಂತ ಕಡಿಮೆ ಇದೆ. ಈ ಪ್ರಮಾಣವನ್ನು ನಾವು ನೋಡಿದರೆ, ನಮಗೆ ಬರತಕ್ಕಂಥ ಪ್ರದೇಶದ ವಿಸ್ತೀರ್ಣ ಬಹಳ ಕಡಿಮೆ. ನಮಗೆ ಬರತಕ್ಕ ಪ್ರದೇಶ ಒಬ್ಬಲಟ ತೆಗೆದುಕೊಂಡು ಬರುತ್ತದೆ. ಜನಸಂಖ್ಯೆ ಅಧಿಕವಾಗಿ ಬಂದರೆ, ರಕ್ಷಣೆ ಮಾಡುವ ಭಾರ ಬರುತ್ತದೆ. ಆದ್ದರಿಂದ ಕನ್ನಡಿಗರು ಎಲ್ಲೆಲ್ಲಿ ಇದ್ದಾರೋ ಅಲ್ಲಿಂದ ಬರಲಿ ಎಂಬುದಾಗಿ ಹೇಳುವಾಗ, ನಮ್ಮಲ್ಲಿರುವ ಕನ್ನಡಿಗರೇ ಅನೇಕ ಭಾಗಗಳಾಗಿ ಬಹಳ ದೂರವಾಗುತ್ತಿದ್ದಾರೆ. ಮಹಾಜನ್ ವರದಿಯನ್ನು ಒಪ್ಪಬೇಕು ಬೆಳಗಾಂ ಮತ್ತು ಕಾಸರಗೋಡು ಪ್ರದೇಶ ನಮ್ಮಲ್ಲಿ ಇರಬೇಕು ಎಂದು ಹೇಳುವ ನನ್ನ ಸಹೋದರರು ಸೋಲಾಪುರ ಪ್ರದೇಶವನ್ನು ಯಾವ ಕಾರಣಕ್ಕಾಗಿ ಬಿಡಬೇಕೆಂದು ಹೇಳುತ್ತಿದ್ದಾರೋ ಗೊತ್ತಿಲ್ಲ. ನಾನು ಹೇಳುವುದಿಷ್ಟೇ. ನಾವು ಮೊದಲು ಭಾರತೀಯರೆಂಬುದನ್ನು ಅರಿಯಬೇಕು. ಏನಾದರೂ ಮುಂದೆ ಅವರಿಗೆ ನಾಲ್ಕು ಹಳ್ಳಿಗಳು ಹೆಚ್ಚಾಗಲಿ, ನಮಗೆ ನಾಲ್ಕು ಹಳ್ಳಿಗಳು ಹೆಚ್ಚಾಗಲಿ ಅದನ್ನು ಒಪ್ಪಿಕೊಳ್ಳೋಣ. ನಿಜವಾಗಿ ಕೇಂದ್ರಸರ್ಕಾರ ಈ ಸಮಸ್ಯೆಗೆ ಅಂತಿಮ ನಿರ್ಣಯವನ್ನು ಈಗಾಗಲೇ ಕೊಡಬೇಕಾಗಿತ್ತು. ಏಕೆಂದರೆ ಮಹಾರಾಷ್ಟ್ರದವರು ಖಂಡಿತವಾಗಿ ಅದನ್ನು ಒಪ್ಪುವುದಿಲ್ಲವೆಂದು ಹೇಳಿದ್ದಾರೆ. ಅಲ್ಲಿಯ ಆಡಳಿತ ಪಕ್ಷದವರು ಮತ್ತು ಎದುರುಪಕ್ಷದವರೂ ಸಹ ಅದೇ ರೀತಿ ಹೇಳಿದ್ದಾರೆ. ನಮ್ಮ ಹಿರಿಯ ಸ್ನೇಹಿತರು ಒಳಗೊಳಗೇ ಶಿವಸೇನೆಗೆ ಪ್ರಚೋದನೆ ಕೊಟ್ಟು ಇಂದಿರಾ ಗಾಂಧಿಯವರನ್ನು ಪೇಚಿಗೆ ಹಾಕುವ ರೀತಿಯಲ್ಲಿ ಮೈಸೂರು ಮತ್ತು ಮಹಾರಾಷ್ಟ್ರ ಬೌಂಡರಿ ಬಗ್ಗೆ ಆಡುತ್ತಿದ್ದಾರೆ. ಇಂತಹ ಒಂದು ದೊಡ್ಡ ಗಂಡಾಂತರ ಪರಿಸ್ಥಿತಿಯೊಳಗೆ ನಾವು ಇರುವಾಗ, ನಮ್ಮ ಪರಿಸ್ಥಿತಿಯನ್ನು ಬಹಳ ಸೂಕ್ಷ್ಮವಾಗಿ ಪರಿಶೀಲನೆಮಾಡಬೇಕಾಗಿದೆ. ಇವತ್ತು ನಾವು ವ್ಯಕ್ತಿಗತವಾಗಿ ಹೋಗುವುದು ಬೇಡ. ನನ್ನ ಮಾನ್ಯ ಸ್ನೇಹಿತರಾದಂಥ ಶ್ರೀ ಗೋಪಾಲಗೌಡರು ಮಂಡಿಸಿದ ನಿರ್ಣಯ ಹಿಂದೆ 15-12-67ರಲ್ಲಿ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಬೇಕೆಂದು ಖಡಾಖಂಡಿತವಾಗಿ ಹೇಳಿ ಈ ಉಭಯ ಸದನಗಳಲ್ಲಿಯೂ ಎಲ್ಲ ಸದಸ್ಯರೂ ಕೈಗಳನ್ನು ಎತ್ತಿ ಒಪ್ಪಿದ ನಿರ್ಣಯದ ಹಾಗೆಯೇ ಇದೆ. ಆಗ ಮಾನ್ಯ ಶ್ರೀ ನಿಜಲಿಂಗಪ್ಪನವರಿಗೆ ಇಂತಹ ಒಂದು ಹಿರಿಯತನ ಕೊಟ್ಟರೂ ಕೂಡ ಆ ಹಿರಿಯತನವನ್ನು ಅವರು ಸಾಧಿಸದೆಹೋದರು. ಆಗ ಮಾನ್ಯ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದರು. ಅವರು ಆಲ್ ಇಂಡಿಯಾ ವರ್ಕಿಂಗ್ ಕಮಿಟಿಯಲ್ಲಿಯೂ ಇದ್ದರು. ಪ್ರೈಮ್ ಮಿನಿಸ್ಟರ್ ಅವರನ್ನು ಆ ಒಂದು ಸಣ್ಣ ಕೆಲಸದ ಬಗ್ಗೆ ಒಪ್ಪಿಸುವ ಒಂದು ಗಟ್ಟಿತನ ಅವರಿಗೆ ಇರಲಿಲ್ಲ. ಅವರಿಗೆ ನಿಜವಾಗಿಯೂ ಅವತ್ತಿನದಿವಸ ಪ್ರೈಮ್ ಮಿನಿಸ್ಟರನ್ನು ಸಸ್ಪೆಂಡ್ ಮಾಡುವ ಶಕ್ತಿ ಇತ್ತು. ಆದ್ದರಿಂದ ಪ್ರತಿಯೊಬ್ಬ ಕನ್ನಡಿಗರೂ ನಿಜಲಿಂಗಪ್ಪನವರಿಗೆ ಮೈಸೂರಿನ ಹಿತ ದೊಡ್ಡದಾಗಲಿಲ್ಲ, ತಮ್ಮ ಅಧ್ಯಕ್ಷರ ಹಿತ ದೊಡ್ಡದಾಗಿತ್ತು ಎಂಬುದಾಗಿ ಹೇಳುತ್ತಿದ್ದಾರೆ, ತಮ್ಮ ಮುಖ್ಯ ಮಂತ್ರಿತ್ವದ ಹಿತ ದೊಡ್ಡದಾಗಿತ್ತು ಎಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು ಸಣ್ಣವರು. ಅವರ ಮಾರ್ಗವನ್ನು ಇವರು ಅನುಸರಿಸುವುದು ಮಹಾ ದೊಡ್ಡ ಪಾಪ, ಇನ್ನು ಬೆಳಗಾಂ ವಿಷಯವಾಗಿ ನನ್ನ ಮಾತಿನಲ್ಲಿ ಹೇಳುವುದಾದರೆ, ಈಗಿನ ಪರಿಸ್ಥಿತಿ ಉಂಟಾಗಿರುವುದಕ್ಕೆ ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಕಾರಣವೆಂದು ಹೇಳುವುದಲ್ಲ, ಮಾನ್ಯ ಶ್ರೀ ನಿಜಲಿಂಗಪ್ಪನವರಿಂದ ಪ್ರಚೋದಿತರಾಗಿ ಆ ರೀತಿ ವರ್ತಿಸಿದರೆಂದು ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ಬೆಳಗಾಂ ಬಗ್ಗೆ ನಿರ್ಣಯ ನ್ಯಾಯಸಮ್ಮತವಾಗಿ ಇರಬೇಕು. ಏಕೀಕರಣ ಸಮಿತಿಯವರ ಮೇಲೆ ನನ್ನ ಸ್ನೇಹಿತರು ಪ್ರತೀಕಾರ ಮಾಡುವುದಕ್ಕೆ ಬಂದಾಗ ಪಕ್ಷದ ಸಂಘಟನೆಗೆ ಅವರು ಹೆಚ್ಚು ಮಹತ್ವ ಕೊಟ್ಟರು. ದೇಶದ ಜನತೆಯ ಅಭಿಪ್ರಾಯವನ್ನು ಒಂದುಗೂಡಿಸುವುದಕ್ಕೆ ಅವಕಾಶವನ್ನು ಕೊಡಲಿಲ್ಲ, ಮಹಾರಾಷ್ಟ್ರೀಯರನ್ನು ಹೊಡೆಸು

ವುದಕ್ಕೆ ಪ್ರಯತ್ನ ಮಾಡಿದರು. ಒಬ್ಬ ಮಹಾರಾಷ್ಟ್ರೀಯರು ಹೊಡೆತವನ್ನು ತಿಂದು ಅವರು ಆಸ್ಪತ್ರೆಗೆ ಬರುವಂಥಾ ರೀತಿಯಲ್ಲಿ ಮಾಡಿದರು. ಇವರ ಕ್ರೂರ ವರ್ತನೆಯಿಂದ ಕನ್ನಡ ನಾಡಿನಲ್ಲಿರತಕ್ಕ ಮಹಾರಾಷ್ಟ್ರದ ಜನ ಬದುಕಿಕೊಳ್ಳುತ್ತಾರೆಯೇ ಎನ್ನುವ ಶಂಕೆಯನ್ನು ಅವರಿಗೆ ಹುಟ್ಟಿಸಿದ್ದಾರೆ. ಇದರಿಂದಾಗಿ ಮುಂಬೈನಲ್ಲಿರತಕ್ಕ ಕನ್ನಡನಾಡಿನ ಜನಗಳಿಗೆ ತೊಂದರೆಯಾಗುತ್ತದೆ. ಪ್ರಧಾನಿಯವರನ್ನು ಪೇಚಿಗೆ ಸಿಕ್ಕಿಸಲು ಸಂಸ್ಥಾ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವ ಶ್ರೀ ನಿಜಲಿಂಗಪ್ಪನವರೇ ಶಿವಸೇನೆಯವರಿಗೆ ಪ್ರೋತ್ಸಾಹ ನೀಡಿ ಪ್ರಚೋದನೆ ಮಾಡಿ ಗಡಿ ವಿವಾದವನ್ನು ಉಲ್ಬಣಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಮೈಸೂರು ಮತ್ತು ಮಹಾರಾಷ್ಟ್ರ ಬೌಂಡರಿ ವಿಷಯದಲ್ಲಿ. ಗಡಿ ರಕ್ಷಣೆಯ ವಿಷಯದಲ್ಲಿ ಇವರಿಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನಮ್ಮ ಪಕ್ಷದವರಿಗೂ ಇದೆ. ನಮಗೆ ಆ ಬಗ್ಗೆ ಆಸಕ್ತಿ ಇಲ್ಲ ಎಂದು ಯಾರೂ ತಿಳಿಯಬಾರದು. ಶ್ರೀಮಾನ್ ವೀರೇಂದ್ರ ಪಾಟೀಲರು ಬೆಳಗಾವಿನಲ್ಲಿ ಭಾಷಣ ಮಾಡುತ್ತಾ ಕನ್ನಡನಾಡಿನ ಒಂದಂಗುಲ ಭೂಮಿಯನ್ನೂ ಬೇರೆಯವರಿಗೆ ಬಿಟ್ಟುಕೊಡುವುದಿಲ್ಲ ಎಂದು ವೀರವಾಣಿಯನ್ನು ಮೊಳಗಿಸಿದ ಶ್ರೀ ವೀರೇಂದ್ರ ಪಾಟೀಲರು ಕೃತಿಯಲ್ಲಿ ಅದನ್ನು ಮಾಡುತ್ತಿದ್ದಾರೆಯೇ ಎಂಬುದನ್ನು ನೋಡುವುದಾದರೆ ಅದು ನಮಗೆ ಕಾಣುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ವೀರವಾಣಿಯಿಂದ ಮಹಾಜನ್ ಕಮಿಷನ್ನಿನ ವರದಿಯನ್ನು ಒತ್ತಾಯಪಡಿಸಿದರೆ ಅದಕ್ಕೆ ಕೇಂದ್ರವು ಒಪ್ಪಿಗೆಯನ್ನು ಕೊಟ್ಟುಬಿಟ್ಟರೆ ಕನ್ನಡ ನೆಲ ಹೋಗುವುದಲ್ಲವೇ ಸೊಲ್ಲಾಪುರ ನಮಗೆ ಬರುತ್ತದೆಯೇ ? ನೀವು ಹೇಳಿದಂತೆ ಕನ್ನಡ ಭೂಮಿಯನ್ನು ಒದಂಗುಲವನ್ನು ಬಿಡಕೂಡದು ಎಂಬ ಧೀರವಾಣಿ ನಿಮಗೆ ಇದ್ದರೆ ಹೇಳಿದಂತೆ ನಡೆಯುವುದಾದರೆ ಶ್ರೀಮಾನ್ ಸಿದ್ದವೀರಪ್ಪನವರು ತಂದಿರುವ ಠರಾವಿಗೆ ಒಪ್ಪಿಕೊಳ್ಳಿ. ಈ ಠರಾವಿಗೆ ಒಪ್ಪುವುದಾದರೆ ಕಾಸರಗೋಡು ಮತ್ತಿತರ ಕನ್ನಡ ಭಾಗಗಳು ಹೋಗುತ್ತವೆ ಎನ್ನುವ ಭಯಪಡಬೇಕಾಗಿಲ್ಲ. ಎಸ್.ಆರ್.ಸಿ. ಆಕ್ಟ್ ಪ್ರಕಾರ ಸಣ್ಣಪುಟ್ಟ ಬದಲಾವಣೆಗಳನ್ನು ಜೋನಲ್ ಕೌನ್ಸಿಲ್‌ನ ಮುಂದಿಟ್ಟು ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಅವಕಾಶವಿದೆ. ಈ ಬಾರ್ಡರ್ ಡಿಸ್‌ಪ್ಯೂಟ್ ಎಷ್ಟು ವರ್ಷಗಳ ಹಳೆಯ ಕೇಸು. ನೀವು ನಿಮ್ಮ ಮುಖಂಡರು ದೆಹಲಿಯ ಸರ್ಕಾರದಲ್ಲಿ ನಿಮ್ಮ ವರ್ಚಸ್ಸನ್ನು ಬೀರಿ ಈ ಕೇಸನ್ನು ಸೆಟ್ಲ್ ಮಾಡುವುದಕ್ಕೆ ನಿಮ್ಮ ಕೈಯ್ಯಲ್ಲಿ ಆಗಲಿಲ್ಲ. ನಾಳೆ ಒಂದುವೇಳೆ ಈ ಬಾರ್ಡರ್ ಡಿಸ್‌ಪ್ಯೂಟಿನ ಕೇಸನ್ನು ಕೋರ್ಟಿನಲ್ಲಿ ಸೆಟ್ಲ್ ಮಾಡುವಾಗ, ಆರ್ಗ್ಯೂ ಮಾಡುವಾಗ ಮತ್ತೊಬ್ಬ ಲಾಯರನ್ನು ಕರೆದುಕೊಂಡು ಬಂದು ಅದನ್ನು ಅವರಿಗೆ ಒಪ್ಪಿಸಿದರೆ ನಮ್ಮ ಕೇಸು ಸೋತು ಹೋಗುತ್ತದೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಬೌಂಡರಿ ವಿಷಯಕ್ಕೆ ಕೋರ್ಟಿನಲ್ಲಿ ಆರ್ಗ್ಯೂ ಮಾಡುವುದಕ್ಕೆ ಶ್ರೀ ನಂಬಿಯಾರ್ ಅವರನ್ನು ಕರೆದುಕೊಂಡು ಬರಬೇಕಾಯಿತು ಎಂದು ಹೇಳಿದ್ದಾರೆ. ನಮ್ಮ ಸಂಸ್ಥಾನದಲ್ಲಿ ನಮ್ಮ ರಾಜ್ಯದ ಹಿತರಕ್ಷಣೆ ಮಾಡತಕ್ಕ ಲಾಯರುಗಳು ಯಾರೂ ಇಲ್ಲವೇ ? ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಈ ಬಾರ್ಡರ್ ವಿಷಯಕ್ಕೆ ರಾಜಕೀಯ ಸ್ವರೂಪವನ್ನು ಕೊಡಬಾರದು, ಅದಕ್ಕೆ ರಾಜಕೀಯ ಸ್ವರೂಪವನ್ನು ಕೊಡುವುದಾದರೆ ಇದಕ್ಕೆ ಹಾನಿಯುಂಟಾಗುತ್ತದೆ. ನನ್ನ ರಾಜೀನಾಮೆಯಿಂದ ಈ ಸಮಸ್ಯೆ ಬಗೆಹರಿಯುತ್ತದೆ ಎನ್ನುವುದಾದರೆ ಅದಕ್ಕೆ ನಾನು ರಾಜೀನಾಮೆಯನ್ನು ಕೊಡುತ್ತೇನೆ ಎಂದು ಹೇಳಿದರು. ಈ ವಿಷಯದಲ್ಲಿ ಶ್ರೀಮಾನ್ ಅಗ್ನಿಹೋತ್ರಿಯವರು ಬಹಳ ವ್ಯಂಗ್ಯವಾಗಿ ಹೇಳಿದ್ದಾರೆ. ಒಂದು ವೇಳೆ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರಪಾಟೀಲರು ರಾಜೀನಾಮೆಯನ್ನು ಕೊಟ್ಟರೆ ಆ ಸ್ಥಾನಕ್ಕೆ ಬರುವವರು ನಮ್ಮ ಪಾರ್ಟಿಯಲ್ಲಿ ಯಾರೂ ಇಲ್ಲ ಎನ್ನುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ ನಮ್ಮ ಪಾರ್ಟಿ ಯಾರ ಕೈಯ್ಯಲ್ಲೂ ಇಲ್ಲ ಹಿರಿಯರಾದ ಶ್ರೀಮಾನ್ ನಿಜಲಿಂಗಪ್ಪನವರ ಕೈಯಲ್ಲಿ ನಮ್ಮ ಪಾರ್ಟಿ ಇದೆ ಎಂದು ಅರ್ಥವಾಗುತ್ತದೆ. ಶ್ರೀಮಾನ್ ಗೋಪಾಲಗೌಡರು ಈ ಬಗ್ಗೆ ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ. ಅವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಏತಕ್ಕೆ ನಾನು ಇದಕ್ಕೆ ಬೆಲೆ ಕೊಡುತ್ತೇನೆ ಎಂದರೆ ಶ್ರೀಮಾನ್ ನಿಜಲಿಂಗಪ್ಪನವರಿಗೆ ಈ ಮಹಾಜನ್ ಕಮಿಷನ್ ನೇಮಕ ಮಾಡುವುದರಿಂದ ರಾಜ್ಯದ ಹಿತರಕ್ಷಣೆ ಆಗುವುದಿಲ್ಲ ಎಂದು ಅವರ ದೃಷ್ಟಿಯಲ್ಲಿದ್ದರೂ ಕೂಡ ಕೇಂದ್ರ ಸರ್ಕಾರದವರ ಮತ್ತು ಮಹಾರಾಷ್ಟ್ರದವರ ಪ್ರಭಾವಕ್ಕೆ ಒಳಗಾಗಿ ಅನಿವಾರ್ಯವಾಗಿ ಶ್ರೀಮಾನ್ ನಿಜಲಿಂಗಪ್ಪನವರು ಒಪ್ಪಿದ್ದಾರೆ ಎನ್ನುವ ಮಾತನ್ನು ಶ್ರೀಮಾನ್ ಗೋಪಾಲಗೌಡರು 1967ನೇ ಡಿಸೆಂಬರ್ 15ನೇ ತಾರೀಖು ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ಮೊದಲು ಮಹಾಜನ್ ಕಮಿಷನ್ ನೇಮಕ ಮಾಡುವುದನ್ನು ಬಹಿಷ್ಕಾರ ಮಾಡಿ ಆ ಮೇಲೆ ಸ್ವಾಗತ ಮಾಡಿದ್ದಾರೆ ಎನ್ನುವ ವಿಷಯವನ್ನು ಹೇಳಿದ್ದಾರೆ. ಮೊದಲು ಬಹಿಷ್ಕಾರ ಮಾಡಿದ್ದಂತಹ ಮಹಾಜನ್ ಕಮಿಷನ್ ಅನ್ನು ನಂತರ ಒಪ್ಪಿಕೊಂಡರು. ಆ ಮೇಲೆ ಅವರ ವರದಿಯನ್ನೂ ಒಪ್ಪಿಕೊಳ್ಳಬೇಕೆಂದು ನಿರ್ಣಯ ಮಾಡಿದರು. ಈ ಬಗ್ಗೆ ನಮ್ಮ ದೇಶದಲ್ಲಿ ವಿಚಾರ ಮಾಡಿದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿದ್ದರೂ ಸಹ ಕೇಂದ್ರ ಸರ್ಕಾರದವರ ಮೇಲೆ ತಮ್ಮ ಪ್ರಭಾವವನ್ನು ಬೀರಿ ಅದನ್ನು ಇಲ್ಲಿ-

(ಶ್ರೀ ಕೆ. ಎಚ್. ಪಾಟೀಲ್)

ಮೆಂಟ್ ಮಾಡುವ ಶಕ್ತಿ ಇವರಿಗೆ ಇಲ್ಲ. ಸಣ್ಣ ತಪ್ಪಿಗಾಗಿ ಪ್ರಧಾನಿಯವರನ್ನು ಪಕ್ಷದಿಂದ ಹೊರಗೆ ಹಾಕುವ ಎದೆಗಾರಿಕೆಯನ್ನು ಪ್ರದರ್ಶಿಸಿದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಿಜಲಿಂಗಪ್ಪನವರು ಗಡಿ ವಿವಾದದ ಬಗ್ಗೆ ಇಂಥಾದ್ದೇ ಎದೆಗಾರಿಕೆಯನ್ನು ಪ್ರದರ್ಶಿಸಿದ್ದರೆ ಕನ್ನಡ ಜನತೆ ಚಿರಕಾಲ ಇವರ ಹೆಸರನ್ನು ಎದೆಯಲ್ಲಿಟ್ಟುಕೊಂಡು ಕಾಪಾಡುತ್ತಿತ್ತು. ಅದಕ್ಕೆ ಬದಲಾಗಿ ಶ್ರೀಮಾನ್ ನಿಜಲಿಂಗಪ್ಪನವರು ಬಹಳ ಗಂಡಾಂತರಕಾರಿಯಾದ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಪ್ರಧಾನಿಗಳ ಮೇಲೆ ಇಲ್ಲದ ಆರೋಪಗಳನ್ನು ಮಾಡಿದ್ದಾರೆ. ಇದರ ಜೊತೆಗೆ ಶ್ರೀಮತಿ ಇಂದಿರಾ ಗಾಂಧೀಯವರು ನಮ್ಮ ರಾಜ್ಯಸರ್ಕಾರವನ್ನು, ಮಂತ್ರಿಮಂಡಲವನ್ನು ಉರುಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದ್ದಾರೆ. ಕೇಂದ್ರಸರ್ಕಾರದವರೊಡನೆ ವಿವೇಕ ಇಲ್ಲದೆ ಇವರು ವರ್ತಿಸಿ ಅಪಾದನೆಗೆ ಗುರಿಯಾಗಿದ್ದಾರೆ. ಗಡೀ ಸಮಸ್ಯೆಯನ್ನು ಬಗೆಹರಿಸಲು ಎಲ್ಲಾ ಪಕ್ಷಗಳು ಒಂದಾಗಬೇಕು ಎಂದು ಶ್ರೀಮಾನ್ ವೀರೇಂದ್ರಪಾಟೀಲರು ಹೇಳಿದ್ದಾರೆ. ಎಲ್ಲಾ ಪಕ್ಷಗಳ ಸಹಕಾರ ಹಾಗೂ ನಮ್ಮ ಪಕ್ಷದ ಸಹಕಾರವನ್ನು ನಾವು ಕೊಡವುದಕ್ಕೆ ಸಿದ್ಧರಾಗಿದ್ದೇವೆ. ಆದರೆ ಇವೊತ್ತಿನ ದಿವಸ ನಿಜವಾಗಿ ನೀವು ಈ ರಾಜ್ಯದ ಹಿತವನ್ನು ಕಾಯುತ್ತೀರಾ ಎನ್ನುವ ಅನುಮಾನ ನಮಗೆ ಉಂಟಾಗಿದೆ. ನಮ್ಮ ಸ್ನೇಹಿತರಾದ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಭಯಬಂದು ಅವರು ತಮ್ಮ ಗದ್ದುಗೆಯನ್ನು ಕಾಯ್ದುಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಅವರಿಂದ ರಾಜ್ಯದ ರಕ್ಷಣೆ ಯಾಗುವುದಿಲ್ಲ. ಅವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ ಈ ಗಡೀ ಸಮಸ್ಯೆಯ ಬಗ್ಗೆ ಕೇಂದ್ರ ಸರ್ಕಾರದವರೊಡನೆ ಮಾತುಕತೆ ನಡೆಸಲು ನಮ್ಮ ಸರ್ಕಾರದ ಪರವಾಗಿ ಇಬ್ಬರು ಮಾನ್ಯ ಮಂತ್ರಿಗಳನ್ನು ದೆಹಲಿಗೆ ಕಳುಹಿಸಿದ್ದರು. ಅವರು ಅಲ್ಲಿ ಹೋಗಿ ಏನು ಮಾಡಿಕೊಂಡು ಬಂದರು ಎಂಬುದನ್ನು ತಿಳಿಸಲಿಲ್ಲ. ಶ್ರೀಮಾನ್ ಡಿ. ಎಂ. ಸಿದ್ದಯ್ಯನವರೂ ಸರ್ಕಾರದ ಪರವಾಗಿ ದಹಲಿಗೆ ಹೋಗಿದ್ದರು ಎಂದು ಅವರು ಹೇಳುತ್ತಾರೆ. ಇವರು ಸರ್ಕಾರದ ಪರವಾಗಿ ಹೋಗಿರಲಿಲ್ಲ ಎಂದು ಸರ್ಕಾರದವರು ಹೇಳುತ್ತಾರೆ. ಅದು ಏನೇ ಇರಲಿ ಇಲ್ಲಿಂದ ದೆಹಲಿಗೆ ಹೋದವರು ಯಾವರೀತಿ ಸಂಘಟನೆ ಮಾಡಿಕೊಂಡು ಬಂದರು, ಎಷ್ಟುಮಟ್ಟಿಗೆ ಪ್ರಧಾನಿಗಳನ್ನು ಬೇಟಿಯಾಗಿದ್ದರು ಅದರಿಂದ ಎಷ್ಟರಮಟ್ಟಿಗೆ ರಾಜ್ಯದ ಹಿತರಕ್ಷಣೆಯಾಯಿತು ಹೇಗೆ ಎಂಬುದನ್ನು ಅವರು ಹೇಳಲಿಲ್ಲ. ರಾಜ್ಯ ಸರ್ಕಾರದವರು ಈ ಗಡಿ ಸಮಸ್ಯೆಯ ಬಗ್ಗೆ ಅನುಸರಿಸತಕ್ಕ ರೀತಿ ನೀತಿ ಸರಿಯಲ್ಲ. ದೆಹಲಿಗೆ ಹೋದಂತಹ ನಮ್ಮ ರಾಜ್ಯದ ಪ್ರತಿನಿಧಿಗಳು ವರ್ಕಿಂಗ್ ಕಮಿಟಿಯ ಪ್ರಾಮುಖ್ಯವಾದ 3 ಜನಗಳನ್ನು ಇವರು ಭೇಟಿಯಾಗಿದ್ದರೆ? ಒಂದುವೇಳೆ ಅವರೊಡನೆ ಇವರು ಯಾವರೀತಿ ವಿನಯರೀತಿಯಿಂದ ಮಾತನಾಡಿದರು ಎಂಬುದು ಗೊತ್ತಾಗಲಿಲ್ಲ. ರಾಜ್ಯದ ಹಿತದೃಷ್ಟಿಯಿಂದ ವರ್ಕಿಂಗ್ ಕಮಿಟಿಯ ಸದಸ್ಯರನ್ನು ಭೇಟಿ ಮಾಡುವುದರಲ್ಲಿ ಯಾವ ತಪ್ಪೂ ಇಲ್ಲ. ಇವರ ವೈಯಕ್ತಿಕವಾದ ಪ್ರತಿಷ್ಠೆಗಿಂತ ದೇಶದ ಹಿತ ದೊಡ್ಡದು ಎಂದು ಕೆಲಸ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಈ ಗಡಿ ಸಮಸ್ಯೆಯ ಬಗ್ಗೆ ಅನುಸರಿಸತಕ್ಕ ರೀತಿ ನೀತಿ, ವರ್ತನೆ ಸಮರ್ಪಕವಾಗಿಲ್ಲ. ಇವರಿಗೆ ರಾಜ್ಯದ ಹಿತಸಾಧನೆ ಮಾಡಬೇಕು ಎನ್ನುವ ಇಚ್ಛೆ ಇವರಿಗೆ ಇದ್ದರೆ ನಮ್ಮ ರಾಜ್ಯಕ್ಕೆ ಗಂಡಾಂತರ ಬಂದಿರತಕ್ಕ ಸಮಯದಲ್ಲಿ ಸಮರ ಸಿದ್ಧತೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ರಾಜ್ಯವನ್ನು ರಕ್ಷಣೆ ಮಾಡಲು ಎಲ್ಲರ ಬಲವನ್ನೂ ಕ್ರೋಢಿಕರಿಸಿ ಪಕ್ಷಕ್ಕಿಂತ ದೇಶ ದೊಡ್ಡದು ಎನ್ನುವ ಅಭಿಪ್ರಾಯದಿಂದ ಕೆಲಸ ಮಾಡಬೇಕು ಎಂದು ನಾನು ಹೇಳುತ್ತೇನೆ.

5-30 P.M.

ಇನ್ನೊಂದು ಮಾತು ಹೇಳುತ್ತೇನೆ. ಈ ಮಂತ್ರಿಗಳು ಹೇಗೆ ಇದ್ದಾರೆ ಎಂದರೆ, 20ವರ್ಷಗಳ ಕಾಲ ಜನರನ್ನು ನಾವು ಮೋಸ ಮಾಡಿದ್ದೇವೆ ಇನ್ನು ಮೋಸ ಮಾಡುವುದಿಲ್ಲ. ಎಂದು ಒಬ್ಬ ಮಂತ್ರಿಗಳು ಹೇಳಿದ್ದಾರೆ ಅವರ ಹೆಸರು ಹೇಳಬೇಕೆಂದರೆ ಹೇಳುತ್ತೇನೆ. ವಿಜಾಪುರದಲ್ಲಿ ಮಾತನಾಡಿದ್ದು, 13-2-1970ರಲ್ಲಿ ಸಂಯುಕ್ತಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದೆ, ಅದರಂತೆ ಮತ್ತೊಂದು ಮರಾಠಿ ಪತ್ರಿಕೆಯಲ್ಲೂ ಕೂಡ ಪ್ರಕಟವಾಗಿದೆ, ಪ್ರಚಾರವಾಗಿದೆ. ಇದು ಏಕೆ ಹೇಳುತ್ತೇನೆ ಎಂದರೆ ಅವರ ವರ್ತನೆ ಹೇಗೆ ಇದೆ ಎಂಬದನ್ನು ಇದರಿಂದ ನಾವು ತಿಳಿದುಕೊಳ್ಳಬಹುದು. 20 ವರ್ಷ ಮೋಸಮಾಡಿದ್ದಾರೆ, ಇನ್ನೂ ಮೋಸ ಮಾಡುವುದಕ್ಕೆ ಹೊರಟಿದ್ದಾರೆ, ಅವರ ಮೋಸಕ್ಕೆ ಬಲಿಯಾಗುವುದು ಬೇಡ. ಮಾನ್ಯ ಸಿದ್ಧವೀರಪ್ಪನವರು ಸೂಚನೆ ಮಾಡಿರುವ ಠರಾವು ಬಹಳ ಯೋಗ್ಯವಾಗಿದೆ, ಅದಕ್ಕೆ ಸರ್ವರೂ ಬೆಂಬಲ ಕೊಡಬೇಕು, ಮೈಸೂರಿನ ಹಿತವನ್ನು ಬಯಸತಕ್ಕ ಜನ ಯಾವತ್ತೂ ಬೆಂಬಲ ಕೊಡಬೇಕು. ಶ್ರೀಮಾನ್ ನಿಜಲಿಂಗಪ್ಪನವರು ಹಿಂದೆ ಮಾಡಿದ ತಪ್ಪನ್ನು ಮರೆತು ಈಗ ಇರುವ ಠರಾವನ್ನು ಮನ್ನಿಸಿ ಮೈಸೂರಿನ ಹಿತವನ್ನು ಮಾಡುವುದಕ್ಕಾಗಿ ಬೆಂಬಲ

ಕೊಡಬೇಕೆಂದು ಹೇಳುತ್ತೇನೆ. ಇಂದಿರಾ-ಗಾಂಧೀ ಅಷ್ಟೇಕೆ, ಪರಮಾತ್ಮನೇ ಎದುರಿಗೆ ಬಂದರೂ ಸಹ ಮೈಸೂರಿನ ಗಡಿ ರಕ್ಷಣೆ ಮಾಡುವುದಕ್ಕೆ ಮನಸ್ಸು ಮಾಡಬೇಕೆಂದು ಹೇಳಿ ನಮ್ಮ ಪಕ್ಷವೇ ಆಗಲೀ ಯಾವ ಪಕ್ಷವೇ ಆಗಲಿ ದೇಶದ ರಕ್ಷಣೆಗೆ, ರಾಜ್ಯದ ಗಡಿ ರಕ್ಷಣೆ ಮಾಡಲಿಕ್ಕೆ ಹಿಂದೆ ಬೀಳುವಂತಹ ಪರಿಸ್ಥಿತಿ ಇಲ್ಲ ಎಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಸಂಗನಗೌಡ (ಲಿಂಗಸೂಗೂರು).—ಸನ್‌ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಈ ಸಭೆಯ ಮುಂದೆ ಎರಡು ಮೂರು ಪ್ರಸ್ತಾವನೆಗಳು ಇವೆ. ಒಂದು ಶ್ರೀಮಾನ್ ಗೋಪಾಲಗೌಡರು ಮಂಡಿಸಿದಂತಹ ನಿರ್ಣಯ, ಇನ್ನೊಂದು ಶ್ರೀಮಾನ್ ಸಿದ್ಧವೀರಪ್ಪನವರು ಮಂಡಿಸಿದಂತಹ ನಿರ್ಣಯ, ಮತ್ತು ಶ್ರೀಮಾನ್ ನಂಗಿಹಳ್ಳಿಯವರು ಮಂಡಿಸಿದಂತಹ ಮತ್ತೊಂದು ಪ್ರಸ್ತಾವನೆ ಇದೆ. ನಾನು ಈ ಪ್ರಸಂಗದಲ್ಲಿ ಕೆಲವು ಅಂಶಗಳನ್ನು ಹೇಳಬೇಕೆಂದು ಇದ್ದೇನೆ. ಇವತ್ತು ನಾಲ್ಕನೆಯ ದಿನ ಚರ್ಚೆ ಮಾಡುತ್ತಾ ಇದ್ದೇವೆ. ಈ ಚರ್ಚೆಯಲ್ಲಿ ಈ ಮನೆಯ ಅನೇಕ ಸದಸ್ಯರು ಕರ್ನಾಟಕದ ಬಗ್ಗೆ ಮತ್ತು ಕೇಂದ್ರ ಸರ್ಕಾರದವರು ಮೈಸೂರು ಮತ್ತು ಮಹಾರಾಷ್ಟ್ರದ ಗಡಿಗಳ ವಾದಗ್ರಸ್ತವಾದ ಪ್ರದೇಶಗಳ ಬಗ್ಗೆ ತಳೆದಿರತಕ್ಕ ನಿಲುವು ಮತ್ತು ಅವರು ಮೊನ್ನೆ ತಾನೇ ಕೇಂದ್ರದಿಂದ ಇಬ್ಬರು ಅಧಿಕಾರಿಗಳನ್ನು ಕಳುಹಿಸಿ ಹೊಸದಾದ ಒಂದು ಯೋಜನೆಯನ್ನು ನಮ್ಮ ಸರ್ಕಾರದ ಅವಗಾಹನೆಗೆ ತರಲಿಕ್ಕೆ ಏನು ಪ್ರಯತ್ನ ಮಾಡಿದ್ದಾರೆ ಅದನ್ನು ನಾವು ನೋಡಿದರೆ ಈ ದಿವಸ ನಮಗೆ ಬಹಳಷ್ಟು ವಿಷಾದವೆನಿಸುತ್ತದೆ. ಮತ್ತು ಈ ಸಭೆಯಲ್ಲಿ ಪ್ರಕಟವಾದಂತಹ ವಿಚಾರಗಳನ್ನು ನೋಡಿದರೆ ಯಾವ ಘನವಾದ ಈ ಸಭೆಯ ಮಾನ್ಯ ಸದಸ್ಯರು ಮೈಸೂರು ರಾಜ್ಯದ ಒಂದು ಅಂಗುಲ ಭೂಮಿಯನ್ನೂ ಬಿಡಲಿಕ್ಕೆ ಸಿದ್ಧರಿಲ್ಲ ಎಂಬುದನ್ನು ಸ್ಪಷ್ಟವಾಗಿ ಸ್ಪಷ್ಟೀಕರಿಸಿದ್ದಾರೆ. ಅದು ಬಹಳ ಸಂತೋಷದ ಸಂಗತಿ. ಆದರೆ ರಾಜಕೀಯ ಭಿನ್ನಾಭಿಪ್ರಾಯಗಳು ನಾವು ಎಷ್ಟೇ ಪ್ರಯತ್ನ ಮಾಡಿ ಅದು ಹೊರಗೆ ಬರದಂತೆ ಪ್ರಯತ್ನ ಮಾಡಿದರೂ ಕೂಡ ಹಿಂದೆ ಇರತಕ್ಕ ದ್ವೇಷ ಅಸೂಯೆಗಳು ಆಗಾಗ ಕೆಲವು ಮುಖಂಡರಿಂದ, ಅವರ ಮುಖದಿಂದ ಹೊರಗೆ ಬರುತ್ತಾ ಇವೆ. ಇದು ದುರ್ದೈವದ ಸಂಗತಿ. ಎಂದು ಈ ಪ್ರಸಂಗದಲ್ಲಿ ಹೇಳಬಯಸುತ್ತೇನೆ. ಏಕೆಂದರೆ ಕೇವಲ ಕೆಲವು ಸದಸ್ಯರು ನಿಜಲಿಂಗಪ್ಪನವರು ಮತ್ತು ವೀರೇಂದ್ರಪಾಟೀಲರವರ ತಪ್ಪಿನಿಂದ ನಮ್ಮ ಕರ್ನಾಟಕಕ್ಕೆ ಅನ್ಯಾಯವಾಗುತ್ತಾ ಇದೆ. ಕೇಂದ್ರದವರು ನಮ್ಮ ವಿರುದ್ಧವಾಗಿ ಕೆಟ್ಟ ಧೋರಣೆ ತಾಳುತ್ತಾ ಇದ್ದಾರೆ ಮತ್ತು ಕೇಂದ್ರದ ಕೆಲವರು ನಮ್ಮ ಮುಖಂಡರನ್ನು ಹೊರಹಾಕಿದರೆ ಎಲ್ಲಾ ಸರಿಹೋಗುತ್ತದೆ ಎಂಬ ಧಾಟಿಯಲ್ಲಿ ಮಾತನಾಡಿದರು, ಇದು ಸರಿಯಲ್ಲ ಎಂದು ಈ ಪ್ರಸಂಗದಲ್ಲಿ ಸ್ಪಷ್ಟೀಕರಿಸಬಯಸುತ್ತೇನೆ. ನಾನು 8 ವರ್ಷದಿಂದ ಈ ಸಭೆಯ ಸದಸ್ಯನಾಗಿ ಅನೇಕ ಮುಖಂಡರ ಭಾಷಣಗಳನ್ನು ಅನೇಕ ವಿಷಯಗಳಮೇಲೆ ಕೇಳುತ್ತಾ ಬಂದಿದ್ದೇನೆ. ಇವತ್ತು ಈ ಗಡಿ ಪ್ರಶ್ನೆ ವಿಷಯದಲ್ಲಿ ಶ್ರೀ ಸಿದ್ಧವೀರಪ್ಪನವರು ಬಹಳಷ್ಟು ಕಳಕಳಿಯಿಂದ ಕನ್ನಡ ತಾಯಿ ಬಗ್ಗೆ, ಕನ್ನಡ ರಾಜ್ಯದ ಬಗ್ಗೆ ಹೆಮ್ಮೆ ಬರುವಂತಹ ರೀತಿಯಲ್ಲಿ ಮಾತನಾಡಿದರು ಅದನ್ನು ನಾನು ಮೆಚ್ಚುತ್ತೇನೆ. ಆದರೆ ಅವರು ಮೇಲಿಂದಮೇಲೆ ಶ್ರೀಮಾನ್ ನಿಜಲಿಂಗಪ್ಪನವರಿಂದಲೇ ಈ ಅನ್ಯಾಯವಾಯಿತು, ಅವರ ದತ್ತುಪುತ್ರರಂತೆ ಇರುವವರು ಶ್ರೀಮಾನ್ ಪಾಟೀಲ್‌ರವರು. ಅವರು ಅಸಮರ್ಥರಾಗಿದ್ದಾರೆ, ಮೊನ್ನೆ ತಾನೇ ಬೆಳಗಾಂನಲ್ಲಿ ಮಾತನಾಡಿ ಪ್ರಚೋದನೆ ಮಾಡತಕ್ಕಂಥ ರೀತಿಯಲ್ಲಿ ಮಾತನಾಡಿದ್ದರಿಂದ ಈ ರೀತಿ ಪರಿಸ್ಥಿತಿ ಉದ್ಭವವಾಗಿದೆ ಎಂದು ಹೇಳಿದರು, ಇದು ಒಪ್ಪತಕ್ಕ ಮಾತಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಅಧ್ಯಕ್ಷರೇ, ಬೆಳಗಾವಿಯಲ್ಲಿ ನಡೆದಂತಹ ಪರಿಷತ್ತು ರಾಜಕೀಯ ಪರಿಷತ್ತು; ಇದು ನಮ್ಮ ಗಡಿನಾಡು, ಗಡಿಭಾಗ, ಗಡಿ ಪ್ರದೇಶ ಅಂತ ತಿಳಿದುಕೊಂಡು ಬೆಳಗಾವಿ ಮೈಸೂರು ರಾಜ್ಯದ ಒಂದು ಮುಕುಟಪ್ರಾಯವಾದಂತಹ ಒಂದು ಪ್ರದೇಶ ಎಂದು ಭಾವಿಸಲಾಗಿದೆ. ಆ ಭಾಗದಲ್ಲಿ ಸೇರಿರತಕ್ಕ ಆ ರಾಜಕೀಯ ಪರಿಷತ್ತಿನಲ್ಲಿ ರಾಜ್ಯದ ಮುಖಂಡರು ಮತ್ತು ನಾಡಿನ ಮುಖ್ಯಮಂತ್ರಿಗಳು ಪರಿಸ್ಥಿತಿಗನುಸಾರವಾಗಿ ಆ ಪ್ರಾಂತ್ಯದಲ್ಲಿ ಕನ್ನಡ ನಾಡಿನ ನೆಲದ ಬಗ್ಗೆ, ಕನ್ನಡ ನಾಡಿನ ಸಮಗ್ರತೆಯ ಬಗ್ಗೆ ಮಾಡಿದಂತಹ ಭಾಷಣ ಮನನೀಯವಾದದ್ದು, ಅದಕ್ಕಾಗಿ ನಾವು ಹೆಮ್ಮೆಪಡತಕ್ಕದ್ದು ಅಷ್ಟೇ ಅಲ್ಲ, ನಮ್ಮ ಕನ್ನಡನಾಡಿನ ಎರಡೂವರೆ ಕೋಟಿ ಜನ ಮೆಚ್ಚ ಬೇಕಾದ್ದು ಹೆಮ್ಮೆ ಪಡಬೇಕಾದ್ದು ಎಂಬ ಅಂಶವನ್ನು ಹೇಳಬಯಸುತ್ತೇನೆ. ಬೆಳಗಾವಿ ಪ್ರದೇಶ ಕೆಚ್ಚಿನರಾಣಿ ವೀರರಾಣಿ ಚನ್ನಮ್ಮನನ್ನು ಪಡೆದಂತಹ ಪ್ರದೇಶ, ಅಲ್ಲಿನ ಜನ ಅಷ್ಟೇ ವೀರಾಗ್ರಣಿಗಳು ಅಂತ ಅನ್ನುವುದನ್ನು ಸ್ಪಷ್ಟೀಕರಿಸುತ್ತೇನೆ. ಆ ಪ್ರದೇಶದಲ್ಲಿ ನಮ್ಮ ಮುಖ್ಯಮಂತ್ರಿಗಳ ಬಾಯಿಂದ ಅಂತಹ ಒಂದು ಅಭಿಪ್ರಾಯ ಹೊರಪಟ್ಟದ್ದು ವಾಸ್ತವಿಕ. ಇನ್ನು ಶ್ರೀ ನಿಜಲಿಂಗಪ್ಪನವರ ಬಗ್ಗೆ ಸಹಿತ ಅವರು ಮಹಾಜನ್ ಕಮೀಷನ್ ನೇಮಕ ಮಾಡುವುದಕ್ಕೆ ಏಕೆ ಒಪ್ಪಿಕೊಂಡರು, ಅವರು ಒಪ್ಪಿಕೊಂಡದ್ದೇ ತಪ್ಪು ಎಂದು ಮೇಲಿಂದ ಮೇಲೆ ಟೀಕೆ ಮಾಡಿದರು. ಈ ಪ್ರಸಂಗದಲ್ಲಿ ಒಂದು ಮಾತು ಹೇಳಬಯಸುತ್ತೇನೆ. 1956ರಿಂದ ಮೈಸೂರು ಮಹಾರಾಷ್ಟ್ರ, ಮೈಸೂರು ಕೇರಳ ಮತ್ತು ಇತ್ಯಾದಿ

(ಶ್ರೀ ಕೆ. ಸಂಗನಗೌಡ)

ಗಡಿಗಳ ಬಗ್ಗೆ ವಾದ ನಡೆಯುತ್ತಾ ಇದ್ದು, ಆ ವಾದಗ್ರಸ್ತ ಪ್ರದೇಶಗಳ ಬಗ್ಗೆ ಒಂದಲ್ಲ ಒಂದು ದಿವಸ ಯಾವುದಾದರೂ ತೀರ್ಮಾನ ಬರಲೇಬೇಕಾಗಿತ್ತು. ಅಂತಹ ಒಂದು ಸನ್ನಿವೇಶದಲ್ಲಿ ನಾವು ಕನ್ನಡಿಗರು ಈ ವಾದವನ್ನು ಪ್ರಾರಂಭ ಮಾಡಿಲ್ಲ. ಮಹಾರಾಷ್ಟ್ರೀಯರೇ ಮುಂದಾಗಿ ಈ ಬಗ್ಗೆ ಏನಾದರೂ ಒಂದು ಇತ್ಯರ್ಥ ಮಾಡಿಬಿಡಿ ಎಂದು ಒತ್ತಾಯ ತಂದದ್ದು ನಿಜ, ಇದು ಒಪ್ಪತಕ್ಕ ಸಂಗತಿ. ಶ್ರೀ ನಿಜಲಿಂಗಪ್ಪನವರು ನಮ್ಮ ಮುಖ್ಯಮಂತ್ರಿಗಳಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾಗಿದ್ದು ಯಾವ ರೀತಿ ಒಂದು ನಿರ್ಣಯಕ್ಕೆ ಬಂದಿದ್ದರು ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

Resolution of the Congress Working Committee (9th October 1966):—

"Taking into consideration the fundamental basis of the reorganisation o States in India and with a view to solving the existing border disputes between the States of Maharashtra and Mysore and the States of Mysore and Kerala, the Working Committee requests the Government to set up a Commission which shall hear concerned parties and give its *final decision*."

ಈ ತತ್ವಗಳ ಆಧಾರದ ಮೇಲೆಯೇ ಮುಂದೆ ನೇಮಕವಾಗತಕ್ಕ ಕಮಿಷನ್ ಮೈಸೂರು ಮತ್ತು ಮಹಾರಾಷ್ಟ್ರ ಹಾಗೂ ಮೈಸೂರು ಮತ್ತು ಕೇರಳದ ವಾದಗ್ರಸ್ತ ಪ್ರದೇಶಗಳ ಬಗ್ಗೆ ನಿರ್ಣಯ ಕೊಡಬೇಕೆಂದು ಹೇಳಿದ್ದಾರೆ. ಇಂತಹ ಒಂದು ಬ್ರಾಡ್ ಪ್ರಿನ್ಸಿಪಲ್ ಬಗ್ಗೆ ನಿರ್ಣಯ ತೆಗೆದುಕೊಂಡು ಕೇಂದ್ರಸರ್ಕಾರ ಕಮಿಷನ್ ನೇಮಕ ಮಾಡಲಿಕ್ಕೆ ಒತ್ತಾಯ ತಂದಿದ್ದಾರೆ. ಕಮಿಷನ್ ನೇಮಕವಾದ ಮೇಲೆ ಯಾವ ರೀತಿಯಿಂದ ಮಹಾರಾಷ್ಟ್ರೀಯರು ಅದಕ್ಕೆ ಸಂತೋಷಪಟ್ಟು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು ಎಂಬುದನ್ನು ವಿವರಿಸಬಯಸುವೆ.

ಅಕ್ಟೋಬರ್ 66 ರಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಹೀಗೆ ಹೇಳಿದ್ದಾರೆ :

"Sri V. P. Naik told newsmen in Delhi 'that the decision would satisfy to a large extent the Maharashtra Congressmen'. He further said, 'The Working Committee's decision should be welcomed by all as it marked a final and decisive step towards settling the disputes agitating the minds of the people of Maharashtra, Mysore and Kerala for a decade'."

ನಂತರ ಕೆಲವು ಪ್ರೆಸ್‌ನವರು ನಾಯಕ್‌ರವರನ್ನು ಕೇಳಿದಾಗ ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಕೆಲವು ಆಯೋಗಗಳನ್ನು ಮಾಡಿದಾಗ ಕೊಟ್ಟಿದ್ದಾರೆ, ಆದರೆ ಮಹಾಜನ್ ಕಮಿಷನ್ ನೇಮಕವಾದಾಗ ಕೊಟ್ಟಿಲ್ಲ ಎಂಬ ವಿಚಾರ ಬಂದಾಗ ಹೀಗೆ ಹೇಳಿದ್ದಾರೆ :

"Answering a question whether it was not the first time a Commission was being appointed without terms of reference, Mr. Naik said that it was already indicated that the proposed Commission would take into consideration the fundamental basis of the reorganisation of States. He was satisfied with the appointment of the Commission. Mr. Naik further said that the verdict of the Commission would be binding not only on both the States but on the Union Government as well."

ಮಹಾಜನ್ ಕಮಿಷನ್ ನೇಮಿಸಲು ಮಹಾರಾಷ್ಟ್ರದವರೇ ಒತ್ತಾಯಮಾಡಿದರು, ಅದು ನೇಮಕವಾದಮೇಲೆ ಸಂತೋಷಪಟ್ಟರು. ಇಷ್ಟೇ ಅಲ್ಲ, ಚವಾಣ್‌ರವರೂ ಕೂಡ ಗೃಹಮಂತ್ರಿಗಳಾಗಿ ಹೇಳಿರುವುದು ಸಹ ಪತ್ರಿಕೆಯಲ್ಲಿ ಬಂದಿದೆ. ಅವರು ಸಹ ಅದಕ್ಕೆ ಕಾರಣರು. ಇಷ್ಟೆಲ್ಲಾ ಇದ್ದರೂ ಕೂಡ ನಮ್ಮ ಕೆಲವು ಸ್ನೇಹಿತರು ನಿಜಲಿಂಗಪ್ಪನವರಮೇಲೆ ಮತ್ತು ವೀರೇಂದ್ರ ಪಾಟೀಲರಮೇಲೆ

ಟೀಕೆಮಾಡಿ ಅವರ ತಪ್ಪಿನಿಂದ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಹೇಳಿದರು. ಆದರೆ ಅವರು ಅದೇ ಮಹಾರಾಷ್ಟ್ರದ ಬಂಧುಗಳ ಬಗ್ಗೆ ಒಂದು ಚಕಾರ ಶಬ್ದವನ್ನು ಸಹ ಹೇಳಲಿಲ್ಲ. ಇದು ದುರ್ದೈವದ ಸಂಗತಿ. ಇಂದು ನಮ್ಮ ಮಾನ್ಯ ಸ್ನೇಹಿತರು ಗೋಪಾಲಗೌಡರ ನಿರ್ಣಯ ಸರಕಾರದ ನಿರ್ಣಯ ಸರಕಾರದವರೇ ಅವರ ಮೂಲಕ ನಿರ್ಣಯ ಮಂಡಿಸಲು ಪ್ರಯತ್ನ ಮಾಡಿದ್ದಾರೆ ಎಂದು ಸಂಶಯ ವ್ಯಕ್ತಮಾಡಿದರು, ಅದು ನಿಜವಲ್ಲ, ಗೋಪಾಲಗೌಡರ ಭಾಷಣವೇ ಅದಕ್ಕೆ ಸಾಕ್ಷಿ, ಅವರು ಸ್ಪಷ್ಟೀಕರಿಸಿದ್ದಾರೆ, ಅವರ ನಿರ್ಣಯ ಬಹಳ ಉತ್ತಮ ಹಾಗೂ ಯೋಗ್ಯವಾದುದು, ಕೇಂದ್ರ ಸರಕಾರದ ನಿಲುವಿನಿಂದ ನಮಗೆ ಅನ್ಯಾಯವಾಗುತ್ತದೆ, ಮಹಾಜನ್ ವರದಿಯನ್ನು ಯಥಾವತ್ತಾಗಿ ಕಾರ್ಯಗತ ಮಾಡಬೇಕು, ಈ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರನ್ನೂ ಒಳಗೊಂಡ ಒಂದು ನಿಯೋಗ ದಿಲ್ಲಿಗೆ ಹೋಗಿ ಕೇಂದ್ರದ ಮುಖಂಡರು, ಲೋಕಸಭೆ ಸದಸ್ಯರು ಮತ್ತು ಪ್ರತಿನಿಧಿಗಳಲ್ಲಿ ಒತ್ತಾಯ ಮಾಡಿ ಪ್ರಭಾವ ಬೀರಿ, ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ, ಸರಿಪಡಿಸಬೇಕೆಂಬುದನ್ನು ಅವರಿಗೆ ಮನವರಿಕೆಯಾಗುವಂತೆ ಮಾಡಿ ಕನ್ನಡನಾಡಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು, ಮಹಾಜನ್ ವರದಿಯನ್ನು ಅಕ್ಷರಶಃ ಜಾರಿಗೆ ತರುವಂತೆ ಒತ್ತಾಯ ಮಾಡಬೇಕು ಎಂದು ನಿರ್ಣಯ ಮಂಡಿಸಿದ್ದಾರೆ. ಇದನ್ನು ಅನುಮೋದಿಸುತ್ತೇನೆ. ನಂದಿಹಳ್ಳಿಯವರು ತಂದಿರುವ ನಿರ್ಣಯದ ಬೇಸಿಸನ್ನು ಒಪ್ಪುವುದಕ್ಕಾಗುವುದಿಲ್ಲ. ಪಾಟಸ್ಕರ್ ಫಾರ್ಮುಲ ರಿಜೆಕ್ಟೆಡ್ ಫಾರ್ಮುಲ, ಅದನ್ನು ಒಪ್ಪುವುದು ಸರಿಯಲ್ಲ. ಫಜಲಾಲಿ ಆಯೋಗ ಮತ್ತು ಮಹಾಜನ್ ಆಯೋಗ, ಈ ಎರಡು ಆಯೋಗಗಳು ಈ ತತ್ವವನ್ನು ನಿರಾಕರಿಸಿದ್ದಾರೆ. ಸಿದ್ಧವೀರಪ್ಪನವರು ತಂದಿರುವ ವಿಷಯವನ್ನು ಏಕೆ ಒಪ್ಪುವುದಕ್ಕಾಗುವುದಿಲ್ಲವೆಂಬುದನ್ನು ಹೇಳುತ್ತೇನೆ. 1967ರಲ್ಲಿ ಈ ಮಾನ್ಯ ಸಭೆಯಲ್ಲಿ ಸರ್ವಾನುಮತದಿಂದ ಒಂದು ನಿರ್ಣಯವನ್ನು ಅಂಗೀಕರಿಸಿದ್ದೇವೆ, ಅದರಲ್ಲಿ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಮಹಾಜನ್ ಕಮಿಷನ್ನಿನ ಶಿಫಾರಸನ್ನು ಯಥಾವತ್ತಾಗಿ ಒಪ್ಪಬೇಕು ಎಂದು 1967 ರಲ್ಲಿ ಈ ಸಭೆಯಲ್ಲಿ ನಿರ್ಣಯ ಮಾಡಿದಮೇಲೆ ಪುನಃ ಅದಕ್ಕೆ ಹಿಂದೆ ಹೋಗಿ ಸ್ಟೇಟಸ್ಕೋ ಮೈನ್ಟೈನ್ ಮಾಡಬೇಕು ಎಂದು ಹೇಳುವುದು ಸಮಂಜಸವಲ್ಲ. ಆದುದರಿಂದ ಅದನ್ನು ಖಂಡಿಸುತ್ತೇನೆ.

ಇನ್ನು ಮಹಾಜನ್‌ರವರು ತಮಗೆ ಸರಿಕಂಡಹಾಗೆ ಗಡಿಗಳ ಬಗ್ಗೆ ನಿರ್ಣಯ ಮಾಡಿದ್ದಾರೆ. ಅವರು ಬೆಳಗಾಂ ಬಗ್ಗೆ ಹೇಳಿರುವುದು ಹೀಗಿದೆ :

> "The result is that I find no cogent reason for handing over the city of Belgaum to the Maharashtra State simply to satisfy the emotional urges of a certain language group."

ಈಗ ಕೇಂದ್ರ ಸರಕಾರದವರು ಹಳಿಯಾಳ ತಾಲ್ಲೂಕಿನಲ್ಲಿರುವ 90 ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಬೇಕೆಂದು ಮಾತ್ರ ಈಗ ಅಭಿಪ್ರಾಯಪಟ್ಟಿದ್ದಾರೆ. ಆದರೆ ಮಹಾಜನ್‌ರವರು ಹೀಗೆ ತಿಳಿಸಿದ್ದರು :

> "After a careful consideration of the arguments of the learned counsels and the material collected by me or placed before me by the contending parties, I have reached the conclusion that the villages in the three talukas of Karwar, Supa and Haliyal claimed by Maharashtra cannot be recommended to be included in that State"

ಮಹಾಜನ್‌ರವರು ಅಪ್ರತಿಮ ಕಾಯಿದೆ ಪಂಡಿತರು, ನ್ಯಾಯ ತೀರ್ಮಾನದಲ್ಲಿ ಅಗ್ರಗಣ್ಯರು. ರಾಷ್ಟ್ರದ ಅತ್ಯುಚ್ಚ ನ್ಯಾಯಾಲಯದ (Supreme Court)ನ ಮುಖ್ಯ ನ್ಯಾಯಾಧೀಶರಾಗಿದ್ದರು. ಅವರ ವ್ಯಕ್ತಿತ್ವದ ಬಗ್ಗೆ ಅವರ ನಿರ್ಣಯ ಹೊರಗೆ ಬರುವವರೆಗೆ ಮಹಾರಾಷ್ಟ್ರದವರು ಒಂದು ಚಕಾರ ಶಬ್ದ ಕೂಡ ಹೇಳಲಿಲ್ಲ. ಅವರ ನೇಮಕದ ಬಗ್ಗೆ ಅವರು ತಕರಾರು ಮಾಡಲಿಲ್ಲ. ಅವರ ಶಿಫಾರಸು ತಮಗೆ ವಿರುದ್ಧವಾಗಿದೆಯೆಂದು ತಿಳಿದಮೇಲೆ ಅವರ ಹೆಸರನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದನ್ನು ಒಪ್ಪುವುದಕಾಗುವುದಿಲ್ಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಕನ್ನಡನಾಡಿಗೆ ಆಗುವ ಅನ್ಯಾಯವನ್ನು ತಪ್ಪಿಸುವ ಜವಾಬ್ದಾರಿ ಈ ಮಾನ್ಯ ಸದಸ್ಯರ ಮೇಲಿದೆ. ಆದುದರಿಂದ ಎಲ್ಲರೂ ಒಗ್ಗಟ್ಟಾಗಿ ನಮ್ಮ ರಾಜಕೀಯ ಭಿನ್ನಾಭಿಪ್ರಾಯವೇನೇ ಇರಲಿ, ಅದನ್ನು ಬದಿಗಿಟ್ಟು ನಮ್ಮ ರಾಜ್ಯದ ಹಿತ ಕಾಪಾಡಲು ಒಂದಾಗೋಣ ಎಂದು ಹೇಳಿ ಒಮ್ಮನಸ್ಸಿನಿಂದ ಗೋಪಾಲಗೌಡರ ನಿರ್ಣಯವನ್ನು ಸ್ವಾಗತಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಸನ್ಮಾನ್ಯ ಅಧ್ಯಕ್ಷರೇ, ಸ್ವಯಂಕೃತ ಅಪರಾಧದ ಪಾಪದ ಫಲವನ್ನು ಇಂದು ಅನುಭವಿಸುತ್ತಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಕನಸಿನಲ್ಲೂ ಕಾಣದ ದುಷ್ಪರಿಣಾಮಗಳನ್ನು ದೇಶ ವಿಭಜನೆಯಾದನಂತರ ಕಂಡೆವು. ಅವನ್ನು ಕಂಡು ಸಾಕಷ್ಟು ಅನುಭವ ಬಂದನಂತರ ಕೂಡ ಭಾಷಾವಾರು ಪ್ರಾಂತ ರಚನೆಯಾಗ ಬೇಕೆಂದು ಪ್ರಯತ್ನ ನಡೆಯಿತು. ಫಸ್ಲಾಲಿ ಕಮಿಷನ್ ಭಾಷಾವಾರು ಪ್ರಾಂತ ರಚನೆಗಾಗಿ ಬಂದಾಗ ಅದರಿಂದ ಇಲ್ಲದಿರುವ ವೈಷಮ್ಯವು ಬೆಳೆದು ದೇಶದ ಸಮಗ್ರತೆಗೇ ಕಳಂಕ ಬರುವುದು, ಇಂಥ ಕೆಲಸಕ್ಕೆ ಕೈಹಾಕಬಾರದು, ಆಡಳಿತ ದೃಷ್ಟಿಯಿಂದ, ಸೌಕರ್ಯ ದೃಷ್ಟಿಯಿಂದ ಒಂದು ಶಿಫಾರಸು ಮಾಡಿ ಎಂದು ನಾವು ಮನವಿ ಮಾಡಿದೆವು. ಆದರೆ ಆಗಿನ ಕಾಲದಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಬಹಳ ಶ್ರೇಷ್ಠ ಎಂಬ ಭಾವನೆಯಿತ್ತು. ಅದಕ್ಕನುಸಾರವಾಗಿ ಅವರು ಕೈಲಾದ ಮಟ್ಟಿಗೆ ನ್ಯಾಯವನ್ನನುಸರಿಸಿ ಒಂದು ತೀರ್ಮಾನ ಮಾಡಿ ನಿರ್ಣಯವಾಗಿ ಸ್ಟೇಟ್ಸ್ ರೀಆರ್ಗನೈಜೇಷನ್ ಆಕ್ಟ್ ಜಾರಿಗೆ ಬಂತು.

ಸ್ಟೇಟ್ಸ್ ರೀ ಆರ್ಗನೈಜೇಷನ್ ಆಕ್ಟ್ ಜಾರಿಗೆ ಬರುವುದಕ್ಕೆ ಮೊದಲು ಭಾರತದ ಜನ ಭಾಷೆಯ ಆಧಾರದ ಮೇಲೆ ಕಚ್ಚಾಡುತ್ತಿರಲಿಲ್ಲ. ಇಂದು ಬೇರೆ ಕಡೆ ಹೋಗಬೇಕು, ನಮ್ಮ ಪ್ರಾಂತ ಪರಪ್ರಾಂತ ಎಂದು ಕಚ್ಚಾಡುತ್ತ ಇರುವಂತ ಸ್ಥಿತಿ ಸಾಮಾನ್ಯ ಜನತೆಯಲ್ಲಿ ಬಂದು ದೇಶದಲ್ಲಿ ದೊಡ್ಡ ಗೊಂದಲಕ್ಕೆ ಅವಕಾಶವಾಗಿದೆ. ಫಜಲ್ ಅಲಿ ರಿಪೋರ್ಟ್ ಆಯಿತು, ಪಾಟಸ್ಕರ್ ರಿಪೋರ್ಟ್ ಆಯಿತು ; ಬಂದಂಥ ಎಲ್ಲ ರಿಪೋರ್ಟ್‌ಗಳ ಪರಿಣಾಮ ಇರತಕ್ಕ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ವಲಯ ಸಮಿತಿಗಳ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಸೂಚಿತವಾಗಿತ್ತು. 14 ವರ್ಷಗಳ ಅಧಿಕಾರ ದಲ್ಲಿ ಇದರ ಕಡೆ ಸರಿಯಾದ ಗಮನವನ್ನು ಕೊಟ್ಟಿದ್ದರೆ ಈ ದಿವಸ ನಾವು ಈ ವಿಷಯವನ್ನು ಚರ್ಚೆ ಮಾಡಲು ಅವಕಾಶವೇ ಇರುತ್ತಿರಲಿಲ್ಲ. ಈ ದೊಡ್ಡ ತಪ್ಪು ಆಡಳಿತ ಪಕ್ಷದವರು ಮಾಡಿದ್ದಾರೆಂದು ಹೇಳುತ್ತೇನೆ. ಅದನ್ನು ಅವರು ಒಪ್ಪಿಕೊಳ್ಳಲೇಬೇಕು ಮತ್ತು ಅವರ ತಪ್ಪಿಗಾಗಿ ಪಶ್ಚಾತ್ತಾಪ ಪಡಲೇ ಬೇಕು.

ಮಹಾಜನ್ ಕಮಿಷನ್ ಶಿಫಾರಸು ವಿಚಾರದಲ್ಲಿ ಮಾತನಾಡುತ್ತ ಅನೇಕ ಮಾನ್ಯ ಮಿತ್ರರು ಹೇಳಿದ್ದಾರೆ; ಕಾನೂನುಬದ್ಧವಾಗಿ ಅದಕ್ಕೆ ಏನೂ ಲೀಗಲ್ ಸ್ಯಾಂಕ್ಷನ್ ಇಲ್ಲ, ಅದನ್ನು ಒಂದು ಅವಾರ್ಡ್ ಎಂದು ಭಾವನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದೂ ಕೂಡ ಹೇಳಿದರು. ಹಿಂದೆ ಭಾಷಣ ಮಾಡಿದಂಥ ಶ್ರೀ ಸಂಗನಗೌಡರು ಮತ್ತು ನಿನ್ನೆ ಮಾತನಾಡಿದಂಥ ಶ್ರೀ ಅಗ್ನಿಹೋತ್ರಿ ಯವರು ಆಯೋಗವನ್ನು ನಿರ್ಮಾಣ ಮಾಡುವುದಕ್ಕೆ ಇದ್ದ ಹಿನ್ನೆಲೆ ಏನು ಎನ್ನುವ ವಿಚಾರವನ್ನು ಸಂಶಯಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಸಭೆಯ ಮುಂದೆ ಇಟ್ಟಿದ್ದಾರೆ. ರಾಜ್ಯ ಪುನರ್ವಿಂಗಡಣಾ ಆಯೋಗದ ವರದಿ ಪ್ರಕಾರ ಅತೃಪ್ತಿಗೊಂಡಂಥ ಮಹಾರಾಷ್ಟ್ರೀಯರು ತಮಗೆ ಕೆಲವು ಭಾಗಗಳು ಬರಬೇಕೆಂದು ತಾವೇ ಅದಕ್ಕೋಸ್ಕರ ಎಲ್ಲ ಕಷ್ಟವನ್ನೂ ಪಟ್ಟು, ಈ ಒಂದು ಆಯೋಗವನ್ನು ರಚಿಸಬೇಕು, ಈ ವಿಷಯ ಅಂತ್ಯವಾಗಿ ತೀರ್ಮಾನವಾಗಬೇಕು ಎಂದು ನಾನಾ ಪದಗಳಲ್ಲಿ ಹೇಳಿ ಮೈಸೂರಿನವರನ್ನು ಅದಕ್ಕೆ ಒಪ್ಪಿಸಿದರು. ಮೈಸೂರಿನವರು ಆಗಿನ ಸನ್ನಿವೇಶದಲ್ಲಿ ಅದಕ್ಕೆ ಒಪ್ಪಬೇಕಾಗಿತ್ತೋ, ಒಪ್ಪಬಾರದಾಗಿತ್ತೋ ಎಂದು ಈಗ ಚರ್ಚೆ ಮಾಡಿ ಉಪಯೋಗವಿಲ್ಲ. ಉಭಯತ್ರರೂ ಒಪ್ಪಿ ಈ ಆಯೋಗದ ನೇಮಕ ವಾಯಿತು. ಉಭಯತ್ರರ ಒಪ್ಪಿಗೆಯಂತೆ ಆಖೈರು ತೀರ್ಮಾನವಾಗಿದೆ. ಮೆಹರ್‌ಚಂದ್ ಮಹಾಜನ್ ಕಮೀಷನ್ನಿನ ಶಿಫಾರಸುಗಳು ಅವಾರ್ಡ್ ಎಂದು ನೈತಿಕವಾಗಿ ತೀರ್ಮಾನವಾಗಿದೆ. ಅವು ಶಿಫಾರಸು ರೂಪದಲ್ಲಿವೆ ಎಂದು ಹೇಳುವುದು ಸರಿಯಲ್ಲ. ಇದು ಜಂಟಲ್‌ಮೆನ್ಸ್ ಅಗ್ರಿಮೆಂಟ್. ಇಂಥದನ್ನು ಮಹಾರಾಷ್ಟ್ರದವರು ಒಪ್ಪುವುದಿಲ್ಲ ಎಂದು ಹೇಳತಕ್ಕ ಮಾತು ನಿಜವಾಗಿಯೂ ನಾಗರಿಕತೆಗೆ ಅವಹೇಳನವನ್ನುಂಟುಮಾಡತಕ್ಕ ಮಾತು. ರಾಜಕೀಯ ಸನ್ನಿವೇಶಗಳ ಮಾರ್ಪಾಟಿನಿಂದ ಕಾಲಾವಕಾಶ ದೊರಕಿದಂತೆಲ್ಲ, ಕಬ್ಬಿಣ ಕಾದಿರುವಾಗ ಹದವಾಗಿರುವುದರಿಂದ ಹೇಗೆ ಬೇಕಾದರೂ ಬಡಿಯಬಹುದು ಎಂದು ಯೋಚನೆ ಮಾಡುವುದು ಯಾರಿಗೂ ಸರಿಯಲ್ಲ ಎಂದು ನಾನು ಹೇಳಬಯಸುತ್ತೇನೆ.

ಈ ಜಿಜ್ಞಾಸೆ ದೊಡ್ಡದಾಗಿ ಬೆಳೆಯುತ್ತಿದೆ. ಮೊನ್ನೆ ಮಾತನಾಡಿದ ಕಾಂಗ್ರೆಸ್ (ಆರ್) ನಾಯಕರಾದ ಶ್ರೀಮಾನ್ ಸಿದ್ಧವೀರಪ್ಪನವರು ತಮ್ಮ ವಾಕ್‌ಝರಿಯ ವೈಖರಿಯಿಂದ, ಉತ್ತಮ ತರದ ಜಾಣ್ಮೆಯಿಂದ, ರಾಜಕೀಯ ಲೌಕಿಕವನ್ನು ಪ್ರದರ್ಶಿಸಿದ್ದಾರೆ. ಸಿಂಡಿಕೇಟ್, ಇಂಡಿಕೇಟ್ ವಿಚಾರಗಳನ್ನು ಹಲವಾರು ಹೇಳಿದ್ದಾರೆ. ಅದಕ್ಕೆ ಪ್ರವೇಶ ಮಾಡಲು ನಾನು ಇಷ್ಟಪಡುವುದಿಲ್ಲ. ಇವೆರಡೂ ಒಂದು ಹಳೇ ನಾಣ್ಯದ ಎರಡು ಮುಖಗಳು, ಕಾಂಗ್ರೆಸ್ ಇಂಡಿಕೇಟ್ ಮತ್ತು ಸಿಂಡಿಕೇಟ್ ಆದಕಾರಣ ಅವರಲ್ಲಿ ಪಾರ್ಟಿ ವೈಷಮ್ಯ, ವ್ಯತ್ಯಾಸಗಳಿದ್ದರೆ ಇರಲಿ, ನಮಗೆ ಬೇಕಾಗಿಲ್ಲ. ದೇಶಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಒಂದು ವಿಷಯವನ್ನು ಅವರು ಹೊರಗೆಡಹಿದರು. ಪ್ರಧಾನಿ

ಯವರು ಈಗಿರತಕ್ಕ ಸಿಂಡಿಕೇಟ್ ಕಾಂಗ್ರೆಸ್ಸಿನ ಮೇಲೆ ಸೇಡು ತೀರಿಸತಕ್ಕ ರೀತಿ ಮಾಡಿದ್ದಾರೆ ಎಂದು. ನಿಜವಾಗಿಯೂ ಕೂಡ ಇದು ಬಹಳ ಗಹನವಾದ ವಿಚಾರ. ಅದನ್ನು ಯೋಚನೆ ಮಾಡಬೇಕಾದ್ದೇ. ನನಗೆ ತಿಳಿದಮಟ್ಟಿಗೆ ನಮ್ಮ ಪ್ರಧಾನಿಯವರು ಬಹಳ ಮೇಧಾವಿಗಳು, ದೂರದೃಷ್ಟಿಯುಳ್ಳವರು ಅಷ್ಟೇ ಅಲ್ಲ, ಆತ್ಮ ನಿರ್ಧಾರಕ್ಕೆ ಅನುಸರಿಸಿ ನಡೆಯತಕ್ಕ ನಾಯಕಿ. ಮೈಸೂರು ರಾಜ್ಯ ಕೇವಲ ಶ್ರೀಮಾನ್ ನಿಜಲಿಂಗಪ್ಪನವರಿಗೆ ಮತ್ತು ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರಿಗೆ ಸೇರಿದ ಆಸ್ತಿಯಲ್ಲ. ಇದು ರಾಜ್ಯದಲ್ಲಿರುವ ಎರಡೂವರೆ ಕೋಟಿ ಜನರಿಗೆ ಸಂಬಂಧಪಟ್ಟದ್ದು. ಈ ಹೊತ್ತಿನ ದಿವಸ ಸಿಂಡಿಕೇಟಿನ ಮೇಲೆ ಏನಾದರೂ ಸೇಡಿದ್ದರೆ ಆ ಸೇಡಿಗೋಸ್ಕರ, ಏನು ಪತ್ರಿಕೆಗಳಲ್ಲಿ ವರದಿಯಾಗಿದೆ, ಅದರ ಮೇಲೆ ಜಿಜ್ಞಾಸೆ ಅಥವಾ ಆ ರೀತಿ ಹೇಳಲಿಲ್ಲ ಎಂದು ಯಾವ ಪತ್ರಿಕೆಯಲ್ಲಿಯೂ ಯಾರೂ ತಿರಸ್ಕರಿಸಿಲ್ಲ. ಡೆಲ್ಲಿಯಲ್ಲಿ ನಮ್ಮ ಪಾರ್ಲಿಮೆಂಟಿನ ಸದಸ್ಯರು ಮತ್ತು ನಿಯೋಗದ ನಾಯಕರು ಭೇಟಿಯಾದಾಗಲೂ ಯಾರೂ ತಿರಸ್ಕರಿಸಿಲ್ಲವಾದ್ದರಿಂದ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸತ್ಯ ಎಂದು ಒಪ್ಪಿಕೊಳ್ಳಬೇಕಾಗಿದೆ. ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದಂತೆ ಇದು ಸೇಡಿನ ಪರಿಣಾಮ ಎಂದು ಹೇಳುವುದಾದರೆ, ಸಿಂಡಿಕೇಟ್ ಕಾಂಗ್ರೆಸ್ಸಿನವರೇನೋ ಕೇಂದ್ರ ಸರ್ಕಾರಕ್ಕೆ ವಿರೋಧವಾಗಿದ್ದಾರೆ. ಆದರೆ ಅದೇ ಪ್ರಧಾನ ಮಂತ್ರಿಯವರಿಗೆ ಅವರ ಪಂಗಡದವರಾದ ಇಂಡಿಕೇಟ್ ಕಾಂಗ್ರೆಸ್ಸಿನ ಮೇಲೆ ಇರತಕ್ಕ ಪ್ರೀತಿ ಏನು ಎಂದು ಪ್ರಶ್ನೆ ಮಾಡುತ್ತೇನೆ. ಏಕೆಂದರೆ ದೇಶವನ್ನು ಪ್ರತಿಬಿಂಬಿಸತಕ್ಕ ನಾಯಕರು ಕೆಟ್ಟವರಿದ್ದರೆ, ಒಳ್ಳೆಯವರ ಕಡೆ ಸ್ವಲ್ಪ ಗಮನವನ್ನು ಹರಿಸಬಹುದಾಗಿತ್ತು. ನನ್ನ ಮಟ್ಟಿಗೆ ನಾನು ಹೇಳುವುದಾದರೆ ಪ್ರಧಾನಿ ಇಂದಿರಾ ಗಾಂಧಿಯವರು ದೇಶಕ್ಕೆ ಅನ್ಯಾಯ ಮಾಡುವುದಿಲ್ಲ. ಅವರು ಮಹಾ ಮೇಧಾವಿಗಳು. ಪತ್ರಿಕೆಗಳಲ್ಲಿ ಬರುತ್ತಿರುವ ವಿಚಾರಗಳನ್ನು ನೋಡಿ ನಾವು ಅವರನ್ನು ತಪ್ಪು ತಿಳಿಯಬಾರದು. ಡೆಲ್ಲಿಯಲ್ಲಿ ರಾಜಕೀಯ ಒತ್ತಡವಿರುವುದು ಎಲ್ಲರಿಗೂ ತಿಳಿದ ವಿಷಯ. ಅವರಿಗೆ ಬೆಂಬಲವಾಗಿ ಇರುವವರು ಮಹಾರಾಷ್ಟ್ರೀಯರು ಎಂದು ಹೇಳುತ್ತಾರೆ. ಕಳೆದ ಎರಡು ವರ್ಷಗಳಿಂದ ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದು, ಕಾರ್ಯಕಾರಿ ಸಮಿತಿಯಲ್ಲಿ ಇವರೆಲ್ಲರೊಡನೆ ಬೆರೆತು ಮಾತನಾಡುತ್ತಿದ್ದಾಗ್ಯೂ ಕೂಡ ಶ್ರೀಮಾನ್ ನಿಜಲಿಂಗಪ್ಪನವರಿಗೆ ಮಹಾಜನ್ ವರದಿಯನ್ನು ಕಾರ್ಯಗತ ಮಾಡುವಂತೆ ಒತ್ತಾಯವನ್ನು ತರತಕ್ಕ ಶಕ್ತಿ ಇಲ್ಲದೆ ಹೋಯಿತು. ರಾಜಕೀಯ ಶಕ್ತಿಗಳು ಹೇಗಿವೆ ಎಂದರೆ, ರಾಜಕೀಯಕ್ಕಾಗಿ ಮತ್ತು ಸ್ವಂತಕ್ಕಾಗಿ ದೇಶವನ್ನು ಸೂರೆ ಕೊಡುತ್ತಾರೆ ಎನ್ನುವುದಕ್ಕೆ ಇತಿಹಾಸದಲ್ಲಿ ನೂರಾರು ನಿದರ್ಶನಗಳನ್ನು ಕಾಣುತ್ತಿದ್ದೇವೆ. ಪ್ರಧಾನಿಯವರು ಒತ್ತಾಯಕ್ಕೆ ಮಣಿದು ಮೈಸೂರಿನವರಿಗೆ ಖಂಡಿತ ಅನ್ಯಾಯ ಮಾಡುವುದಿಲ್ಲ. ಮೈಸೂರಿನ ಜನತೆ ತಮ್ಮವರು, ನಮ್ಮ ಪರವಾಗಿದ್ದಾರೆ, ನಮ್ಮನ್ನೆಲ್ಲ ಮೆಚ್ಚಿಕೊಳ್ಳುತ್ತಾರೆ, ಅವರಿಗೆ ಅನ್ಯಾಯ ಮಾಡಬಾರದು ಎಂದು ಅವರಿಗೆ ಗೊತ್ತು. ಪತ್ರಿಕಾ ವರದಿಯಂತೆ ಎಂದರೆ ಒಂದು ದಾಳಿ ಎಸೆದರೆ ಮೈಸೂರು ಜನರ ಅಭಿಪ್ರಾಯವೇನಿದೆ, ಎಂಬುದು ತಿಳಿಯುತ್ತದೆ, ಅವರು ಕನ್ನಡ ಕಲಿಗಳು, ಸುಮ್ಮನೆ ಇರುವುದಿಲ್ಲ, ಜೋರಾಗಿ ಬರುತ್ತಾರೆ. ಆವಾಗ ಇದಕ್ಕೆ ಏನು ಹೇಳುತ್ತೀರಿ ಎಂದು ಹೇಳಿ, ಒಂದು ತೀರ್ಮಾನಕ್ಕೆ ಬಂದು ನಿಜವಾಗಿಯೂ ಮೈಸೂರಿಗೆ ನ್ಯಾಯ ದೊರಕಿಸಿಕೊಡುತ್ತಾರೆ ಎಂದು ನನಗೆ ಸಂಪೂರ್ಣವಾಗಿ ನಂಬಿಕೆ ಇದೆ.

ಶ್ರೀಮಾನ್ ಕೆ. ಹನುಮಂತಯ್ಯನವರು ಡೆಲ್ಲಿಯಲ್ಲಿ ಮಹಾರಾಷ್ಟ್ರದವರ ಎದುರಿಗೆ ನೀವು ಮಾಡುತ್ತಿರುವುದು ಅನ್ಯಾಯ ಮಹಾಜನ್ ಕಮಿಷನ್ ಶಿಫಾರಸುಗಳನ್ನು ಖಂಡಿತವಾಗಿ ಜಾರಿಗೆ ತರಬೇಕು ಎಂದು ಘರ್ಜಿಸಿದ್ದಾರೆ. ಕೆಚ್ಚೆದೆಯ ಕನ್ನಡವ ಕಡುಗಲಿ ಎಂಬ ಕವಿನುಡಿಯನ್ನು ಸಾರ್ಥಕಗೊಳಿಸಿದ್ದಾರೆ. ಇದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅದೇ ನೀತಿಯನ್ನೇ ಅವರ ಪಕ್ಷದವರಾಗಿ ಇಲ್ಲಿರತಕ್ಕ ಮಿತ್ರರೂ ಅನುಸರಿಸಿ, ಸರ್ಕಾರ ತಪ್ಪು ಮಾಡಿದೆ, ಇನ್ನೊಬ್ಬರು ತಪ್ಪು ಮಾಡಿದ್ದಾರೆ ಎಂದು ಹೇಳದೆ, ಅವರಲ್ಲಿರಬಹುದಾದ ಭಿನ್ನಾಭಿಪ್ರಾಯಗಳನ್ನು ಮರೆತು ಎಲ್ಲರೂ ಏಕಮಾನವನಂತೆ ವರ್ತಿಸಲು ಶ್ರೀಮಾನ್ ಸಿದ್ಧವೀರಪ್ಪನವರೂ ಮತ್ತು ಇತರೆ ಎಲ್ಲ ಪಕ್ಷದವರೂ ಕೂಡ ದಯವಿಟ್ಟು ಮಾನ್ಯ ಗೋಪಾಲಗೌಡರ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಚನ್ನಬಸಪ್ಪನವರು ಭಾಷಣ ಮಾಡುತ್ತ ಒಂದು ವಿಷಯವನ್ನು ಈದಿನ ಮತ್ತು ನಿನ್ನೆ ಕೂಡ ಹೇಳಿದರು. ಶ್ರೀ ಗೋಪಾಲಗೌಡರು ತಂದಿರುವ ನಿರ್ಣಯ ಸರ್ಕಾರಿ ಪ್ರೋಷಿತ ನಿರ್ಣಯ ಎಂದು. ನಿಜವಾಗಿ ಅದಕ್ಕಿಂತ ಅನ್ಯಾಯ ಬೇರೆ ಇಲ್ಲ ಎಂದು ಹೇಳಬಯಸುತ್ತೇನೆ. ಏಕೆಂದರೆ ಕೆಲವು ದಿನಗಳ ಹಿಂದೆ ಗಡಿ ಸಂಬಂಧವ ವಿಷಯ ಪತ್ರಿಕೆಗಳಲ್ಲಿ ಬಂದಾಗ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ, ಮೊದಲು ಈ ಪ್ರಶ್ನೆಯನ್ನು ತೆಗೆದುಕೊಳ್ಳಿ, ಇದು ಸರ್ಕಾರದ ಪ್ರಶ್ನೆ ಮಾತ್ರವಲ್ಲ, ಇಡೀ ದೇಶದ ಎಲ್ಲ ಪ್ರಜೆಗಳಿಗೂ ಸಂಬಂಧಪಟ್ಟ ಪ್ರಶ್ನೆ. ದಯವಿಟ್ಟು ಸಭೆಯ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಮುಂದೆ ಈ ವಿಷಯವನ್ನು ತರಬೇಕು, ಸಭೆಯ ಅಭಿಪ್ರಾಯವನ್ನು ಪಡೆದು ಮುಂದುವರಿಯಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಂಡೆ. ವಿರೋಧ ಪಕ್ಷದ ನಾಯಕರನ್ನು ಆಹ್ವಾನಿಸಿ ಮುಂದುವರಿಯುತ್ತೇವೆ ಎಂದು ಅವರು ಹೇಳಿದರು. ವಿರೋಧ ಪಕ್ಷದ ನಾಯಕರೇ ಮಾತನಾಡುವಾಗ ಹೇಳಿದ ಹಾಗೆ ಅವರಿಗೆ ಎರಡನೇ ಸಲ ಆಹ್ವಾನ ಕಳಿಸಲಿಲ್ಲ. ಈ ಬಗ್ಗೆ ಮುಖ್ಯ ಮಂತ್ರಿಗಳು ದಯವಿಟ್ಟು ವಿವರಣೆ ಕೊಡಬೇಕು. ಯಾಕಂದರೆ ಇದು ದೇಶಕ್ಕೆ ಸಂಬಂಧಪಟ್ಟ ವಿಷಯ. ಎಲ್ಲರ ಬೆಂಬಲದಿಂದ ಮುಂದುವರಿಯುವುದು ಅವರ ಕರ್ತವ್ಯ. ಎಲ್ಲರನ್ನೂ ಒಂದುಗೂಡಿಸ ಬೇಕಾದುದು ಅವರ ಕರ್ತವ್ಯ. ಈ ರಾಜ್ಯದಲ್ಲಿ ಇರುವಂಥ ಮಹಾರಾಷ್ಟ್ರ ಏಕೀಕರಣಸಮಿತಿಯವರು ತಾವು ಕನ್ನಡಿಗರು ಎಂಬ ಭಾವನೆ ಬೆಳೆಸಿಕೊಳ್ಳ ಬೇಕಾಗಿತ್ತು. ಇಂದು ಮಹಾರಾಷ್ಟ್ರದಲ್ಲಿ ಕನ್ನಡಿಗರು ಇರುವುದಿಲ್ಲವೇನು? ಮಹಾರಾಷ್ಟ್ರದ ಜನತೆ ಮೈಸೂರಿಗೆ ವಿರೋಧವಾಗಿ ನಾವು ಮೈಸೂರಿನವರು ಅಲ್ಲ ಎಂಬ ಭಾವನೆ ಇಟ್ಟುಕೊಳ್ಳುವುದು ಸರಿಯಲ್ಲ. ಇವರು ನಮ್ಮ ಸಹೋದರರು ಎಂದು ಭಾವನೆ ಮಾಡಿಕೊಳ್ಳಬೇಕೆಂದು ಅವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

6.00 P.M.

ಇಂದಿನ ನಮ್ಮ ವಿದ್ಯಾರ್ಥಿಗಳು ಮುಂದಿನ ನಮ್ಮ ಜನಾಂಗ ಆಗಿದ್ದಾರೆ. ದೇಶದ ಭವಿಷ್ಯ ಅವರ ಮುಂದೆ ಇದೆ. ವಿದ್ಯಾರ್ಥಿಗಳು ಆಟೋಮ್ಯಾಟಿಕ್ ಇಲೆಕ್ಟ್ರಿಕ್ ಕರೆಂಟ್ ಹಾಗೆ ಇದ್ದಾರೆ. ಒಂದು ಭಾಗದಲ್ಲಿ ಏನಾದರೂ ನಡೆಯಿತು ಅಂದರೆ ಅದು ಎಲ್ಲ ಕಡೆ ವಿಸ್ತಾರವಾಗುತ್ತದೆ. ಈಗ ಬಿಜಾಪುರ, ಹುಬ್ಬಳ್ಳಿ, ಧಾರವಾಡಗಳಲ್ಲಿ ಇದು ಹಬ್ಬಿಕೊಂಡಿದೆ. ಬೆಳಗಾಂವಿಯಲ್ಲಿ ಮುಂಜಾಗ್ರತೆ ಕಾರ್ಯಕ್ರಮ ತೆಗೆದುಕೊಂಡಿದ್ದರು. ಇಲ್ಲದಿದ್ದರೆ ಅಲ್ಲಿಯೂ ಅನಾಹುತವಾಗುತ್ತಿತ್ತು. ಯಾಕಂದರೆ ಇದು ಅಲ್ಲಲ್ಲಿ ಹತ್ತಿಕೊಂಡು ಹೋಗುತ್ತದೆ. ಎಲ್ಲರೂ ಶಾಂತಿಯಿಂದ ಇರಲು ಒಂದು ಅಪೀಲು ಹೊರಡಿಸಬೇಕಾಗಿತ್ತು. ಈ ರೀತಿ ಕೇಂದ್ರ ಸರಕಾರ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೋಹನ ಧಾರಿಯಾ ಅವರು ಒಂದು ಮಾತು ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಭೂಮಿ ವಿಸ್ತರಣಾ ಆಕಾಂಕ್ಷೆ ಇಲ್ಲ ಎಂದು. ಆದರೆ ಇದು ಪ್ರತ್ಯಕ್ಷವಾಗಿ ಇದೆ ಎಂದು ಕಂಡು ಬರುತ್ತದೆ. ಅವರ ದೃಷ್ಟಿ ಎಷ್ಟರ ಮಟ್ಟಿಗೆ ಹೋಗುವುದು ಅಂದರೆ ಅವರು ಗೋವಾಕ್ಕೆ ಕೂಡ ಕೈ ಹಾಕುತ್ತಾರೆ. ಇದು ಖಂಡಿತ. ಹಾಗಾದರೆ ಇವರಲ್ಲಿ ಇರತಕ್ಕಂಥ ಮನೋಭಾವನೆ ಏನು? ಸ್ವತಂತ್ರ ಭಾರತದಲ್ಲಿ ವಿಸ್ತೀರ್ಣ ಭಾವನೆ ಸಹಿಸಿಕೊಂಡು ಹೋಗುವುದಾದರೆ ಇದನ್ನು ತಾತ್ವಿಕ ರೀತಿಯಲ್ಲಿ ವಿರೋಧಿಸಲೇ ಬೇಕಾಗುತ್ತದೆ. ಬೊಂಬಾಯಿಯಲ್ಲಿನ ಶಿವಸೇನೆಗೆ ಇಲ್ಲಿ ಯಾರೂ ಹೆದರುವುದಿಲ್ಲ. ಯಾಕಂದರೆ ನಮ್ಮ ಮೈಸೂರು ರಾಜ್ಯದಲ್ಲಿಯೂ ಕೂಡ ಶಿವ ಭಕ್ತರು ಇದ್ದಾರೆ. ಕರ್ನಾಟಕವು ವೀರ ಹನುಮಂತನ ನಾಡು. ಲಂಕಾ ದಹನ ಮಾಡಿದ ಮೇಲೆ ಹನುಮಂತನಿಗೆ ಯಾವ ಡ್ಯೂಟಿ ಇಲ್ಲ. ಅವಕಾಶ ಸಿಕ್ಕರೆ ಅವನು ತಯಾರು ಆಗುತ್ತಾನೆ. ಸೀತಾಪಹರಣದಿಂದ ಲಂಕಾ ದಹನವಾಯಿತು. ಇದು ಹನುಮಂತನ ನಾಡು ಎನ್ನುವುದನ್ನು ಮರಾಠಿಗರು ಗಮನಿಸಬೇಕು. ಆದುದರಿಂದ ಆಕಾಶ ಬಿದ್ದರೂ ಕೂಡ ಮಹಾಜನ ಕಮಿಷನ್ ವರದಿ ಒಪ್ಪಿಕೊಳ್ಳಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri H. SIDDAVEERAPPA.—I only want one minute. I want to know when the meeting will be closed today, because I would like to know whether you will be taking it up on some other day or whether it is the idea that it should be closed today. If so, when it is to be closed? Normally I will not agree beyond 6 P.M. Since we have made certain statements against Ministers, if the Chief Minister will reply, I am in duty bound to be present. That is why, I want to stay and we are prepared to stay after six if you are thinking of closing it today.

Mr. SPEAKER.—The Hon. Leader of the Congress (R) Party has raised a good question about the time up to which we are going to sit. The Leaders of Parties are committed to the position that this debate should be over today. It appears there are a number of members from Congress

(R), S. V. D. and others desire to speak. I do not mind if we sit till 9 O' clock and finish the business. For the time being I extend the time by one hour is up to 7 P.M.

Sri H. SIDDAVEERAPPA.—Please fix the time. 9O' clock will be too late.

Sri VEERENDRA PATIL.—This debate is going on for the last three days. Is it necessary that each and every member of the House should speak on it ? I do not think any new points are going to be raised. Most of it is going to be repetition. It is enough if 5 minutes are given to each member, you will be in a position to satisfy all the members and if my reply begins at 7 O'clock, I will require about 45 minutes at the most.

Sri B. BHASKAR SHETTY.—There are some members especially coming from border areas who want to speak.

Sri M. S. KRISHNAN.—I have not spoken at all.

Mr. SPEAKER.—The Leader of the House is not objecting to that. He wants the hon. Members to be very brief and avoid repetitions and concentrate on relevant points. Within the discretion vested in me, I extend the time up to 7O' clock. We will see how the matter proceeds, However we should finish the debate today even if it means some inconvenience to Hon. Members.

† ಶ್ರೀ ಆರ್. ದಯಾನಂದಸಾಗರ್ (ಚಾಮರಾಜಪೇಟೆ).—ಅಧ್ಯಕ್ಷರ ಮಹಾಶಯರೆ, ನಾವು ಕನ್ನಡಿಗರು, ನಮ್ಮ ನಾಡು ಕನ್ನಡ, ನಮ್ಮ ನುಡಿ ಕನ್ನಡ. ನಮ್ಮ ನಾಡೇ ಇತರರಿಗೆ ಕನ್ನಡಿ ನಾವು ಕನ್ನಡಿಗರು ಸಾಮ್ರಾಜ್ಯದಾಹಿಗಳಲ್ಲ. ನಮಗೆ ಇತರರ ನೆಲ ಬೇಕಾಗಿಲ್ಲ. ಮದ್ರಾಸಿನವರ ನೆಲ ಬೇಕಾಗಿಲ್ಲ: ಮರಾಠಿಗರ ನೆಲ ಬೇಕಾಗಿಲ್ಲ, ಕೇರಳದವರ ನೆಲ ಬೇಕಾಗಿಲ್ಲ. ಆದರ ನಮ್ಮ ನೆಲವನ್ನು ಇತರರು ಕಸಿದುಕೊಳ್ಳಲು ಬಂದರೆ ನಾವು ಸುಮ್ಮನೆ ಇರಲು ಆಗುವುದಿಲ್ಲ. ಇದು ಕನ್ನಡ ನಾಡಿನ ಪ್ರಶ್ನೆ. ಕನ್ನಡ ನಾಡು ನುಡಿಯ ಐಕ್ಯತೆಯನ್ನು ಉಳಿಸಿಕೊಳ್ಳಲು ಯಾವ ಕನ್ನಡಿಗನೂ ಹಿಂದೇ ಬೀಳುವದಿಲ್ಲ. ಎಸ್. ಆರ್. ಸಿ. ರಿಪೋರ್ಟ್ ಪ್ರಕಾರ ಭಾರತ ದೇಶವನ್ನು ಭಾಷಾವಾರ ಪ್ರಾಂತಗಳಾಗಿ ವಿಂಗಡಿಸಲಾಯಿತು. ಈ ದೇಶದಲ್ಲಿ ಒಂದು ಭಾಷೆಯ ಜನರು ಒಂದೇ ಆಡಳಿತದಲ್ಲಿ ಬಂದು ದೇಶದ ಆಡಳಿತ ನಡಸಬೇಕೆಂಬ ನೀತಿ ಇದ್ದಿತು. ಆ ಪ್ರಕಾರ ಭಾಷಾವಾರ ಪ್ರಾಂತಗಳನ್ನು ನಿರ್ಮಿಸಿದ್ದು ಆಯಿತು. ಒಂದೊಂದು ರಾಜ್ಯದ ಗಡಿ ಮ್ಯೂನಿಸಿಪಲ್ ಬೌಂಡರೀಜ್ ಇದ್ದ ಹಾಗೆ ಒಂದೊಂದು ರಾಜ್ಯದ ಗಡಿ ಒಂದೊಂದು ರಾಷ್ಟ್ರದ್ದು ಅಲ್ಲ. ಇಂಥ ಸಣ್ಣ ಪುಟ್ಟ ಗಡೀ ವ್ಯವಹಾರಗಳನ್ನು ತೀರ್ಮಾನ ಮಾಡಿಕೊಳ್ಳುವುದಕ್ಕೆ ಜೋನಲ್ ಕೌನ್ಸಿಲಿನಲ್ಲಿ ಅವಕಾಶವಿದೆ ಎಂದು ಹೇಳಿದ್ದಾರೆ. ಸಂದರ್ಭಗಳು ಹೀಗಿರುವಾಗ ಆ ಮಹಾರಾಷ್ಟ್ರೀಯರು ತಮಗಿನ್ನೂ ಜಾಗಬೇಕು ಎಂದು ನೆಲದಾಹದಿಂದ ಕನ್ನಡದ ನೆಲವನ್ನು ಆಕ್ರಮಿಸಿಕೊಳ್ಳಲು ದುರಾಸೆ ಪಟ್ಟರೆ, ಆ ಬೆಳಗಾಂ ಭಾಗವನ್ನು ನುಂಗಬೇಕೆಂದು ಅವರು ಹವಣಿಸಿದರೆ ನಾವು ಸುಮ್ಮನೆ ಕೊಡುವುದಕ್ಕಾಗುವುದಿಲ್ಲ. ಅಂತೂ ಆ ಮಹಾರಾಷ್ಟ್ರೀಯರು ಸಾಮ್ರಾಜ್ಯಶಾಹಿಗಳ ಹಾಗೆ ವರ್ತನೆ ಮಾಡಿದ್ದಾರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅಂತ ವರ್ತನೆಯನ್ನು ನಾನು ಖಂಡಿಸುತ್ತೇನೆ. ನಮ್ಮ ಕನ್ನಡದ ನೆಲವನ್ನು ಬಿಟ್ಟುಕೊಡುವುದಕ್ಕೆ ನಾವುಗಳು ಯಾರೂ ತಯಾರಿಲ್ಲ. ಹಾಗೊಂದು ವೇಳೆ ಆ ಮರಾಠಿಗರು ನಮ್ಮ ಟೆರಿಟೆರಿಯನ್ನು ಬಲಾತ್ಕಾರವಾಗಿ ಕಸಿದುಕೊಳ್ಳುವುದಕ್ಕೆ ಬಂದರೆ ಈ ದಿವಸ ಕನ್ನಡಿಗರೆಲ್ಲರೂ ಒಗ್ಗಟ್ಟಾಗಿ ಸೇರಿ ಅವರ ಮೇಲೆ ಹೋರಾಟ ನಡೆಸತಕ್ಕ ಕಾಲ ಈಗ ಬಂದಿದೆ ಎಂದು ನಾನು ಭಾವಿಸುತ್ತೇನೆ. ಅಂಥ ಪ್ರಸಂಗ ಉಂಟಾದರೆ ಕನ್ನಡಿಗರು ತಮ್ಮ ತನು ಮನ ಧನಗಳನ್ನೆಲ್ಲಾ ತ್ಯಾಗಮಾಡಿ ಹೋರಾಟ ಮಾಡುವುದಕ್ಕೆ ಕನ್ನಡ ನಾಡನ್ನು ಉಳಿಸುವುದಕ್ಕೆ ಈ ಶಾಸನ ಸಭೆಕೂಡ ತಯಾರಿದೆ. ಆದರೆ ಇದಕ್ಕೆ ಸರ್ಕಾರ ತಯಾರಾಗಿದೆಯೇ ಎಂದು ನಾನು ಪ್ರಶ್ನೆ ಹಾಕುತ್ತೇನೆ ?

(ಶ್ರೀ ಆರ್. ದಯಾನಂದಸಾಗರ್)

ಆದರೆ ನನಗೆ ಈ ಸಂದರ್ಭದಲ್ಲಿ ಒಂದು ದ್ವಾಪರ ಯುಗದ ಕಥೆ ಜ್ಞಾಪಕಕ್ಕೆ ಬರುತ್ತಿದೆ: ಪಾಂಡವರು ಅಜ್ಞಾತವಾಸದಲ್ಲಿದ್ದ ಕಾಲಕ್ಕೆ ಅರ್ಜುನನು ಬೃಹನ್ನಳೆಯ ವೇಷದಲ್ಲಿ ವಿರಾಟರಾಯನ ಅರಮನೆಯಲ್ಲಿದ್ದ. ಅದೇ ಕಾಲದಲ್ಲಿ ಅಲ್ಲಿ ಉತ್ತರಕುಮಾರನು ಸುಂದರ ಮಹಿಳೆಯರ ಮಧ್ಯದಲ್ಲಿ ವಿರಾಜಮಾನನಾಗಿ ಕುಳಿತಿದ್ದ. ಆ ಕಾಲಕ್ಕೆ ಕೌರವರ ಸೈನ್ಯ ವಿರಾಟನಗರವನ್ನು ಮುತ್ತಿತ್ತು. ಆಗ ಉತ್ತರಕುಮಾರನಿಗೆ ಆ ವಿಷಯ ತಿಳಿಯಿತು. ಆಗ ಅವನು ತನ್ನ ಸುತ್ತಲೂ ಕುಳಿತಿದ್ದ ಶೃಂಗಾರ ರಮಣಿಯರ ಮಧ್ಯದಲ್ಲಿ ತನ್ನ ಪೌರುಷವನ್ನು ಕೊಚ್ಚಿಕೊಳ್ಳುವುದಕ್ಕೆ ಪ್ರಾರಂಭಮಾಡಿದ. ಆಗ ಅವರು ಉಚ್ಚರಿಸಿದ ವೀರವಾಣಿಗಳು ಎಂಥಹವು ಎಂದರೆ ನಾನು ಎಂಥಹ ವೀರ ಶೂರ ಎಂಬುದನ್ನು ಆ ಶತೃಗಳಿಗೆ ತೋರಿಸುತ್ತಿದ್ದೆ, ನಾನು ಒಂದಾವರ್ತಿ ಅಸ್ತ್ರಪ್ರಯೋಗ ಮಾಡಿದ್ದರೆ ಮೂರು ಲೋಕಗಳೂ ನಡುಗಬೇಕು, ಆ ಶತೃಗಳನ್ನು ಒಂದೇ ಹೊಡತಕ್ಕೆ ಸದೆಬಡಿಯುತ್ತಿದ್ದೆ, ಆದರೆ ನನಗೊಬ್ಬ ಸರಿಯಾದ ಸಾರಥಿ ಇಲ್ಲ ಎಂದು ಆನಂದದಿಂದ ತನ್ನನ್ನು ತಾನೇ ಹೊಗಳಿಕೊಂಡ. ಅದನ್ನು ಕೇಳಿ ಅಲ್ಲಿದ್ದ ಸುಂದರ ತರುಣಿಯರೆಲ್ಲಾ ವಿಸ್ಮಯಪಟ್ಟರು. ಆಗ ಸಾರಥಿಯಾಗಿ ಬೃಹನ್ನಳೆ ವೇಷದಲ್ಲಿದ್ದ ಅರ್ಜುನನು ಬಂದನು. ಉತ್ತರನನ್ನು ಯುದ್ಧಭೂಮಿಗೆ ಕರೆದುಕೊಂಡು ಹೋಗಿದ್ದು ಆಯಿತು. ಅಲ್ಲಿ ಉತ್ತರನು ಕೌರವರ ಸೈನ್ಯವನ್ನು ಕಂಡ ತಕ್ಷಣವೇ ತನ್ನ ಕಿರೀಟ ಬಿದ್ದರೂ ಕೂಡ ಅರಿವಿಲ್ಲದೆ ಓಡುತ್ತಿದ್ದುದರಿಂದ ಆಗ ಅಲ್ಲಿ ಅರ್ಜುನ ಯುದ್ಧಕ್ಕೆ ನಿಲ್ಲಬೇಕಾದ ಪ್ರಸಂಗವುಂಟಾಯಿತು. ಆ ಕಥೆಯೋಪಾದಿಯಲ್ಲೇ ಮೊನ್ನೆ ಬೆಳಗಾವಿಯಲ್ಲಿ ಎಂ. ಪಿ. ಸಿ. ಮೀಟಿಂಗೂ ನಡೆಯಿತು. ಅಲ್ಲಿ ಹಾಕಲಾಗಿದ್ದ ಶೃಂಗಾರಮಯವಾದ ಮತ್ತು ಪೋಲೀಸರಿಂದ ಅಲಂಕೃತವಾಗಿದ್ದ ಚಪ್ಪರದಲ್ಲಿ ಮೀಟಿಂಗ್ ನಡೆಯಿತು. ಅಲ್ಲಿ ತಮ್ಮನ್ನು ಹೊಗಳತಕ್ಕ ಸ್ನೇಹಿತರೂ ಬಹಳವಾಗಿದ್ದರು. ಇಂಥ ಒಂದು ವಾತಾವರಣದಲ್ಲಿ ಮಾತನಾಡುವುದಕ್ಕೆ ಯಾರಿಗೆ ಮನಸ್ಸು ಬರುವುದಿಲ್ಲ? ಆ ಕಾಲದಲ್ಲಿ ನಮ್ಮ ಮುಖ್ಯಮಂತ್ರಿಗಳು ಆಡಿದಂಥ ಮಾತುಗಳು ನಿಜವಾಗಿಯೂ ಬಹಳ ಪೌರುಷವಾದವುಗಳು—ನಿಜವಾಗಿಯೂ ಧೀರೋದ್ಧಾತ್ತವಾಣಿಗಳು. ನಮ್ಮ ಕನ್ನಡ ನಾಡಿನಲ್ಲಿ ಒಂದು ಅಂಗುಲ ನೆಲವನ್ನು ಯಾರಿಗೂ ಬಿಟ್ಟುಕೊಡುವುದಕ್ಕೆ ನಾನು ಸಿದ್ಧನಾಗಿಲ್ಲ ಮತ್ತು ಆ ಬೆಳಗಾವನ್ನು ನಾನು ಬರ್ಲಿನ್ನಾಗಿ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂಬುದಾಗಿ ಘೋಷಣೆ ಮಾಡಿ ಕನ್ನಡಿಗರಲ್ಲೆಲ್ಲಾ ವೀರತ್ವದ ಪೌರುಷವನ್ನು ತುಂಬಿದ್ದಾರೆ. ದೇಶದ ಮುಖ್ಯ ಮಂತ್ರಿಗಳಾದವರು ಹಾಗೆ ಹೇಳಲೇಬೇಕು. ಆದರೆ ಒಂದು ಮಾತು. ಇವರು ಹಾಗೆ ಆಡಿದ ಮಾತುಗಳು ಅಲ್ಲಿ ಮರಾಠಿಗರ ಕಿವಿಗೆ ಬಿದ್ದವು; ಕೇಂದ್ರದಲ್ಲಿರತಕ್ಕ ಚವಾಣರ ಕಿವಿಗೆ ಬಿದ್ದವು ಮತ್ತು ಆ ಮಹಾರಾಷ್ಟ್ರ ಎಂ. ಪಿ. ಗಳಿಗೂ ಮತ್ತು ಪ್ರಧಾನಿಯವರ ಕಿವಿಗೂ ಬಿದ್ದಿರಬಹುದು. ಆದರೆ ಅಂಥಾದ್ದನ್ನು ತಡೆದು ನಿಭಾಯಿಸತಕ್ಕ ಶಕ್ತಿ ಕನ್ನಡಿಗರಿಗಿಲ್ಲ ಎಂದು ನಾನು ಹೇಳುವುದಿಲ್ಲ, ಕನ್ನಡಿಗರಲ್ಲೂ ಇದೆ. ಕನ್ನಡಿಗರ ಕಚ್ಚೇನು ಅವರ ನಡವಳಿಕೆ ಎಂಥದು ಎನ್ನುವುದಕ್ಕೆ ಸಾಕಷ್ಟು ಇತಿಹಾಸವಿದೆ; ಚರಿತ್ರೆಗಳಿವೆ. ಆದರೆ ಪ್ರಧಾನಿಯವರು ಈ ರೀತಿ ಪ್ರಸ್ತಾಪಗಳೆದ್ದಿವೆ ಇವುಗಳ ನಿಜತ್ವವೇನು ಎಂಬುದನ್ನು ತಿಳಿದುಕೊಳ್ಳಲು ನಮ್ಮ ಮುಖ್ಯ ಮಂತ್ರಿಗಳಿಗೆ ಅವರು ದೆಹಲಿಗೆ ಬರುವಂತೆ ಹೇಳಿಕಳುಹಿಸಿದರು. ಅದಕ್ಕೆ ಮುಖ್ಯಮಂತ್ರಿಗಳು ಏನು ಮಾಡಬೇಕಾಗಿತ್ತು? ಇವರು ದೆಹಲಿಗೆ ಹೋಗಬೇಕಾಗಿತ್ತು. ಹೇಗೆ? ರಾಜ್ಯದ ಮುಖ್ಯ ಮಂತ್ರಿಯಾಗಿ ಅಲ್ಲ; ರಾಜ್ಯದ ಒಬ್ಬ ಕನ್ನಡ ಪುತ್ರನಾಗಿ ಹೋಗಿ ಆ ಪ್ರಧಾನ ಸಚಿವೆಯರಿಗೆ ನಾನು ಕನ್ನಡದ ನೆಲದಲ್ಲಿ ಪರರರಿಗೆ ಒಂದು ಅಂಗುಲ ಜಾಗವನ್ನೂ ಕೊಡತಕ್ಕವನಲ್ಲ, ನಾನು ಈ ದಿವಸ ಇಲ್ಲಿಗೆ ಜನರ ಪ್ರತಿನಿಧಿಯಾಗಿ ಕನ್ನಡಿಗರ ಪ್ರತಿನಿಧಿಯಾಗಿ ಬಂದಿದ್ದೇನೆ, ಎಂದು ಹೇಳಿ ತಾವು ಬಂದಿದ್ದರೆ ತಮಗೆ ನಾನು ಹೂವಿನ ಹಾರವನ್ನು ಹಾಕುತ್ತಿದ್ದೆ. ಆದರೆ ಆಗ ಇಲ್ಲಿ ನಡೆದುದ್ದೇನು? ಮುಖ್ಯಮಂತ್ರಿಗಳಿಗೆ ಆ ಡೆಹಲಿಯಿಂದ ಕರೆ ಬಂದ ಕೂಡಲೆ ಇಲ್ಲಿ ಇವರಿಗೆ ಜ್ವರ ಬಂತು, ಕಾಯಿಲೆ ಬಂತು, ಇವರು ಆ ಬೆಳಗಾವಿಯಲ್ಲಿ ಅರ್ಜುನನ ಹಾಗೆ ಝೇಂಕರಿಸಿದ ಮಾತುಗಳೆಲ್ಲಾ ಆ ಉತ್ತರನ ಪೌರುಷದಂತಾಯಿತು. ಆದರೆ ಇವರು ಹಾಗೆ ಹೆದರಿ ಕುಳಿತರೆ ನಾವು ಸುಮ್ಮನಿರುವುದಿಲ್ಲ. ಹೋರಾಟಮಾಡುತ್ತೇವೆ, ಕನ್ನಡದ ನೆಲವನ್ನು ಉಳಿಸುತ್ತೇವೆ. ನಿಮಗೆ ಆಡಳಿತಪಕ್ಷದವರಿಗೆ ಉಳಿಸುವುದಕ್ಕೆ ಶಕ್ತಿ ಇಲ್ಲ ಎಂಬುದೇನೋ ನಿರ್ಧಾರ ಆದಂತಾಯಿತು. ಆಡಳಿತ ಪಕ್ಷಕ್ಕೆ ಅಂಥ ಒಂದು ಪೊಲಿಟಿಕಲ್ ಸಾಗ್ಯಾಸಿಟಿ ಇಲ್ಲ ಎನ್ನುವುದು ನಿರ್ಧಾರವಾಯಿತು; ಕನ್ನಡಮ್ಮನ ಸೇವೆ ಮಾಡತಕ್ಕ ರಾಜಕೀಯ ತಂತ್ರ ಆ ಒಂದು ನೈಪುಣ್ಯತೆ ಈಗಿನ ಮುಖ್ಯ ಮಂತ್ರಿಗಳಿಗಾಗಲೀ ಅಥವಾ ಇವರ ಹಿಂದಿದ್ದ ಶ್ರೀ ನಿಜಲಿಂಗಪ್ಪನವರಿಗಾಗಲೀ ಇದ್ದಿದ್ದರೆ, ಹಿಂದೆ ರಾಜ್ಯಗಳಲ್ಲಿ ಒಂದೇ ಪಾರ್ಟಿಯ ಸರ್ಕಾರಗಳಿದ್ದಾಗ ಅವರು ಮುಖ್ಯಮಂತ್ರಿಯ ಸ್ಥಾನದಲ್ಲೂ ಇದ್ದರೂ ಮತ್ತು ಭಾರತಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆಗಿದ್ದರು, ಆ ಕಾಲದಲ್ಲಿ ಇವರು ಮನಸ್ಸು ಮಾಡಿದ್ದರೆ ಇದನ್ನು ಯಾವುದಾದರೊಂದು ರೀತಿಯಲ್ಲಿ ತೀರ್ಮಾನ ಮಾಡಬಹುದಾಗಿತ್ತು. ಆಗ ಪ್ರಯತ್ನ ಮಾಡಿದ್ದರೆ ಪ್ರಧಾನಿಯವರು ಒಪ್ಪುತ್ತಿದ್ದರೆಂದು ಕಾಣುತ್ತದೆ.

ನಿಮಗೆ ಸಾಮರ್ಥ್ಯ ಇಲ್ಲ ಎನ್ನುವುದು ಅರ್ಥವಾಗುತ್ತದೆ. ಚವ್ಹಾಣರು ಬುದ್ಧಿವಂತರು, ರಾಜತಂತ್ರಜ್ಞರು, ಅವರ ಡಿಪ್ಲಮಸಿ ಚೆನ್ನಾಗಿದೆ. ಶಕ್ತಿ ಇಲ್ಲದೇ ಇದ್ದಾಗ ಸುಮ್ಮನೆ ಇದ್ದರು. ಏನೂ ಮಾತನಾಡಲಿಲ್ಲ. ಆವಾಗ ಶ್ರೀಮಾನ್ ನಿಜಲಿಂಗಪ್ಪನವರು ಶಕ್ತಿವಂತರಾಗಿದ್ದರು, ಬಲವಂತರಾಗಿದ್ದರು, ಇಂದಿರಾಗಾಂಧಿಯವರ ಜೊತೆಯಲ್ಲಿ ಸರಿಸಮನಾಗಿದ್ದರು. ಮತ್ತು ರಾಷ್ಟ್ರದ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀಮಾನ್ ನಿಜಲಿಂಗಪ್ಪನವರು ಇರುವಾಗ ತಮ್ಮ ಬೇಳೆಕಾಳು ಬೇಯುವುದಿಲ್ಲ ಎಂದು ಕಮ್ಮಕ್, ಕಿಮ್ಮಕ್ ಅನ್ನಲಿಲ್ಲ. ಆದರೆ ಈವೊತ್ತಿನ ದಿವಸ ಚವ್ಹಾಣರು ಶಕ್ತಿವಂತರಾಗಿದ್ದಾರೆ. ಅನೇಕ ಎಂ. ಪಿ.ಗಳನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಂಡಿದ್ದಾರೆ. ಆದುದರಿಂದ ಈವೊತ್ತಿನ ದಿವಸ ಏನಾಗಿದೆ ಎಂದರೆ ಚವ್ಹಾಣರು ತಮ್ಮ ಶಕ್ತಿಯನ್ನು ಉಪಯೋಗ ಮಾಡಿಕೊಂಡಿದ್ದಾರೆ. ಈವೊತ್ತು ಮಹಾರಾಷ್ಟ್ರದವರು ಕನ್ನಡನಾಡನ್ನು ಕಿತ್ತುಕೊಳ್ಳುವ ಪ್ರಯತ್ನ ಮಾಡುವಾಗ ನಮಗೆ ಕನ್ನಡನಾಡನ್ನು ಉಳಿಸತಕ್ಕಂಥ, ಬೆಳೆಸತಕ್ಕಂಥ, ರಕ್ಷಣೆ ಮಾಡತಕ್ಕಂಥ, ಶಕ್ತಿ ನಿಮಗಿಲ್ಲ ಎಂದು ಹೇಳುತ್ತೇನೆ. ಆದುದರಿಂದ ನೀವು, ಮುಖ್ಯಮಂತ್ರಿಗಳು ರಾಜೀನಾಮೆ ಕೊಡಿ. ಮೊನ್ನೆ ದಿವಸ ತಾವು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ ; ಕನ್ನಡನಾಡನ್ನು ಉಳಿಸಿಕೊಳ್ಳದಿದ್ದರೆ ರಾಜೀನಾಮೆ ಕೊಡುತ್ತೇನೆ ಎಂದು. ನಿಮಗೆ ಕನ್ನಡನಾಡನ್ನು ಉಳಿಸುವುದು, ಬೆಳೆಸುವುದು ಆಗದ ಕಾರ್ಯ. ಆದುದರಿಂದ ನೀವು ಸತ್ಯವಂತರಾಗಿದ್ದರೆ, ದಕ್ಷರಾಗಿದ್ದರೆ ನಿಮ್ಮ ಮಾತಿನಮೇಲೆ ನಿಗಾ ಇದ್ದರೆ ರಾಜೀನಾಮೆ ಕೊಡಿ. ಇವೊತ್ತೇ ರಾಜಿನಾಮೆ ಕೊಡಿ. ರಾಜ್ಯವನ್ನು ನಿಮಗೆ ಆಳುವುದಕ್ಕೆ ಶಕ್ತಿ ಸಾಮರ್ಥ್ಯ ಇಲ್ಲ. ಕನ್ನಡ ರಾಜ್ಯಕ್ಕೆ ನೀವು ದ್ರೋಹ ಎಸಗಿದ್ದೀರಿ. ಕನ್ನಡ ರಾಜ್ಯದ ನೆಲ ಹೋಗುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೀರಿ. ರಾಜ್ಯದ ಗಡಿಗೆ ಸಂಬಂಧಪಟ್ಟ ಪ್ರಶ್ನೆ. ಈಗ ನಾವು ತುರ್ತು ಸನ್ನಿವೇಶದಲ್ಲಿದ್ದೇವೆ. ನಮ್ಮ ರಾಜ್ಯಕ್ಕೆ ಗಂಡಾಂತರದ ಕಾಲ. ಈವೊತ್ತಿನ ದಿವಸ ಜನತೆಯ ಹಿತಸಾಧನೆ ಮಾಡುವುದಕ್ಕೆ ಮೊದಲು, ಈ ಮಂತ್ರಿಮಂಡಲ ಈಗಲೇ ರಾಜೀನಾಮೆ ಕೊಡಲಿ ಎಂದು ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಹೇಳುತ್ತೇನೆ. ನೀವು ಸರ್ಕಾರದಿಂದ ಹೊರಗೆ ಬನ್ನಿ. ಹೊಸ ಸದಸ್ಯರುಗಳನ್ನು ತೆಗೆದುಕೊಂಡು ಒಂದು ಸಮ್ಮಿಶ್ರ ಸರ್ಕಾರ ರಚಿಸಿ. ಆ ಸಮ್ಮಿಶ್ರ ಸರ್ಕಾರ ಸ್ಥಾಪನೆ ಆದಮೇಲೆ ಒಟ್ಟಿಗೆ ನಾವೆಲ್ಲರೂ ಡೆಲ್ಲಿಗೆ ಹೋಗಿ ಕೇಂದ್ರ ಸರ್ಕಾರದವರ ಮುಂದೆ ಧರಣಿ ಮಾಡೋಣ. ನಮ್ಮ ರಾಜ್ಯದ ಎಲ್ಲಾ ಪಾರ್ಟಿಗಳೂ ರಾಜ್ಯದ ಏಳಿಗೆಗೆ ಎಲ್ಲರೂ ಒಟ್ಟಿಗೆ ಸೇರಿ ಕನ್ನಡದ ನೆಲವನ್ನೂ ಒಂದು ಇಂಚೂ ಬಿಡದಹಾಗೆ ಉಳಿಸೋಣ. ಒಕ್ಕೊರಲಿನಿಂದ ವಾದ ಮಾಡೋಣ. ಮುಖ್ಯಮಂತ್ರಿಗಳು ರಾಜೀನಾಮೆ ಕೊಡುತ್ತೇನೆಂದು ಆಡಿದ ಮಾತನ್ನು ನಡೆಸಿಕೊಡಲಿ. ಈ ರೀತಿ ಮಾಡಿದರೆ ದೇಶಕ್ಕೆ ಕ್ಷೇಮವಾಗುತ್ತದೆ. ಇದು ಒಂದೇ ಮಾರ್ಗ ಎಂದು ಅವರಿಗೆ ಹೇಳುತ್ತೇನೆ. ಈವೊತ್ತು ನೀವು ರಾಜೀನಾಮೆ ಕೊಡುವ ಸಮಯ ಬಂದಿದೆ. ಹಾಗೆ ಮಾಡಿದರೆ ಮಾತ್ರ ಕನ್ನಡ ರಾಜ್ಯವನ್ನು ಉಳಿಸಬಹುದು. ಇಲ್ಲದೇಹೋದರೆ ಅವರು ರಾಜ್ಯದ ಭಾಗವನ್ನು ಕಸಿದುಕೊಳ್ಳಬಹುದು. ಅವರು ಬೆಳಗಾಮನ್ನು ಇಬ್ಭಾಗಮಾಡಿ ಅರ್ಧ ಅರ್ಧ ಭಾಗ ಮಾಡಿ ಹಂಚುತ್ತೇವೆ ಎನ್ನುತ್ತಿದ್ದಾರೆ. ಅದನ್ನು ತಪ್ಪಿಸಬೇಕಾದರೆ ಸಿವಿಲ್ ವಾರ್ ಆಗಬೇಕಾಗುತ್ತದೆ. ಬೆಳಗಾಂನ್ನು ಬರ್ಲಿನ್‌ನಂತೆ ಇಬ್ಭಾಗ ಮಾಡುವುದಕ್ಕೆ ಬಂದರೆ ಪ್ರತಿಯೊಬ್ಬ ಕನ್ನಡಿಗನೂ ಅದನ್ನು ಪ್ರತಿಭಟಿಸಿ, ಮುಂದೆ ಅದರಿಂದ ರಕ್ತಪಾತವಾಗಬಹುದು. ನಾವು ಆಮೇಲೆ ಮಹಾರಾಷ್ಟ್ರದವರೊಂದಿಗೆ ಹೋರಾಟ ಮಾಡಬೇಕಾಗಿ ಬರಬಹುದು. ಸಿವಿಲ್ ವಾರ್ ಮಾಡಬೇಕಾಗಿ ಬರಬಹುದು. ನಮ್ಮಲ್ಲಿ ಈಗ ಇರುವಂಥ ದುರ್ಬಲ ಸರ್ಕಾರ ಇದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಸರಿಯಾದ ಬಲಯುತವಾದ ಮುಖಂಡತ್ವ ಇಲ್ಲದೇ ಇದ್ದರೆ ನಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳುವುದಕ್ಕಾಗುವುದಿಲ್ಲ. ನಮಗೆ ರಾಜ್ಯಕ್ಕೆ ಒಬ್ಬ ಸ್ಟೇಟ್ಸ್‌ಮನ್ನಿನ ಮುಖಂಡತ್ವ ಚಾಕಚಕ್ಯತೆ ಮತ್ತು ಎದೆಗಾರಿಕೆ ಬೇಕು. ಒಟ್ಟಿಗೆ ಒಮ್ಮತದಿಂದ ಶಕ್ತಿಯುತವಾಗಿ ಹೋರಾಟ ಮಾಡಬೇಕು. ಕೇವಲ ಒಂದು ಜಾಗವನ್ನು ಹಿಡಿದುಕೊಳ್ಳುವುದಕ್ಕೋಸ್ಕರ ಅಥವ ಒಂದು ಸೀಟಿನಲ್ಲಿ ಅಂಟಿಕೊಂಡಿರುವುದಕ್ಕೋಸ್ಕರ ಮಂತ್ರಿ ಪದವಿ ಬೇಕು ಎನ್ನುವ ಆಸೆಯನ್ನು ಇಟ್ಟುಕೊಂಡು ಅದೇ ಸ್ಥಾನದಲ್ಲಿ ಮುಂದುವರಿದರೆ ಕನ್ನಡ ರಾಜ್ಯ ಬಲಿದಾನವಾದೀತು. ಕನ್ನಡ ರಾಜ್ಯಕ್ಕೆ ನೀವು ದ್ರೋಹ ಮಾಡಬೇಡಿ, ಮೋಸ ಮಾಡಬೇಡಿ ಎಂದು ಕಳಕಳಿಯಿಂದ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈಗಲೇ ರಾಜೀನಾಮೆಯನ್ನು ಕೊಟ್ಟುಬಿಡಿ, ಇಡೀ ಕನ್ನಡ ಜನತೆಯ ಪರವಾಗಿ ಅಂದರೆ 2½ ಕೋಟಿ ಜನತೆಯ ಹಿತದೃಷ್ಟಿಯಿಂದ ರಾಜೀನಾಮೆಯನ್ನು ಈಗಲೇ ಬರೆದುಕೊಡಿ. ಸಮ್ಮಿಶ್ರ ಸರ್ಕಾರವನ್ನು ರಚಿಸಿ. ನಮ್ಮೆಲ್ಲರ ಸಹಕಾರವನ್ನು ತೆಗೆದುಕೊಳ್ಳಿ. ನಿಮಗೆ ಸಹಕಾರ ಕೊಡುತ್ತೇವೆ. ಸುಮ್ಮಸುಮ್ಮನೆ ನಿಯೋಗವನ್ನು ಡೆಲ್ಲಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದರೆ ನಮ್ಮ ಕನ್ನಡ ಜನತೆಯನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಎಲ್ಲ ಜನತೆಯ ಸಹಕಾರನನ್ನು ತೆಗೆದುಕೊಂಡು ಎಲ್ಲರೂ ಹೋರಾಟ ಮಾಡತಕ್ಕಂಥ ಕಾಲ ಸನ್ನಿಹಿತವಾಗಿದೆ.

ಶ್ರೀ ಹಂಜಿ ಶಿವಣ್ಣ.—ಈ ಮಾನ್ಯ ಸದಸ್ಯರಿಗೆ ಒಂದು ಮಂತ್ರಿ ಪದವಿಯನ್ನು ಒದಗಿಸೋಣವೇ? ಆ ರೀತಿ ಮಾಡಿದರೆ ಎಲ್ಲರ ಸಹಕಾರ ಬರುತ್ತದೆ ಅಲ್ಲವೆ?

ಶ್ರೀ ಆರ್. ದಯಾನಂದಸಾಗರ್.—ನನಗೆ ಮಂತ್ರಿ ಪದವಿ ಬೇಡ. ನಾನು ಯಾವಾಗಲೂ ಅದನ್ನು ಬಯಸಿಲ್ಲ. ನಾನು ಸೋಲ್ಜರ್ ಆಗೇ ಇರುತ್ತೇನೆ. ನನಗೆ ಮಂತ್ರಿ ಪದವಿ ಸರ್ವಥಾ ಬೇಡ. ಇವರು ಬಿಟ್ಟು ಇನ್ನಾರಾದರೂ ನಾಯಕರಾದರೆ ನಮ್ಮ ಸಂಪೂರ್ಣ ಸಹಕಾರ ಕೊಡಲಿಕ್ಕೆ ಸಿದ್ಧ.

†ಶ್ರೀ ಎಂ. ಶ್ರೀನಿವಾಸನಾಯಕ್ (ಮಂಗಳೂರು-1).—ಮಾನ್ಯ ಸಭಾಪತಿಗಳೇ, ನಮ್ಮ ದೇಶದಲ್ಲಿ ಭಾಷಾ ತಳಹದಿಯಮೇಲೆ ರಾಜ್ಯಗಳನ್ನು ಪುನರ್ವಿಂಗಡನೆ ಮಾಡುವ ನಿರ್ಧಾರ ಕೈಗೊಳ್ಳುವ ಮೊದಲು ತ್ರಿಮೂರ್ತಿ ಕಮಿಟಿಯನ್ನು ಸ್ಥಾಪಿಸಲಾಯಿತು. ಅದರಲ್ಲಿ ಪಂಡಿತ ಜವಹರಲಾಲ್ ನೆಹರೂರವರು, ವಲ್ಲಭಾಯಿ ಪಟೇಲರು ಮತ್ತು ಪಟ್ಟಾಭಿ ಸೀತಾರಾಮಯ್ಯ ಇವರುಗಳನ್ನು ಕೂಡಿಕೊಂಡು ಒಂದು ವಿಚಾರವಿನಿಮಯ ನಡೆಸಿ ಒಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದರು. ಅದರಲ್ಲಿ ಈ ರೀತಿ ಇದೆ:

> "It must be remembered that it is impossible to have clear and rigid demarcations of linguistic areas. However definite such an area might be, it flows into another linguistic area and where the two may meet, there is a mixed bilingual area. Inevitably, if a linguistic division is made, there will be trouble about this middle area and it will not be easy to decide where it should go. Immediately conflict will arise and passions will be aroused. People's attention will be diverted from the urgent problems of the day, which are essentially economic, to this totally unnecessary conflict which can do good to no one."

ಅವರು ಆಡಿದ ಅಮೃತವಾಣಿ ಪರಿಶೀಲನೆ ಮಾಡಿದರೆ ಇಂದು ಜನತೆ ಅದನ್ನು ಮರೆತಿದೆ ಎಂದು ಕಾಣುತ್ತದೆ. ಇಡೀ ದೇಶ ಮಾತ್ರವಲ್ಲ, ಇಡೀ ಪ್ರಪಂಚಕ್ಕೆ ಈ ಪಂಚಶೀಲ ತತ್ವದ ಮಾತನ್ನು ಪಂಡಿತ ಜವಹರ್‌ಲಾಲ್ ನೆಹರೂರವರು ಹೇಳಿದ್ದಾರೆ. ಅವರು ನಮ್ಮ ಕಣ್ಣಮುಂದೆ ಇಲ್ಲವಿದ್ದರೂ ಅವರು ಕೊಟ್ಟ ಸಂದೇಶ ತತ್ವ ನಮ್ಮ ಮುಂದೆ ಇದೆ. ಆದರೂ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪಂಡಿತ ಜವಹರಲಾಲ್ ನೆಹರೂರವರು ಹೇಳಿದ್ದನ್ನು ಸಮರ್ಥನೆ ಮಾಡುತ್ತಾ ಹೋದರೆ ಮಾತ್ರ ಅದು ನಮ್ಮ ಸ್ಮರಣೆಗೆ ಬರಲಿಕ್ಕೆ ಸಾಧ್ಯ ಇದೆ. ಈ ಭಾಷಾವಾರು ಪ್ರಾಂತ್ಯಗಳು ಆಗಿಹೋದುವು. ಭಾಷಾವಾರು ಪ್ರಾಂತ್ಯಗಳು ನಿರ್ಮಾಣ ಮಾಡುವ ಸಲುವಾಗಿ ಅವರು ಒಂದು ವರದಿಯನ್ನು ಕೊಟ್ಟರು. 1956ನೇ ಇಸವಿಯಲ್ಲಿ ಈ ವರದಿ ಲೋಕಸಭೆಯ ಮುಂದೆ ಬಂತು. ಅದರ ಬಗ್ಗೆ ಚರ್ಚಿಸಲಾಯಿತು. ಆವೊತ್ತು ಮಹಾರಾಷ್ಟ್ರದವರು ಏನೇನು ಪ್ರಾಂತ್ಯಗಳು ಸೇರಬೇಕೆಂಬ ಬಗ್ಗೆ ಲೋಕಸಭೆಯಲ್ಲಿ ವಾದವಿವಾದಗಳು ನಡೆದವು. ಬೆಳಗಾಂ ಬಗ್ಗೆ ಒಂದು ಅಮೆಂಡ್‌ಮೆಂಟ್ ಲೋಕಸಭೆಯ ಮುಂದೆ ಇಟ್ಟರು. ನಾರ್ತ್ ಕೆನರಾ ಬಗ್ಗೆ 4 ಅಮೆಂಡ್‌ಮೆಂಟ್ಸ್ ಲೋಕಸಭೆಯ ಮುಂದೆ ಇಟ್ಟರು, ಬೀದರ್ ಡಿಸ್ಟ್ರಿಕ್ಟ್ ಬಗ್ಗೆ 6 ಅಮೆಂಡ್‌ಮೆಂಟ್ಸ್ ಲೋಕಸಭೆಯ ಮುಂದೆ ಇಟ್ಟರು. ಮಹಾರಾಷ್ಟ್ರದ ಪಾರ್ಲಿಮೆಂಟ್ ಸದಸ್ಯರು ತಮ್ಮ ತಿದ್ದುಪಡಿಗಳನ್ನು ಲೋಕಸಭೆಯ ಮುಂದೆ ಇಟ್ಟರು. ಆದರೆ ಲೋಕಸಭೆಯ ಸದಸ್ಯರು ಇಡೀ ದೇಶದಿಂದ ಆರಿಸಲ್ಪಟ್ಟವರು. ಅವರು ಮೈಸೂರು ಸಂಸ್ಥಾನದಿಂದ ಆರಿಸಲ್ಪಟ್ಟವರಲ್ಲ. ಅವರಿಗೆ ಇಡೀ ದೇಶದಮೇಲೆ ಅಭಿಮಾನವಿದೆ. ಆದುದರಿಂದ ಆ ತಿದ್ದುಪಡಿಗಳೆಲ್ಲವನ್ನೂ ಕೂಡ ಬಹುಮತದಿಂದ ತಳ್ಳಿ ಹಾಕಿದ್ದಾರೆ. ಅಂದು ಲೋಕಸಭೆಯವರು ಯಾವ ಒಂದು ತತ್ವದಮೇಲೆ ಮಹಾರಾಷ್ಟ್ರದ ಕೇಳಿಕೆಗಳನ್ನು ಮನ್ನಣೆ ಮಾಡದೆ ತಳ್ಳಿಹಾಕಿದ್ದಾರೋ ಇಂದು ಅದನ್ನೇ ಪುನಃ ಮಂಡನೆ ಮಾಡಿ ಅದರ ಬಗ್ಗೆ ದೇಶದಲ್ಲಿ ಅತೃಪ್ತಿ, ಹಾಹಾಕಾರ ಎಬ್ಬಿಸಬೇಕು ಎನ್ನುವ ಅಭಿಪ್ರಾಯ ಮಹಾರಾಷ್ಟ್ರ ಸರ್ಕಾರಕ್ಕೆ ಇದೆ ಎಂದು ನಾವು ತಿಳಿಯಬೇಕಾಗಿದೆ. ಈವೊತ್ತು ದೇಶದಲ್ಲಿ ರಾಷ್ಟ್ರದ ಗಡಿ ವಿವಾದದ ಬಗ್ಗೆ ಉಂಟಾಗಿರುವ ಪರಿಸ್ಥಿತಿಯನ್ನು ಎದುರಿಸಬೇಕಾದರೆ, ಬೆಳಗಾಂನಲ್ಲಿ ಇನ್ನು ಇತರ ಕಡೆಗಳಲ್ಲಿ ಮಹಾರಾಷ್ಟ್ರೀಯರಿಂದ ಏನಾದರೂ ಅನ್ಯಾಯವಾದರೆ ಅದರ ಬಗ್ಗೆ ನಾವು ಮಹಾರಾಷ್ಟ್ರೀಯರಂತೆ ಒಂದು ಚಳುವಳಿ ಎಬ್ಬಿಸಿ ಕೇಂದ್ರ ಸರ್ಕಾರದ ಬೆಂಬಲ ತೆಗೆದುಕೊಂಡು ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ.

6-30 P.M.

ಈಗ ನಾವು ಕೇಳುತ್ತಿರುವಂತೆ ಕೇಂದ್ರ ಸರಕಾರದವರು ಬೆಳಗಾಂ ಪ್ರದೇಶವನ್ನು ಭಾಗ ಮಾಡಿ ಕೆಲವು ತಾಲ್ಲೂಕುಗಳನ್ನು ಮಹಾರಾಷ್ಟ್ರದವರಿಗೆ ಕೊಡಬೇಕೆಂದು ಸಲಹೆ ಮಾಡಿದ್ದಾರೆಂದು ಪೇಪರುಗಳಲ್ಲಿ ನಾವು ಓದಿದ್ದೇವೆ. ಇನ್ನೂ ಇದರ ಬಗ್ಗೆ ಕೇಂದ್ರದಿಂದ ಮೈಸೂರು ರಾಜ್ಯಕ್ಕೆ ಖಚಿತವಾದ ಸೂಚನೆಗಳೂ ಬಂದಿಲ್ಲ. ಈಗ ಪೇಪರುಗಳಲ್ಲಿ ಬರುತ್ತಿರುವುದನ್ನು ನೋಡಿದರೆ ಇದರಲ್ಲಿ ಏನೋ ಒಂದು ರೀತಿಯಾದ ರಾಜಕೀಯ ಇರುವಂತೆ ತೋರುತ್ತೆ. ಮೊದಲಿಗೆ ಮಹಾಜನ್ ಕಮಿಷನ್ ಮಾಡಬೇಕೆಂದು ಹೇಳುವಾಗ ನಮ್ಮ ಮೈಸೂರು ಸರಕಾರ ಇಂತಹ ಕಮಿಷನ್ ಮಾಡುವುದು ಬೇಡ ಎಂದು ಹೇಳಿದ್ದರೂ ಕೇಂದ್ರದವರು ಒತ್ತಡ ತಂದು ಇಂತಹ ಒಂದು ಕಮಿಷನ್ ಮಾಡಿದರು. ಆಗಲೇ ಕಮಿಷನ್ ಕೊಡುವ ತೀರ್ಪನ್ನು ಎರಡು ಸರಕಾರಗಳೂ ಒಪ್ಪಬೇಕೆಂದು ನಿರ್ಧಾರವಾಗಿತ್ತು. ಈಗ ವರದಿ ಬಂದ ಮೇಲೆ ಅದು ಮಹಾರಾಷ್ಟ್ರಕ್ಕೆ ಅನುಕೂಲವಾಗಲಿಲ್ಲ ಎಂದು ಕೇಂದ್ರದವರು ಮಹಾರಾಷ್ಟ್ರದ ಜನಗಳ ಪ್ರಚೋದನೆಗಳಿಗೆ ಒಳಗಾಗಿ ಏನೋ ಮಾಡುತ್ತಿರುವಂತೆ ಕಾಣುತ್ತಿದೆ. ಭಾಷಾವಾರು ಪ್ರಾಂತಗಳಾಗಿ ಸುಮಾರು ಹತ್ತು ವರ್ಷಗಳಾದವು. ಈಗ ಇಲ್ಲಿಗೆ ಬಂದಿರುವ ಮರಾಠಿ ಜನರಿಗೆ ಯಾವ ವಿಧವಾದ ತೊಂದರೆಯೂ ಆಗಿಲ್ಲ ಎಂದು ಮರಾಠಿ ಭಾಷೆ ಆಡುವ ಜನರೇ ಕೇಂದ್ರದವರಿಗೆ ಇತ್ತೀಚೆಗೆ ಮನವಿಗಳನ್ನು ಕಳುಹಿಸಿದ್ದಾರೆಂದು ಪೇಪರುಗಳಲ್ಲಿ ಓದಿದೆವು. ಇವರಿಗೆ ಬೇಕಾದ ಶಾಲೆಗಳ ವಿಚಾರದಲ್ಲೇ ಆಗಲೀ, ಸರ್ವಿಸಸ್ ವಿಚಾರದಲ್ಲೇ ಆಗಲೀ ಇತರ ಯಾವ ವಿವಾದಗಳಲ್ಲೇ ಆಗಲಿ ನಮಗೇನೂ ತೊಂದರೆಯಾಗಿಲ್ಲ, ನಾವೆಲ್ಲ ಕನ್ನಡ ರಾಜ್ಯದಲ್ಲಿ ಸುಖವಾಗಿದ್ದೇವೆ ಎಂದು ಕೇಂದ್ರದವರಿಗೆ ಪತ್ರ ಬರೆದು ತಿಳಿಸಿದ್ದಾರೆ. ಹತ್ತು ವರ್ಷಗಳಿಗೆ ಹಿಂದೆ ಇದ್ದ ಕಾಲಕ್ಕೂ ಇಂದಿನ ಕಾಲಕ್ಕೂ ಹೋಲಿಸಿ ನೋಡಿದರೆ ಅವರೆಲ್ಲಾ ಸಂತೋಷದಿಂದ ನೆಮ್ಮದಿಯಿಂದ ಇದ್ದೇವೆ ಮತ್ತು ಸುಮ್ಮನೆ ಮಹಾರಾಷ್ಟ್ರದವರು ಇಲ್ಲದ ಚಳುವಳಿ ಮಾಡುತ್ತಿದ್ದಾರೆ, ಇದಕ್ಕೆ ಅವಕಾಶ ಕೊಡಬೇಡಿ ಎಂದು ಅವರೇ ಹೇಳುತ್ತಿದ್ದಾರೆ. ಇದರ ಮೇಲೆ ಮಹಾರಾಷ್ಟ್ರದವರ ಆಸೆ ನಮ್ಮ ರಾಜ್ಯಕ್ಕೆ ಪಕ್ಕದಲ್ಲಿರುವ ಗೋವಾವನ್ನು ಪಡೆಯಬೇಕೆಂದು ಪ್ರಯತ್ನ ನಡೆಸಲು ಇದನ್ನೆಲ್ಲಾ ಮಾಡುತ್ತಿರುವಂತೆ ಕಾಣುತ್ತೆ. ಆದರೆ ಗೋವಾದಲ್ಲಿ ಜನರು ಆಡುವ ಭಾಷೆಗೂ ಮರಾಠಿ ಭಾಷೆಗೂ ಯಾವ ಸಂಬಂಧವೂ ಇಲ್ಲ ಮತ್ತು ಇವರು ಅವರೊಡನೆ ಒಂದಾಗಲಿಕ್ಕೆ ಸಾಧ್ಯವೂ ಇಲ್ಲ. ಗೋವಾಕ್ಕೆ ಹೋಗುವ ಮಾರ್ಗ ಮೈಸೂರು ನೆಲದಲ್ಲಿದೆ. ಇದನ್ನು ಮಹಾಜನ್ ವರದಿಯಲ್ಲೂ ಹೇಳಿದ್ದಾರೆ. ಕಮಿಷನ್ನಿನ ವರದಿಯಲ್ಲಿ ಹೇಳಿರುವಂತೆ ಮರಾಠಿ ಹಾಗೂ ಕೊಂಕಣಿ ಭಾಷೆ ಒಂದಾಗಲು ಅವಕಾಶ ಇಲ್ಲ.

ಮರಾಠಿ ಒಂದು ಪ್ರತ್ಯೇಕವಾದ ಭಾಷೆ ಎಂದು ಮಹಾಜನ್‌ರವರೂ ಅವರ ವರದಿಯಲ್ಲಿ ಹೇಳಿದ್ದಾರೆ. ಗೋವಾದಲ್ಲಿರುವ ಸುಮಾರು ಏಳುವರೆ ಲಕ್ಷ ಜನಸಂಖ್ಯೆಯಲ್ಲಿ ಹಿಂದು ಮುಸಲ್ಮಾನರೇ ಹೆಚ್ಚಾಗಿದ್ದಾರೆ. ಇವರುಗಳೆಲ್ಲಾ ಮಾತನಾಡುವ ಭಾಷೆ ಕೊಂಕಣಿ. ಇವರು ಆಡುವ ಕೊಂಕಣಿ ಭಾಷೆಗೂ ಮರಾಠಿ ಭಾಷೆಗೂ ಯಾವ ಸಂಬಂಧವೂ ಇಲ್ಲ. ಹೀಗಿರುವಾಗ ಇವಕ್ಕೆ ಒಂದು ಸಂಬಂಧ ಕಲ್ಪಿಸಬೇಕೆಂದು ಇದರಲ್ಲಿ ಮಹಾರಾಷ್ಟ್ರೀಯರ ಧೋರಣೆ ಇಲ್ಲಿ ಎದ್ದು ಕಾಣುತ್ತಿದೆ. ಮೈಸೂರು ರಾಜ್ಯದಲ್ಲೇ ಸುಮಾರು 15 ಲಕ್ಷ ಜನ ಕೊಂಕಣಿ ಭಾಷೆ ಆಡುವ ಜನರಿದ್ದಾರೆ. ಗೋವಾದಲ್ಲಿ ಜನಸಂಖ್ಯೆ ಸುಮಾರು ಏಳೂವರೆ ಲಕ್ಷ ಇದೆ. ಇವರುಗಳು ಆಡುವ ಭಾಷೆಯೂ ಕೊಂಕಣಿಯಾಗಿರುವಾಗ ಇವರು ಮೈಸೂರಿನವರೊಂದಿಗೆ ಸೇರುವುದು ನ್ಯಾಯವಾಗಿದೆ ಮತ್ತು ಇದರಿಂದ ಅವರಿಗೂ ಅನುಕೂಲವಾಗುತ್ತದೆ. ಇವರು ಮಹಾರಾಷ್ಟ್ರಕ್ಕೆ ಸೇರುವುದು ಸಾಧ್ಯವೇ ಇಲ್ಲ. ಇನ್ನು ಬೊಂಬಾಯಿ ಪಟ್ಟಣದಲ್ಲೇ ಸುಮಾರು ಐದೂವರೆ ಲಕ್ಷ ಜನರು ಕೊಂಕಣಿ ಮಾತಾಡುವ ಜನ ಮೈಸೂರು ಕಡೆಯಿಂದ ಹೋಗಿರುವವರು ಇದ್ದಾರೆ. ಇದೇ ರೀತಿ ಇತರ ಕಡೆಗಳಲ್ಲೂ ವಲಸೆ ಹೋಗಿ ನೆಲಸಿದ್ದಾರೆ. ಇವರೆಲ್ಲರೂ ಇಂದು ಪ್ರತ್ಯೇಕವಾಗಿರಬೇಕೆಂದು ಕೇಳುತ್ತಿದ್ದಾರೆಯೇ ಎಂದು ಇಲ್ಲಿ ಕೇಳಬೇಕಾಗಿದೆ. ಹತ್ತು ವರ್ಷದ ಕೆಳಗೆ ಎಸ್. ಆರ್.ಸಿ. ರಿಪೋರ್ಟು ಎಂದು ಮಾಡಿದಾಗ ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಕಾಸರಗೋಡನ್ನು ಕೇರಳಕ್ಕೆ ಕೊಡಬೇಕೆಂದು ಆಗಿದ್ದ ಸದಸ್ಯರಾದ ಫಣಿಕರ್‌ರವರು ಹೇಳಿದರು. ಅದರಂತೆ ಅವರಿಗೆ ಕೊಡಲಾಯಿತು ಈಚೆಗೆ ಮಹಾಜನ ಕಮಿಷನ್ ನೇಮಕವಾದ ಮೇಲೆ ಅವರು ಈ ಭಾಗಕ್ಕೆ ಬಂದು ಇಲ್ಲಿನ ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡಿ ಕಾಸರಗೋಡು ಮೈಸೂರಿಗೇ ಸೇರಬೇಕೆಂದು ಹೇಳಿದ್ದಾರೆ. ಇದೂ ಅಲ್ಲದೆ ಹಿಂದೆ ಇದ್ದ ಮದರಾಸು ಅಸೆಂಬ್ಲಿಯಲ್ಲೂ ಈ ಭಾಗದ ಸದಸ್ಯರುಗಳು ಠರಾವು ತಂದು ಅಲ್ಲೂ ಕೂಡ ಕಾಸರಗೋಡನ್ನು ಮೈಸೂರಿಗೇ ಸೇರಿಸಬೇಕೆಂದು ಒತ್ತಾಯ ಮಾಡುತ್ತಾ ಬರುತ್ತಿದ್ದರು. ಕಾಸರಗೋಡನ್ನು ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾಯಿಸಬೇಕು ಎಂದು ಹಿಂದೆ ಮದ್ರಾಸು ಅಸೆಂಬ್ಲಿಯಲ್ಲಿ ಇದರ ಬಗ್ಗೆ ನಿರ್ಣಯವಾಗಿದೆ. ಆದರೆ ಇದು ಪಾರ್ಲಿ

(ಶ್ರೀ ಎಂ. ಶ್ರೀನಿವಾಸ ನಾಯಕ್)

ಮೆಂಟಿಗೆ ಹೋದಾಗ ಆಗ ಅಲ್ಲಿ ಗೃಹಮಂತ್ರಿಗಳಾಗಿದ್ದ ಶ್ರೀ ಪಂತ್‌ರವರು ಇದನ್ನು ಜೋನಲ್ ಕೌನ್ಸಿಲ್‌ನಲ್ಲಿ ತೆಗೆದುಕೊಂಡು ವಿಚಾರ ಮಾಡಿ ತೀರ್ಮಾನ ಮಾಡೋಣ ಎಂದು ಹೇಳುತ್ತಲೇ ಬಂದರು. ಇವನ್ನೆಲ್ಲಾ ಪಾರ್ಲಿಮೆಂಟಿನ ರಿಕಾರ್ಡುಗಳನ್ನು ತೆಗೆದು ನೋಡಿದರೆ ಚೆನ್ನಾಗಿ ಎಲ್ಲ ವಿವರಗಳು ಗೊತ್ತಾಗುತ್ತವೆ.

ಕಾಸರಗೋಡು ಎಂದಿದ್ದರೂ ಮೈಸೂರಿಗೆ ಬರಲೇ ಬೇಕು. ಬೆಳಗಾಂನ್ನು ಯಾವ ರೀತಿಯಿಂದಲೂ ಮಹಾರಾಷ್ಟ್ರದವರು ತೆಗೆದುಕೊಳ್ಳಲು ಸಾಧ್ಯವೇ ಇಲ್ಲ. ಇದೇ ಮನೆಯಲ್ಲಿ ಹಿಂದೆ ಮಹಜನ್ ವರದಿ ಚರ್ಚೆಗೆ ಬಂದಾಗ ನಿರ್ಣಯ ಕೂಡ ಆಗಿದೆ. ಅದರಂತೆ ಕೇರಳದಲ್ಲಿರುವ ಕಾಸರಗೋಡು ಮೈಸೂರಿಗೆ ಬರಬೇಕು ಮತ್ತು ಎಲ್ಲ ಸದಸ್ಯರೂ ಒಮ್ಮತದಿಂದ ಮಹಾಜನ್ ವರದಿಯನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳಿದ್ದಾಗಿದೆ ಮತ್ತು ಇದನ್ನು ಕೇಂದ್ರ ಸರಕಾರಕ್ಕೂ ಕೂಡ ಕಳುಹಿಸಲಾಗಿದೆ. ಇದರಲ್ಲಿ ಹಿಂದಿನ ಚರಿತ್ರೆಗಳನ್ನು ಪರಿಶೀಲನೆ ಮಾಡಿ ನೋಡಿದರೆ ನಮ್ಮ ರಾಜ್ಯಕ್ಕೆ ಇನ್ನೂ ಕೆಲವು ಭಾಗಗಳು ಬೇರೆ ಕಡೆ ಹೋಗಿರುವುದು ಬರಬೇಕಾಗುತ್ತದೆ. ಆದರೆ ಇದರ ಬಗ್ಗೆ ಕಮಿಷನ್ನಿನವರು ಪ್ರಸ್ತಾಪಿಸಿಲ್ಲದಿದ್ದರೂ ಮತ್ತು ನಮ್ಮ ರಾಜ್ಯಕ್ಕೆ ಇದು ವಿರೋಧವಾಗಿದ್ದರೂ ಇದನ್ನು ಹೇಗಾದರೂ ಕೊನೆಗಾಣಿಸಬೇಕೆಂದು ಈ ಕಮಿಷನ್ ವರದಿಯನ್ನು ಎಲ್ಲರೂ ಒಪ್ಪಬೇಕೆಂದು ಹೇಳುತ್ತಿರುವುದು. ಇದರ ಮೇಲೆ ಕೇಂದ್ರ ಸರಕಾರಕ್ಕೂ ರಾಜ್ಯ ಸರಕಾರಕ್ಕೂ ಏನೇನು ವ್ಯವಹಾರಗಳಾಗಿವೆ ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಕಾಸರಗೋಡಿನ ಎಲ್ಲ ಜನರೂ ಕಾಸರಗೋಡನ್ನು ಮೈಸೂರಿಗೆ ವರ್ಗಾಯಿಸಬೇಕು ಎಂದು ಕೇಳುತ್ತಲೇ ಬರುತ್ತಿದ್ದಾರೆ. ಇದನ್ನು ತಪ್ಪಿಸುವುದು ಸಾಧ್ಯವೇ ಇಲ್ಲ. ಮಹಾಜನ್ ಕಮಿಷನ್‌ನವರೂ ಇದೇ ಅಭಿಪ್ರಾಯ ಕೊಟ್ಟಿದ್ದಾರೆ. ಕಾಸರಗೋಡು ಮೈಸೂರು ಸಂಸ್ಥಾನದಲ್ಲಿ ವಿಲೀನವಾಗಲೇ ಬೇಕು. ಇದರ ಹಿನ್ನೆಲೆ ಸಂಸ್ಕೃತಿ ಎಲ್ಲ ಆಧಾರಗಳಿಂದಲೂ ಇದು ಮೈಸೂರಿನಲ್ಲೇ ಇರಬೇಕು. ಇದರ ಬಗ್ಗೆ ಜೋನಲ್ ಕೌನ್ಸಿಲ್ ಪ್ರತಿ ಸಾರಿ ನಡೆದಾಗಲೂ ಕಾಸರಗೋಡಿನ ಜನರು ಇದನ್ನು ಒತ್ತಾಯ ಮಾಡುತ್ತಲೇ ಬರುತ್ತಿದ್ದಾರೆ. ಈಚೆಗೆ ನಡೆದ ಜೋನಲ್ ಕೌನ್ಸಿಲ್ಲಿನಲ್ಲೂ ಅಲ್ಲಿನ ಪಂಚಾಯತಿಯ ಮುಖಂಡರ ಒಂದು ನಿಯೋಗವು ಬಂದು ಕಾಸರಗೋಡಿನ ಬಗ್ಗೆ ಒತ್ತಾಯ ಮಾಡಿ ಇದನ್ನು ಒಪ್ಪಿಕೊಳ್ಳಬೇಕೆಂದು ಮನವಿಗಳನ್ನೂ ಕೊಟ್ಟು ಹೋಗಿದ್ದಾರೆ. ಮತ್ತೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲೂ ಲಿಖಿತ ರೂಪವಾಗಿ ಅಲ್ಲಿನ ಪ್ರಮುಖ ವಕೀಲರುಗಳು ಎಲ್ಲ ಮಾಹಿತಿಗಳನ್ನೂ ಕೊಟ್ಟು ಮೈಸೂರಿಗೆ ಕಾಸರಗೋಡನ್ನು ಸೇರಿಸುವ ವಿಚಾರದಲ್ಲಿ ಬೇಗನೆ ಇತ್ಯರ್ಥ ಮಾಡಲೇ ಬೇಕು ಎಂದು ಒತ್ತಾಯ ಮಾಡುತ್ತಲೇ ಇದ್ದಾರೆ. ಇಲ್ಲದಿದ್ದರೆ ಇದಕ್ಕೆ ಯಾವ ಸ್ಯಾಂಕ್ಟಿಟಿ ಇರುವುದಿಲ್ಲ ಎಂದೂ ಹೇಳಿದ್ದಾರೆ. ಆದರೆ ಇದರಲ್ಲಿ ಈಗ ಏನೋ ಒಂದು ರೀತಿ ರಾಜಕೀಯ ಮಾಡುತ್ತಿದ್ದಾರೋ ಏನೋ ಎಂದು ಅನಿಸುತ್ತಿದೆ. ಇದರಲ್ಲಿ ರಾಜಕೀಯ ತರುವುದು ಸರಿಯಲ್ಲ. ಹೀಗೆ ಮಾಡುವುದು ತಪ್ಪು.

ಕೇಂದ್ರ ಸರಕಾರದವರಿಗೆ ಮತ್ತು ರಾಜ್ಯ ಸರಕಾರದವರಿಗೆ ಡಿಫರೆನ್ಸ್ ಇದೆ ಎಂದು ಇದರಲ್ಲಿ ರಾಜಕೀಯ ಮಾಡುವುದು ಅಷ್ಟು ಸರಿಯಲ್ಲ. ಇದು ಒಂದು ರಾಜ್ಯದ ಪ್ರಶ್ನೆ. ಇದರ ವಿಚಾರಗಳನ್ನೆಲ್ಲಾ ಸರಿಯಾಗಿ ಕೂಲಂಕಷವಾಗಿ ನೋಡಿಕೊಂಡು ತೀರ್ಮಾನಕ್ಕೆ ಬರಬೇಕು. ಮೈಸೂರು ಜನತೆಯ ಅಭಿಪ್ರಾಯ ಏನಿದೆ ಇದನ್ನು ಗಮನಕ್ಕೆ ತೆಗೆದುಕೊಂಡು ತೀರ್ಮಾನ ಮಾಡಬೇಕು. ಇದನ್ನು ಬರೀ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇದು ಪಾರ್ಲಿಮೆಂಟಿನ ಮುಂದೆ ಬರುತ್ತದೆ. ಪಾರ್ಲಿಮೆಂಟಿನ ಎಲ್ಲ ಸದಸ್ಯರು ಇದನ್ನು ಒಪ್ಪಬೇಕು. ಇದರಲ್ಲಿ ಮಹಾರಾಷ್ಟ್ರದ ಸದಸ್ಯರು ಹಾಗೂ ಇನ್ನಿತರ ರಾಜ್ಯಗಳ ಸದಸ್ಯರೂ ಇರುತ್ತಾರೆ. ಇವರೆಲ್ಲರೂ ಶಕ್ತಿಮೀರಿ ವಿಮರ್ಶೆ ಮಾಡಿ ಎಲ್ಲ ರಾಜ್ಯಗಳ ಜನಸಂಖ್ಯೆ ಏನು ಆಯಾ ರಾಜ್ಯಗಳ ವಿಚಾರಗಳೇನು ಎಂಬುದನ್ನೆಲ್ಲಾ ಯೋಚಿಸಿ ತೀರ್ಮಾನ ಮಾಡಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ ಎಲ್ಲ ಪಾರ್ಲಿಮೆಂಟು ಸದಸ್ಯರುಗಳನ್ನೂ ನೋಡಿ ಅವರನ್ನು ಒಪ್ಪಿಸಬೇಕೆಂದು ಇಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲ ಗೌಡರು ತಂದಿರುವ ನಿರ್ಣಯ ಸರಿಯಾಗಿದೆ. ಇದರಂತೆ ನಾವು ಕೆಲ ಸದಸ್ಯರುಗಳು ಅಲ್ಲಿಗೆ ಹೋಗಿ ಅವರ ಮನಸ್ಸನ್ನು ಒಪ್ಪುವಂತೆ ಮಾಡಿ ಕೇಂದ್ರದವರೂ ನಮ್ಮ ಸಲಹೆಗಳನ್ನು ಒಪ್ಪುವಂತೆ ಮಾಡಬೇಕಾದುದು ಅಗತ್ಯ. ಇದರ ಎಲ್ಲ ಭಾರವೂ ನಮ್ಮ ಮೇಲೆ ಇದೆ. ಇದಕ್ಕಾಗಿ ನಾವೆಲ್ಲರೂ ಶ್ರೀ ಗೋಪಾಲಗೌಡರು ತಂದಿರುವ ಈ ರೆಸಲ್ಯೂಷನ್‌ನ್ನು ಒಪ್ಪಿ ಅದೇ ರೀತಿಯಾಗಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ವಿಳಂಬ ಮಾಡದೆ ತ್ವರಿತವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಕಳಕಳಿಯಿಂದ ಎಲ್ಲರಲ್ಲೂ ವಿನಂತಿ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ, ಇವತ್ತು ಗಡಿ ಸಮಸ್ಯೆಯ ಮೇಲೆ ನನ್ನ ಮಿತ್ರರಾದಂಥ ಶ್ರೀಮಾನ್ ಗೋಪಾಲಗೌಡರು ಮತ್ತು ಹಿರಿಯರಾದಂಥ ಶ್ರೀಮಾನ್ ಸಿದ್ಧವೀರಪ್ಪನವರು ಏನು ಒಂದು ನಿರ್ಣಯಗಳನ್ನು ಮಂಡನೆ ಮಾಡಿದ್ದಾರೆ ಅದರ ಮೇಲೆ ನನ್ನ ನಿಲುವು ಏನು, ನನ್ನ ಪಾರ್ಟಿ ನಿಲುವು ಏನು ಎಂಬ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. 1967ರಲ್ಲಿ ಆಲ್-ಇಂಡಿಯಾ ರಿಪಬ್ಲಿಕನ್ ಪಕ್ಷದಲ್ಲಿ ಮಹಾಜನ್ ವರದಿಯ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಮಹಾಜನ್ ವರದಿಯ ಪ್ರಕಾರ ಯಾವ ಯಾವ ಭಾಗಗಳು ಕರ್ನಾಟಕಕ್ಕೆ ಬರುತ್ತವೆ ಅದನ್ನು ಸಂಪೂರ್ಣವಾಗಿ ನಮ್ಮ ಪಕ್ಷದ ವತಿಯಿಂದ ಒಪ್ಪಿಕೊಂಡು ಆ ಬಗ್ಗೆ ಒಂದು ನಿರ್ಣಯವನ್ನು ಸಹ ಪಾಸ್ ಮಾಡಿದ್ದೇವೆ. 1967ನೇ ಡಿಸೆಂಬರ್ ತಿಂಗಳಲ್ಲಿ ಇದೇ ಅಸೆಂಬ್ಲಿಯಲ್ಲಿ ಮಹಾಜನ್ ವರದಿಯ ಬಗ್ಗೆ ಒಂದು ನಿರ್ಣಯ ಬಂದಾಗ ನಮ್ಮ ಪಕ್ಷದ ವತಿಯಿಂದ ನಾವು ಬೆಂಬಲ ಕೊಟ್ಟಿದ್ದೇವೆ. ಈ ಒಂದು ನಿರ್ಣಯವನ್ನು ಪಾಸ್ ಮಾಡಿ ಎರಡು ವರ್ಷವಾದರೂ ಕೂಡ ಕೇಂದ್ರದವರು ಜಾರಿಗೆ ಕೊಡಲಿಲ್ಲ. ನಿಜವಾಗಿ ಹೇಳುವುದಾದರೆ ಕಳೆದ ಎರಡು ವರ್ಷಗಳಿಂದ ಮೈಸೂರು ಸರ್ಕಾರದವರು, ಮೈಸೂರಿನ ಎಂ.ಪಿ.ಗಳು ಮತ್ತು ಮುಂದಾಳುಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದ್ದರೆ ಈ ಮಹಾಜನ್ ವರದಿಯನ್ನು ಇಂಡಿಕೇಟ್ ಮತ್ತು ಸಿಂಡಿಕೇಟ್ ಎಂದು ಕಾಂಗ್ರೆಸ್ ಎರಡು ಭಾಗಗಳಾಗುವುದಕ್ಕೆ ಮೊದಲೇ ಜಾರಿಗೆ ಬರುತ್ತಿತ್ತು. ದುರ್ದೈವದಿಂದ ನಮ್ಮ ಸರ್ಕಾರದ ನಿರ್ಲಕ್ಷದಿಂದ ಕೇಂದ್ರಸರ್ಕಾರದ ಮೇಲೆ ನಮ್ಮ ರಾಜ್ಯದ ಎಂ.ಪಿ.ಗಳು ಸಹ ಸರಿಯಾದ ಒತ್ತಡ ತರದೇ ಇದ್ದುದರಿಂದ ಈ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯಿತು. ಇಂತಹ ಒಂದು ಸಂಧಿಕಾಲದಲ್ಲಿ ಯಾರೂ ಸಹ ಕನಸಿನಲ್ಲಿಯೂ ವಿಚಾರ ಮಾಡದಂಥ ಒಂದು ಸಮಸ್ಯೆ ಹುಟ್ಟಿಕೊಂಡಿತು. ಅದೇನೆಂದರೆ ಇಂಡಿಕೇಟ್ ಮತ್ತು ಸಿಂಡಿಕೇಟ್‌ನ ಉಗಮ. ಈ ಒಂದು ಸಿಂಡಿಕೇಟ್ ಮತ್ತು ಇಂಡಿಕೇಟ್‌ನ ಉಗಮದಿಂದ ಯಾರ ಮೇಲೂ ಆಗದಿರುವಂತಹ ಅನ್ಯಾಯ ಈ ಕನ್ನಡನಾಡಿನ ಮೇಲೆ, ಕನ್ನಡ ಜನತೆಯ ಮೇಲೆ, ಕನ್ನಡದ ನೆಲದ ಮೇಲೆ ಆಗುತ್ತಿದೆ ಯೆಂಬುದನ್ನು ಹೇಳಬೇಕಾಗಿದೆ. ಇವತ್ತಿನದಿವಸ ಬೆಳಗಾಂನ್ನು ಎರಡು ಭಾಗ ಮಾಡಿ ಒಂದು ಭಾಗವನ್ನು ಮಹಾರಾಷ್ಟ್ರಕ್ಕೂ, ಇನ್ನೊಂದು ಭಾಗವನ್ನು ಮೈಸೂರಿಗೂ ಕೊಡಬೇಕೆಂದು ಶ್ರೀಮತಿ ಇಂದಿರಾಗಾಂಧಿಯವರು ಮನಸ್ಸು ಮಾಡಿದ್ದಾರೆಂಬ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದಾಗ, ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ಆ ಸಮಯದಲ್ಲಿ ನನ್ನ ಕಣ್ಣಿನಲ್ಲಿ ನೀರು ಹರಿಯಲಿಲ್ಲ, ರಕ್ತ ಹರಿಯುತ್ತಿತ್ತು. ರಾಜಕೀಯ ರಂಗದಲ್ಲಿರುವ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಪ್ರಧಾನ ಮಂತ್ರಿಯವರು ಆ ಒಂದು ಒನಕೆಪೆಟ್ಟನ್ನು ನಮ್ಮ ಮೇಲೆ ಹಾಕುತ್ತಿದ್ದಾರೆ. ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದಾಗ ನಾವು ಪ್ರಧಾನಿಯವರಿಗೆ ಬೆಂಬಲ ಕೊಟ್ಟೆವು. ಅವರು ಸಮಾಜವಾದವನ್ನು ಮತ್ತು ಸಮತಾವಾದವನ್ನು ಜಾರಿಗೆ ತರುವುದಕ್ಕೆ ಹೊರಟಿರುವುದರಿಂದ ನಾವು ಅವರಿಗೆ ಬೆಂಬಲ ಕೊಡುತ್ತಿದ್ದೇವೆ. ಅದೇ ಸಮಾಜವಾದದ ಹೆಸರಿನಲ್ಲಿ ನಮಗೆ ಒನಕೆಪೆಟ್ಟನ್ನು ಕೊಟ್ಟರೆ ಅದನ್ನು ನಾವು ಸಹಿಸಿಕೊಳ್ಳುವುದಿಲ್ಲ. ಇವತ್ತಿನದಿವಸ ಕರ್ನಾಟಕದಲ್ಲಿರುವ ಸಿಂಡಿಕೇಟ್ ಸರ್ಕಾರವನ್ನು ಮರ್ದನ ಮಾಡುವುದಕ್ಕಾಗಿ ಕೇಂದ್ರದಲ್ಲಿರುವ ಇಂಡಿಕೇಟ್ ಸರ್ಕಾರದವರು ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಕೊಡುತ್ತೇವೆಂದು ಹೇಳುತ್ತಿರುವುದು ಸರಿಯಲ್ಲ, ಎಲ್ಲಿಯವರೆಗೆ ಕೇಂದ್ರದಲ್ಲಿ ಚವಾಣ್ ಅವರು ಗೃಹಮಂತ್ರಿಯವರಾಗಿರುತ್ತಾರೋ ಅಲ್ಲಿಯವರೆಗೆ ಕನ್ನಡದ ನೆಲದ ಮೇಲೆ ದ್ರೋಹ ಬಗೆಯುವುದು ನಡೆಯುತ್ತಲೇ ಇರುತ್ತದೆ. ಇದು ಸ್ವತಃಸಿದ್ಧ. ಬೆಳಗಾಂನ್ನು ಮಹಾರಾಷ್ಟ್ರದವರು ಪಡೆದುಕೊಳ್ಳುವ ಬಗ್ಗೆ ಅನೇಕ ನಾಟಕಗಳನ್ನು ಆಡುತ್ತಿದ್ದಾರೆ. ಬೆಳಗಾಂನಲ್ಲಿ ಒಂದು ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಮಹಾರಾಷ್ಟ್ರದವರು ಅನುಮತಿ ಕೊಟ್ಟರು. ಇದೆಲ್ಲಾ ಚವಾಣರ ಕುತಂತ್ರದಿಂದ ನಡೆಯುತ್ತಿದೆ. ಚವಾಣ್ ಅವರು ತಾವು ಕೇವಲ ಮಹಾರಾಷ್ಟ್ರದವರು ಎಂದು ತಿಳಿದುಕೊಂಡಿದ್ದಾರೆ. He is the first and the last Maharashtrian but he never seems to me to belong to India. ನಾನು ಭಾರತೀಯನಾಗಿದ್ದೇನೆ ಎಂಬುದು ಅವರ ಹೃದಯದಲ್ಲಿಯೇ ಇಲ್ಲ. ಕನ್ನಡ ನಾಡಿಗೆ ಅನ್ಯಾಯ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡೇ ಅವರು ಗೃಹಮಂತ್ರಿಯಾದರು ಎಂದು ಕಾಣುತ್ತದೆ. ಇಂದಿರಾಗಾಂಧಿಯವರು ದುರ್ಗಿಯ ಅವತಾರ ತಳೆದು ಅನೇಕರನ್ನು ಬಲಿ ತೆಗೆದುಕೊಂಡರು. ಇಂತಹ ಪ್ರಧಾನಿಯವರು ಚವಾಣ್ ಅವರ ಕುತಂತ್ರಕ್ಕೆ ಯಾವ ರೀತಿ ಬಲಿ ಬಿದ್ದರು ಎಂಬುದು ತಿಳಿಯುತ್ತಿಲ್ಲ. ಚವಾಣ್ ಅವರು ಕುತಂತ್ರದಿಂದ ತಮ್ಮ ಕೆಲಸವನ್ನು ಸಾಧಿಸಿಕೊಂಡು ಕೊನೆಗೆ ಇಂದಿರಾಗಾಂಧಿಯವರಿಗೇ ಎರಡು ಬಗೆದರೂ ಬಗೆಯಬಹುದು. ಬೆಳಗಾಂನ್ನು ಎರಡು ಭಾಗ ಮಾಡಿದರೆ ನಮ್ಮ ಮೂಗನ್ನೇ ಕತ್ತರಿಸಿದಂತೆ. ಇಂತಹ ಒಂದು ಅವಮಾನವನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ನಾನು ಒತ್ತಾಯದಿಂದ ಹೇಳುತ್ತಿದ್ದೇನೆ. ಮೂಗು ಹೋದ ಮೇಲೆ ಮುಖದ ಮೇಲೆ ಸೌಂದರ್ಯವೇ ಉಳಿಯುವುದಿಲ್ಲ. ಇತಿಹಾಸವನ್ನು ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ, ಮರಾಠಿಗರು

(ಶ್ರೀ ಎಸ್. ಎಸ್. ಅರಕೇರಿ)

ಇವತ್ತು ಕನ್ನಡದ ನೆಲ ಮತ್ತು ಜಲದ ಮೇಲೆ ಬಂಡಾಯ ಎದ್ದಿಲ್ಲ, ಹಿಂದೆ ಶಿವಾಜಿ ಕೂಡ ಬಿಜಾಪುರದ ಮೇಲೆ ದಂಡೆತ್ತಿ ಬಂದಿದ್ದ. ಇವರ ಬಂಡಾಯ ಬುದ್ಧಿ ಇತಿಹಾಸ ತೆಗೆದು ನೋಡಿದರೆ ಗೊತ್ತಾಗುತ್ತದೆ. ಮೊನ್ನೆ ಮಾನ್ಯ ವೀರೇಂದ್ರಪಾಟೀಲರು ಬೆಳಗಾಂನಲ್ಲಿ ಮಾತನಾಡುತ್ತಾ ಏನು ಹೇಳಿದರು ಅದನ್ನು ಎಲ್ಲರೂ ಅಪ್ರಿಷಿಯೇಟ್ ಮಾಡಬೇಕು. ಅವರು ಮಾತನಾಡಿದಂತೆ ನಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಏನು ಮಾತನಾಡಿದ್ದಾರೆ ಅದನ್ನು ಕೃತಿಯಲ್ಲಿ ತರಬೇಕು. ಮಂತ್ರಿಮಂಡಲಗಳಲ್ಲಿರುವ ಎಲ್ಲ ಮಂತ್ರಿಗಳು ಸಹ ರಾಜೀನಾಮೆ ಕೊಟ್ಟು ಬಾರ್ಡರ್‌ಗೆ ಹೋಗಿ ಚಳುವಳಿ ಮಾಡಬೇಕೆಂದು ಹೇಳುತ್ತೇನೆ. ಕೇವಲ ಭಾಷಣ ಮಾಡುವುದರಿಂದ ಕನ್ನಡನಾಡಿನ ರಕ್ಷಣೆಯಾಗುವುದಿಲ್ಲ. ಇವತ್ತು ಚಳುವಳಿ ಏನಾದರೂ ನಡೆದರೆ ಅದರಲ್ಲಿ ಹೆಚ್ಚಾಗಿ ಭಾಗವಹಿಸುವವರು ಬಡವರು. ಚಳುವಳಿಯಲ್ಲಿ ಯಾರಾದರು ಸತ್ತರೆ ಅವರು ಬಡವರೇ ಆಗಿರುತ್ತಾರೆ. ಇವತ್ತು ಕೇವಲ ಭಾಷಣ ಮಾಡಿ ಬೆಳಗಾಂನ್ನು ನಾವು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ ನಮ್ಮ ದೇಶಕ್ಕೆ ಸ್ವರಾಜ್ಯ ಬಂದಾಗ ಮಹಾತ್ಮಾ ಗಾಂಧಿಯವರು ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿಕೊಡುತ್ತೇನೆ ಎಂದು ಹೇಳಿದರು. ಈ ಒಂದು ವಿಷಬೀಜವನ್ನು ಬಿತ್ತಿದವರು ಅವರೇ. ಈ ಕಾರಣದಿಂದ ಇವತ್ತು ಕನ್ನಡಿಗರ ಕೊಲೆಯಾಗುತ್ತಿದೆ. ನಮ್ಮ ಕನ್ನಡದ ಭೂಮಿ ಬೇಕೆಂದು ಮಹಾರಾಷ್ಟ್ರದವರೇ ಅಲ್ಲದೆ ತಮಿಳು ದೇಶದವರು, ತೆಲುಗು ದೇಶದವರು, ಕೇರಳಾ ದೇಶದವರು ಎಲ್ಲರೂ ಕೇಳುತ್ತಿದ್ದಾರೆ. ಈ ಗಡಿ ಬಗ್ಗೆ ಒಂದು ರೀತಿಯ ಬೆಂಕಿ ಹತ್ತಿಕೊಂಡು ಎಲ್ಲ ಕಡೆ ಉರಿಯುತ್ತಿದೆ ಎಂದು ಹೇಳಬಹುದು. ಈ ಗಡಿ ಪ್ರಶ್ನೆ ಇವತ್ತು ಬೃಹದಾಕಾರವಾಗಿ ಬೆಳೆದು ಅನೇಕ ಜನರ ಕೊಲೆಯಾಗುತ್ತಿದೆ. ಮಾನವನ ಜೀವನಕ್ಕೆ ಬೆಲೆಯೇ ಇಲ್ಲವಾಗಿದೆ. ಮಹಾರಾಷ್ಟ್ರದಲ್ಲಿ ಶಿವಸೇನೆ ಹುಟ್ಟಿಕೊಂಡು ಅಲ್ಲಿರುವ ಕನ್ನಡಿಗರಿಗೆ ಇಲ್ಲದ ಕಿರುಕುಳ ಕೊಡುತ್ತಿದ್ದಾರೆ. ಭಾಷಾ ವೈಮನಸ್ಸಿನಿಂದ ಕೆಲವರು ತಮ್ಮ ಸಂಸ್ಕೃತಿಯನ್ನೇ ಮರೆತು, ನಾವು ಸ್ವತಂತ್ರ ಭಾರತದ ಪ್ರಜೆಗಳು ಎಂಬುದನ್ನು ಮರೆತು ವಿಷದ ಚಕ್ರದಡಿಯಲ್ಲಿ ಸಿಕ್ಕಿಕೊಂಡಿದ್ದಾರೆ. 1922 ರಲ್ಲಿ ಬೆಳಗಾಂನಲ್ಲಿ ಮೊದಲನೆಯ ಕಾಂಗ್ರೆಸ್ ಅಧಿವೇಶನ ನಡೆದಾಗ ಗಾಂಧೀಜಿಯವರು ಬೆಳಗಾಂ ಕನ್ನಡನಾಡಿನಲ್ಲಿಯೇ ಇರಬೇಕೆಂದು ಹೇಳಿದ್ದರು. ನಾಲ್ಕು ಶಬ್ದಗಳನ್ನು ಕನ್ನಡದಲ್ಲಿಯೇ ಹೇಳಿದ್ದು ಅಲ್ಲದೆ ಕನ್ನಡದಲ್ಲಿಯೇ ಸಹಿ ಕೂಡ ಮಾಡಿದ್ದರು. ಮಹಾತ್ಮ ಗಾಂಧಿಯವರ ಮೊಮ್ಮಗಳಂತಿರುವ ಇಂದಿರಾಗಾಂಧಿಯವರು ಇವತ್ತು ಬೆಳಗಾಮನ್ನು ಇಬ್ಭಾಗ ಮಾಡುವುದಕ್ಕೆ ಹೊರಟಿದ್ದಾರೆಂಬುದನ್ನು ಕೇಳಿ ನನಗೆ ವ್ಯಸನವಾಯಿತು. ಗಾಂಧಿಜೀಯವರ ಹೆಸರನ್ನು ಇಟ್ಟುಕೊಂಡಿರುವ ಶ್ರೀಮತಿ ಇಂದಿರಾಗಾಂಧಿಯವರು ಕನ್ನಡನಾಡಿಗೆ ಅನ್ಯಾಯ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ಗಾಂಧಿಯವರ ಹೆಸರಿಗೆ ಧಕ್ಕೆಯಾಗುತ್ತದೆ ಎಂಬುದನ್ನು ಪ್ರಧಾನಮಂತ್ರಿಯವರು ತಿಳಿದುಕೊಳ್ಳಬೇಕು. ಇಂಡಿಕೇಟ್ ಮತ್ತು ಸಿಂಡಿಕೇಟ್ ಜಗಳದಲ್ಲಿ ನಮ್ಮ ರಾಜ್ಯವನ್ನು ಹಾಳು ಮಾಡಬೇಡಿ ಎಂದು ಅವರಿಗೆ ಹೇಳುತ್ತಿದ್ದೇನೆ. ಈ ಜಗಳದಲ್ಲಿ ದೇಶದ ಜನರ ಸುಖದುಃಖವನ್ನು ಹಾಳು ಮಾಡುವುದು ಸರಿಯಲ್ಲ. ನಿಮ್ಮ ಕೈಯಲ್ಲಿ ರಾಜ್ಯವಾಳುವುದಕ್ಕೆ ಆಗದಿದ್ದರೆ ನಮ್ಮ ಕೈಯಲ್ಲಿ ಕೊಡಿ. We will be able to rule this country in a better way and also be able to give a better Government to the people. ಶ್ರೀ ಅಂಬೇಡ್‌ಕರ್ ಅವರು ಹಿಂದೆ ಏನು ಹೇಳಿದ್ದರೋ ಅದು ಇವತ್ತಿನ ದಿವಸ ನಿಜವಾಗಿ ಕಾಣುತ್ತಿದೆ. ಈಗಲಾದರೂ ಕೂಡ ನಾವು ಒಂದಾಗಿ ಹೋರಾಟ ಮಾಡುವುದು ಒಳ್ಳೆಯದು. We must be with one mind and fight for our rights. ಇದರ ಸಲುವಾಗಿ ಸಿಂಡಿಕೇಟ್, ಇಂಡಿಕೇಟ್ ಅಥವಾ ಯಾವುದೇ ಪಕ್ಷವಾಗಲಿ, ಎಲ್ಲವನ್ನೂ ಮರೆತು ಎಲ್ಲರೂ ಒಂದಾಗಿ ಗಡಿ ಬಗ್ಗೆ ಹೋರಾಟ ಮಾಡಬೇಕಾಗಿದೆ.

ನಾವು ಕರ್ನಾಟಕದ ಕನ್ನಡ ಮಾತನಾಡುವ ಎಷ್ಟೋ ಭಾಗಗಳನ್ನು ಅವರಿಗೆ ನೀಡುವಾಗ ಹಿಂದೆ ಈಗಾಗಲೇ ಎಷ್ಟೋ ಕನ್ನಡ ಪ್ರದೇಶಗಳು ಮಹಾರಾಷ್ಟ್ರದವರಿಗೆ ಹೋಗಿರುವಾಗ ಅದರ ಜೊತೆಗೆ ಮತ್ತೆ ನಮ್ಮ ಕೆಲವು ಭಾಗ ಹೋದರೂ ಹೋಗಲಿ ಎಂದು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನಾವೆಲ್ಲರೂ ದೊಡ್ಡ ಮನಸ್ಸು ಮಾಡಿ ನಮ್ಮ ಗಡಿ ಪ್ರದೇಶದ ರಕ್ಷಣೆಗಾಗಿ ನಾವು ಒಗ್ಗಟ್ಟಾಗಿ ಹೋರಾಟವನ್ನು ಮಾಡಬೇಕು. ಈಗಾಗಲೇ ನಾವು ಅನ್ಯಾಯವನ್ನು ಮಾಡಿಕೊಂಡಿದ್ದೇವೆ. ಇಷ್ಟೊತ್ತಿನ ದಿವಸ ಮಹಾರಾಷ್ಟ್ರದವರಿಗೆ ಬೆಳಗಾಂ ಅರ್ಧ ಕೊಡಬೇಕು, ಹಳಿಯಾಳ ಕೊಡಬೇಕು ಎಂಬುದು ಯಾವ ಧರ್ಮ? ಹಳಿಯಾಳ ಧಾರವಾಡಕ್ಕೆ 15 ಮೈಲಿ ದೂರದಲ್ಲಿದೆ. ಅದು ಕನ್ನಡಿಗರ ವಿದ್ಯಾ ಸಂಸ್ಕೃತಿಯ ಕೇಂದ್ರ. ಹೀಗಿರುವಾಗ ಧಾರವಾಡಕ್ಕೆ ಕೇವಲ 15 ಮೈಲಿ ದೂರದಲ್ಲಿರುವ ಹಳಿಯಾಳ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದರೆ ಇದು ಬೇಜವಾಬ್ದಾರಿಯ ನ್ಯೂಸ್ ಬಂದಿದೆ ಎಂದು ಹೇಳಬೇಕಾಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಕಳುಹಿಸಿರುವ

ಪ್ರಪೋಜಲ್ ನಿಜವಾಗಿಯೂ ಖಂಡನೀಯ. ಇವೊತ್ತು ಕರ್ನಾಟಕದಲ್ಲಿರತಕ್ಕ ಇಂಡಿಕೇಟ್ ಮತ್ತು ಸಿಂಡಿಕೇಟ್ ಸದಸ್ಯರೆಲ್ಲರೂ ಸೀರಿಯಸ್ ಆಗಬೇಕು. ಬೆಳಗಾವಿಯನ್ನು ವಿಭಜಿಸಿದರೆ ಕನ್ನಡ ನಾಡಿನ ಮೂಗು ಕೊಯ್ದಂತೆ. ಚವಾಣರ ಒತ್ತಡದಿಂದ ಪ್ರಧಾನಮಂತ್ರಿಗಳು ಆ ರೀತಿ ಮಾಡಿದರೆ ನಾವು ಸೊಲ್ಲಾಪುರ ನಗರದ ವಿಭಜನೆಗೆ ಕೈ ಹಾಕಬೇಕಾಗುತ್ತದೆ. ಇಲ್ಲದಿದ್ದರೆ ಬೆಳಗಾವಿಯು ಉಳಿಯುವುದಿಲ್ಲ. ಕನ್ನಡಿಗರ ಇತಿಹಾಸ ಮತ್ತು ಸಂಸ್ಕೃತಿಯ ಬೀಡಾಗಿದ್ದ ನಗರಗಳೆಲ್ಲಾ ಹೊರಟುಹೋಗುತ್ತಿವೆ. ಕೆಳದಿಯ ಸಂಕಣ್ಣ ಮತ್ತು ಓಬಣ್ಣ ಇಡೀ ಭಾರತದಲ್ಲೇ ದೊಡ್ಡ ಜಟ್ಟಿಗಳು. ಬಹಳ ಬಲಶಾಲಿಗಳು, ಅವರು ಕನ್ನಡ ನಾಡಿನ ಹಿತರಕ್ಷಣೆ ಮಾಡಿದಂತಹವರು. ಆ ಜಟ್ಟಿಗಳು ಇಡೀ ಭಾರತಕ್ಕೆ ತಮ್ಮ ಕಡುಗಲಿಯನ್ನು ತೋರಿಸಿದ್ದಾರೆ. ಈ ದೃಷ್ಟಿಯಿಂದ ನಾವು ಸೊಲ್ಲಾಪುರವನ್ನು ವಿಭಜಿಸುವ ವಾದವನ್ನು ಕೇಂದ್ರಸರ್ಕಾರದ ಮುಂದೆ, ಶ್ರೀಮತಿ ಇಂದಿರಾಗಾಂಧಿಯವರ ಮುಂದೆ ಮಂಡಿಸಬೇಕಾಗುತ್ತದೆ. ಇದನ್ನು ಮೇಲಿಂದ ಮೇಲೆ ಅವರ ಮುಂದೆ ಇಡಬೇಕಾಗುತ್ತದೆ. ಇಲ್ಲದೇ ಹೋದರೆ ಇದರ ಅರಿವು ಅವರಿಗೆ ಆಗುವುದಿಲ್ಲ. ಅದರ ಸಲುವಾಗಿ ಗಡಿಗಳ ಬಗ್ಗೆ ನಾವು ಇವೊತ್ತಿನ ದಿವಸ ಹೋರಾಟವನ್ನು ಮಾಡಲೇಬೇಕು. ಇಲ್ಲದಿದ್ದರೆ ನಾವು ನಮ್ಮ ಪ್ರದೇಶಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಬಾರ್ಡರ್‌ನಲ್ಲಿರುವ ಅವರು ನಮ್ಮ ಕನ್ನಡ ಜನತೆಯ ಮೇಲೆ ದಬ್ಬಾಳಿಕೆಯನ್ನು ಮಾಡಿ ರಕ್ತಪಾತವನ್ನು ನಡೆಸುವ ಪ್ರಸಂಗ ಬರುತ್ತದೆ. ಆದ್ದರಿಂದ ನಮ್ಮಲ್ಲಿರತಕ್ಕ ಮುಂದಾಳು ನಾಯಕರುಗಳು ಮತ್ತು ಮುಖಂಡರುಗಳೆಲ್ಲರೂ ಒಂದಾಗಿ ನಮ್ಮ ಕನ್ನಡ ಭಾಗಗಳನ್ನು ಗಡೀ ಪ್ರದೇಶದಲ್ಲಿ ಉಳಿಸಿಕೊಳ್ಳದಿದ್ದರೆ ನಮ್ಮ ಜನತೆಯೇ ಮುಖಂಡರುಗಳ, ನಾಯಕರುಗಳ ಮೂಗನ್ನು ಕೊಯ್ಯುತ್ತಾರೆ. ಜನತೆ ಸುಮ್ಮನಿದ್ದಾರೆಂದು ನೀವು ತಿಳಿಯಬೇಡಿ. ಎಲ್ಲಿಯವರೆಗೆ ಸರಿಯಾಗಿ ಹೋಗುತ್ತೀರಿ ಅಲ್ಲಿಯವರೆಗೂ ಜನತೆ ಸುಮ್ಮನೆ ಇರುತ್ತಾರೆ. ನೀವು ತಪ್ಪು ದಾರಿಗೆ ಹೋದರೆ ಆಗ ಜನಗಳೇ ಬಂದು ನಿಮಗೆ ಮಾರ್ಗದರ್ಶನ ಮಾಡುತ್ತಾರೆ. ಈ ದೃಷ್ಟಿಯಿಂದ ಶ್ರೀಮಾನ್ ಗೋಪಾಲಗೌಡರು ತಂದಿರತಕ್ಕ ರೆಸಲ್ಯೂಷನ್ ಏನಿದೆ ಅದನ್ನು ಸಂಪೂರ್ಣವಾಗಿ ಇಂಪ್ಲಿಮೆಂಟ್ ಮಾಡಬೇಕು. ಶ್ರೀಮತಿ ಇಂದಿರಾಗಾಂಧಿಯವರ ಬಳಿಗೆ ಎಲ್ಲ ಪಾರ್ಟಿಯ ಡಿಲಿಗೇಷನ್ ಹೋಗಿ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡಬೇಕು. ಇಲ್ಲಿ ಕುಳಿತುಕೊಂಡು ಹೇಳುವುದು ಬೇಡ. ಎಸ್.ಆರ್.ಸಿ. ಆಕ್ಟ್ ಪ್ರಕಾರವಾಗಲೀ, ಪಾಟಸ್ಕರ್ ಸೂತ್ರದ ಪ್ರಕಾರವಾಗಲೀ ಈ ಗಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಹೇಳಿದರೆ ಅದಕ್ಕೆ ಕೊನೆಯಿಲ್ಲದಂತಾಗುತ್ತದೆ. ದಯಮಾಡಿ ಎಲ್ಲರೂ ದೊಡ್ಡ ಮನಸ್ಸು ಮಾಡಿ ಇಂಡಿಕೇಟ್ ಮತ್ತು ಸಿಂಡಿಕೇಟಿನ ಎಲ್ಲಾ ಸದಸ್ಯರೂ ಕೂಡಿಕೊಂಡು ನಮ್ಮ ಶ್ರೀಮಾನ್ ಶಿವಪ್ಪನವರೂ ಕೂಡಿಕೊಂಡು ಇದನ್ನು ಬಗೆಹರಿಸಬೇಕು. ಇವೊತ್ತು ಕರ್ನಾಟಕದವರಿಗೆ ಕಷ್ಟ ಬಂದಿದೆ. ಗಡೀ ಸಮಸ್ಯೆ ಬಂದಿದೆ. ಬಹಳ ದಿವಸ ಈ ಕಷ್ಟ ಇರುವುದಿಲ್ಲ. ಇದೆಲ್ಲವೂ ಚವಾಣರ ಕುತಂತ್ರ. 1972ರ ಮೇಲೆ ಚವಾಣರಿಗೆ ರಾಜಕೀಯ ಭವಿಷ್ಯ ಇಲ್ಲ. ಈಗ ಚವಾಣರು ಮಾಡಿರತಕ್ಕ ಕುತಂತ್ರ ಅಷ್ಟು ಸುಲಭವಾಗಿ, ಅಷ್ಟು ಬೇಗ ನಡೆಯುವುದಿಲ್ಲ. ಇದು ಬಹಳ ತಡವಾಗುತ್ತದೆ. ಆದ್ದರಿಂದ ಈಗ ಚವಾಣರು ಏನು ಬೆಳಗಾಮನ್ನು ಕಸಿದುಕೊಳ್ಳಬೇಕೆಂದು ಪ್ಲಾನ್ ಮಾಡಿದ್ದಾರೆ ಆ ಬಗ್ಗೆ ಎಚ್ಚರಿಕೆಯನ್ನು ವಹಿಸಿ ನಾವು ಹೋರಾಟವನ್ನು ಮಾಡಿದರೆ ಬೆಳಗಾಮು ಉಳಿಯುತ್ತದೆ, ಮಹಾಜನ್ ಕಮಿಶನ್ ವರದಿಯನ್ನು ಜಾರಿಗೆ ತರುವುದಕ್ಕೆ ರಿಪಬ್ಲಿಕನ್ ಪಕ್ಷದ ಪರವಾಗಿ ನನ್ನ ಸಂಪೂರ್ಣವಾದ ಬೆಂಬಲ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri G. CHANDRAKANTH (Bidar).—Mr. Speaker Sir, while supporting the resolution moved by my hon friend Sri Gopala Gowda, I would like to say a few words. In view of the peculiar circumstances prevailing in the country, it seems to me, that the same has also been created in the State of Mysore. This situation has arisen because of the differences that have arisen within the Congress party itself, *i.e.*, creation of Indicate and Syndicate Congress. But on this ground we cannot afford to solve the problem of border dispute. In order to settle the border disputes between the states of Maharashtra-Mysore and Kerala-Mysore the Mahajan Commission was appointed and the Commission gave its verdict on the dispute. Again on 15th December 1967 on the floor of this House we all accepted the Mahajan Commission's report

(SRI G. CHANDRAKANTH)

and passed a resolution to the effect that the report should be treated as an award and accepted in toto by the Central Government. Thereafter after a lapse of three years I am really sorry to say that this Government has not endeavoured - even though they had favourable circumstances at the Central level—to solve the problem. Now when the situation seems to be in favour of Maharashtra State, this problem is tried to be hurriedly rushed through and ultimately they are trying to create a Berlin in Belgaum, *i.e.*, by handing over the northern side of the railway line to Maharashtra and the southern side retaining in Mysore State.

Secondly Sir, nothing has been said with regard to Kasargod. According to the Mahajan Commission's Report Kasargod is supposed to be given to Mysore State. The explanation given by the Central Government in not mentioning anything about Kasargod problem is that there is no agitation prevailing with regard to merger of Kasargod in the State of Mysore. In this connection I would like to state that even with regard to handing over of 118 villages to the Maharashtra State also there was no agitation prevailing. When there was no agitation in this regard, I do not see the reason of the Central Government to propose to hand over about 118 villages in Bidar District to Maharashtra State ?

Sir, the Bidar District was bifurcated under the States Reorganisation excluding the four talukas and it was merged with the Hyderabad State. In regard to remaining four talukas of Bidar District the representatives of the Maharashtra representatives of the said four talukas and the representatives of the Telengana unanimously resolved in the Hyderabad Assembly to merge these four talukas of Bidar District into Mysore State. Now even after lapse of several years, leaders like hon. Member Sri Kadam and hon. Member Sri Sayanak, etc., are tryinng to keep this problem alive, for all times. With regard to the institutions where Marathi pupils are there, they also submitted a memorandum to the Mahajan Commission. If they concede to transfer 118 villages of Bidar District to Maharashtra, I feel, it will be a sheer injustice that will be done to Mysore State.

7-00 P.M.

Further Sir, when this Mahajan Commission Report came out, it is the Chief Minister of Maharashtra who was the first to say that whatever by the report, whether it goes against Maharashtra or against Mysore, we will accept it as an award. Now they are trying to throw it to winds. It would be very unbecoming of them to say that.

One more point that pains me very much is, many reports received from Commissions have been thrown to winds saying there is no sanctity behind them. If this mentality continues, if we do not attach any sanctity to the reports that are given by eminent people like MAHAJAN

and SHAH, I am afraid, Sir, hereafter such eminent, may not come forward to accept such responsibilities. If this is sought to be done to retaliate against the SYNDICATE Government that is functioning in the State of Mysore, I would like to say they will have to face a bitter situation in the future.

With these few words, I have only to say that if the Mahajan Commission Report is implemented, I can only say that it will part off an agitation and it will be sheer injustice done to Kannadigas and not to the Government alone.

Sri S. V. AGNIHOTRI.—Mr. Speaker, I move :

"That the time may be extended up to 9-00 P.M."

Mr. SPEAKER.—If we finish the debate early, there is nothing to prevent us from rising earlier. But let us extend it by two hours. I will put the proposition to the House :

The question is :

"That the time may be extended up to 9-00 P.M."

The motion was adopted.

†ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ನಮ್ಮ ಮೈಸೂರು ಗಡಿ ಸಮಸ್ಯೆಗೆ ಸಂಬಂಧಪಟ್ಟ ಒಂದು ಪ್ರಸ್ತಾವನೆಯು ಕಳೆದ ಮೂರು ದಿನಗಳಿಂದ ಚರ್ಚೆಯಾಗುತ್ತಾ ಇದೆ. ಈ ಮನೆಯ ಮುಂದೆ ಮೂಲಭೂತವಾಗಿ ಬಂದಿರತಕ್ಕ ಪ್ರಸ್ತಾವನೆಗೆ ತಿದ್ದುಪಡಿ ರೂಪದಲ್ಲಿ 4—5 ಪ್ರಸ್ತಾವನೆಗಳು ಸಹ ಬಂದು ಸಭೆಯಲ್ಲಿ ಚರ್ಚೆಯಾಗುತ್ತಾ ಇದೆ. ಚರ್ಚೆ ಮಾಡತಕ್ಕ ಕಾಲದಲ್ಲಿ ಹೆಚ್ಚಾಗಿ ಕರ್ಣಾಟಕಕ್ಕೆ ಇತರ ಕನ್ನಡ ಭಾಗಗಳನ್ನು ಸೇರಿಸುವುದಕ್ಕೆ ಶ್ರಮಪಟ್ಟ ಕನ್ನಡ ನಾಡಿನ ಶಿಲ್ಪಿಯಾಗಿರತಕ್ಕ ಮಾನ್ಯ ನಿಜಲಿಂಗಪ್ಪನವರನ್ನು ಮತ್ತು ಅವರಿಂದ ಆಡಳಿತವನ್ನು ತೆಗೆದುಕೊಂಡು ಮುಂದುವರದ ಶ್ರೀ ವೀರೇಂದ್ರಪಾಟೀಲರನ್ನು ಅನೇಕ ಮಹನೀಯರು ಟೀಕಿಸುತ್ತಾ ಅವರ ಮೇಲೆ ಮತ್ತು ಅವರ ಸರ್ಕಾರದ ಮೇಲೆ ಬಹಳ ಅಪಾದನೆಗಳನ್ನು ಹೊರಿಸಿದ್ದಾರೆಂಬುದನ್ನು ಯಾರಾದರೂ ನೆನೆಸಿಕೊಳ್ಳಬಹುದು. ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಶ್ರೀಮಾನ್ ವಿರೇಂದ್ರ ಪಾಟೀಲರು, ಇವರಿಬ್ಬರೇ 1956ನೇ ಇಸವಿಯಾದ ಮೇಲೆ ಅಂದರೆ ರಾಜ್ಯದ ಪುನರ್‌ವಿಂಗಡಣೆಯಾದಮೇಲೆ, ಈ ರಾಜ್ಯದ ಹೊಣೆಯನ್ನು ಹೊತ್ತಿದ್ದಾರೆಂಬುದನ್ನು ನಾನಾದರೂ ಹೇಳಲು ತಯಾರಾಗಿಲ್ಲ. ಈ 13 ವರ್ಷಗಳಲ್ಲಿ 6 ಸರ್ಕಾರಗಳು ಬಂದು ಹೋಗಿವೆ. ನಾನಾದರೂ, ರಾಜ್ಯಪುನರ್ ವಿಂಗಡಣೆಯಾದ ಮೇಲೆ ಈ ಒಂದು ಕಾಯಿದೆಯಲ್ಲಿ ಅಳವಡಿಸಿರತಕ್ಕ ಸಣ್ಣಪುಟ್ಟ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಇರತಕ್ಕ ಅವಕಾಶವನ್ನು 1956ನೇ ಇಸವಿಯಿಂದ ನಮ್ಮ ರಾಜ್ಯದಲ್ಲಿ ಬಂದ 6 ಸರ್ಕಾರಗಳು ಕೂಡ ಆ ಪ್ರಯತ್ನದ ಕಡೆ ದಿಟ್ಟತನದ ನಿಲುವನ್ನು ತಾಳಿಲ್ಲವೆಂಬುದನ್ನು ಮಾತ್ರ ಹೇಳುತ್ತೇನೆ, ಹೊರತು, ಬರೀ ನಿಜಲಿಂಗಪ್ಪನವರ ಮೇಲೆ, ಅಥವಾ ವೀರೇಂದ್ರ ಪಾಟೀಲರ ಮೇಲೆ ಟೀಕೆ ಮಾಡುತ್ತಾ ಹೋದರೆ, ಅದರಿಂದ ನಾವು ಯಾವ ಪುರುಷಾರ್ಥವನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಅವರ ಸರ್ಕಾರದ ಬಗ್ಗೆ, ಆಡಳಿತದ ಬಗ್ಗೆ ಏನಾದರೂ ಲೋಪದೋಷಗಳು ಇದ್ದರೆ, ಅದನ್ನು ಹೇಳತಕ್ಕದ್ದು ಸರಿ. ಅವರೆ ಗಡಿಯ ಪ್ರಶ್ನೆಯಬಗ್ಗೆ ಕಳೆದ 13 ವರ್ಷಗಳಿಂದ ಬಂದಂತಹ ಆರು ಸರ್ಕಾರಗಳು ಕೂಡ ಯಾವ ಒಂದು ದಿಟ್ಟ ನಿಲುವನ್ನು ತಾಳಲಿಲ್ಲ ವೆಂದು ಹೇಳುತ್ತೇನೆ. ಅದರಿಂದ ಕನ್ನಡ ರಾಜ್ಯಕ್ಕೆ ಸೇರಬೇಕಾದ ಕನ್ನಡ ಪ್ರದೇಶಗಳು ಇಂದು ಹಾಗೆಯೇ ಉಳಿದಿವೆ. ಇವತ್ತು ಬೆಳಗಾಂನ್ನು ಕಳೆದುಕೊಳ್ಳತಕ್ಕ ಸ್ಥಿತಿ ಉಂಟಾಗಿದೆ. ರಾಜ್ಯ ಪುನರ್‌ವಿಂಗಡಣೆ ಕಾನೂನಿನಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಭಾಗಗಳು ಅಕ್ಕಪಕ್ಕದ ರಾಜ್ಯದಲ್ಲಿ ಇದ್ದರೆ, ಆ ಬಗ್ಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ; ಮಹಾರಾಷ್ಟ್ರ, ಮೈಸೂರು ಈ ಎರಡು ರಾಜ್ಯಗಳಿಗೆ ಸಂಬಂಧಪಟ್ಟ ಗಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಜೋನಲ್ ಕೌನ್ಸಿಲ್‌ನಲ್ಲೂ ಅವಕಾಶ ಇತ್ತು. ಆದರೂ ಸಹ ಈ ಕೆಲಸಗಳನ್ನು ಜವಾಬ್ದಾರಿ ಹೊಂದಿದವರು ಆಗ ಏಕೆ ಮಾಡಲಿಲ್ಲ? ಕನ್ನಡ

(ಶ್ರೀ ಎಸ್. ಪುಟ್ಟಸ್ವಾಮಿ)

ರಾಜ್ಯಕ್ಕೆ ಸಂಬಂಧಪಟ್ಟ ಆಂಧ್ರದ ಗಡಿ ಸಮಸ್ಯೆಗೆ, ಕೇರಳದ ಗಡಿ ಸಮಸ್ಯೆಗೆ, ಮತ್ತು ಮಹಾರಾಷ್ಟ್ರದ ಗಡಿ ಸಮಸ್ಯೆಗೆ,—ಎಲ್ಲದಕ್ಕೂ ಸಮಗ್ರವಾಗಿ ಪರಿಶೀಲಿಸುವುದಕ್ಕೆ ಒಂದು ಕಮಿಶನನ್ನು ಒಪ್ಪಿಕೊಳ್ಳುವ ಬದಲು, ಕೇವಲ ಮಹಾರಾಷ್ಟ್ರ ಮತ್ತು ಕೇರಳಕ್ಕೆ ಸಂಬಂಧಪಟ್ಟ ಗಡಿಯ ಸಮಸ್ಯೆಗೆ ಮಾತ್ರ ಒಂದು ಕಮಿಶನನ್ನು ನೇಮಕ ಮಾಡಲು ಕೇಂದ್ರ ಸರ್ಕಾರದವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಬಲವತ್ತರವಾದ ಒತ್ತಾಯ ತಂದುದಕ್ಕೆ, ಆಗಿನ ನಾಯಕತ್ವ ವಹಿಸಿದ್ದ ಮಾನ್ಯ ನಿಜಲಿಂಗಪ್ಪ ಒಪ್ಪಿಕೊಂಡಿದ್ದಾರೆಂಬುದನ್ನು ಅವರೇ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿಯುತ್ತೇನೆ. ಈ ಒಂದು ಕಮಿಶನಿನ ನೇಮಕವನ್ನು ಒಪ್ಪಿ, ಈ ಕಮಿಶನಿನ ವರದಿ ಬಂದಮೇಲೆ ಅದು ಈ ಮನೆಯ ಮುಂದೆ ಬಂದು ನಾವು ಒಂದು ತೀರ್ಮಾನವನ್ನು ತೆಗೆದುಕೊಂಡ ಮೇಲೆ ಆ ಬಗ್ಗೆ ಕೇಂದ್ರಸರ್ಕಾರದ ಜೊತೆಯಲ್ಲಿ ನಮ್ಮ ಸರ್ಕಾರ ವ್ಯವಹಾರ ನಡೆಸದೆ, ಕೇಂದ್ರಸರ್ಕಾರದವರು ಪಂಜಾಬ್ ಮತ್ತು ಹರಿಯಾಣಕ್ಕೆ ಸಮಸ್ಯೆಯಾಗಿರತಕ್ಕ ಚಂಡೀಗಡದ ವಿಚಾರದಲ್ಲಿ ಯಾವ ರೀತಿ ನಿರ್ಣಯ ತೆಗೆದುಕೊಂಡರೋ, ಆ ರೀತಿಯಲ್ಲಿ ಇದಕ್ಕೂ ನಿರ್ಣಯ ತೆಗೆದುಕೊಳ್ಳಲು ಬಿಟ್ಟದ್ದು ಜವಾಬ್ದಾರಿಯುತರಾಗಿ ಅಧಿಕಾರ ವಹಿಸಿಕೊಂಡವರದ್ದು ತಪ್ಪು. ಅದಕ್ಕೆ ಯಾವುದೇ ಕಾರಣ ಇರಲಿ, ಅದು ಬೇರೆ ವಿಚಾರ. ಚಂಡೀಗಡದ ಸಮಸ್ಯೆಯನ್ನು ಬಗೆಹರಿಸತಕ್ಕ ಸಮಯದವರೆಗೂ ಈ ಮಹಾಜನ್ ವರದಿಯನ್ನು ಒಪ್ಪಿ ಕೇಂದ್ರ ಸರ್ಕಾರದವರು ಒಂದು ತೀರ್ಮಾನವನ್ನು ಕೊಡಿ ಎಂದು ಕೇಳದೆ ಬಿಟ್ಟದ್ದು, ಬಹುಶಃ ಆ ತಪ್ಪನ್ನು ಅಧಿಕಾರದಲ್ಲಿ ನಿಜಲಿಂಗಪ್ಪನವರು ಇದ್ದರೂ ಹೊರಿಸುತ್ತೇನೆ, ವೀರೇಂದ್ರ ಪಾಟೀಲರು ಇದ್ದರೂ ಹೊರಿಸುತ್ತೇನೆ ಅಥವಾ ಸಿದ್ಧವೀರಪ್ಪನವರು ಇದ್ದರೂ ಹೊರಿಸುತ್ತೇನೆ, ಅಥವಾ ಮಾನ್ಯ ಶಿವಪ್ಪನವರು ಮುಖ್ಯಮಂತ್ರಿಯಾಗಿದ್ದರೂ ಹೊರಿಸುತ್ತೇನೆ. ಈವೊತ್ತಿನ ದಿವಸ ಕನ್ನಡ ನಾಡಿನಲ್ಲಿ ಒಂದು ಭಾವನೆ ಏನೆಂದರೆ, ಶ್ರೀಮಾನ್ ವೀರೇಂದ್ರ-ಪಾಟೀಲ್‌ರು ಮಹಾರಾಷ್ಟ್ರದ ಗಡಿಯ ಸಮಸ್ಯೆಗೆ ಮಾತ್ರ ಹೆಚ್ಚಿನ ಆಸಕ್ತಿಯನ್ನು ತೋರಿಸತಕ್ಕದ್ದರಲ್ಲಿ ಏನೋ ಒಂದು ಕಾರಣ ಇದೆ. ಏಕೆಂದರೆ ಅವರು ತಮಿಳುನಾಡು ಬಾರ್ಡರ್‌ನಲ್ಲಿರತಕ್ಕ ಪ್ರದೇಶಗಳ ಕನ್ನಡಿಗರ ಬಗ್ಗೆ ಮತ್ತು ಕೇರಳದ ಬಾರ್ಡರ್‌ಲ್ಲಿರತಕ್ಕ ಕನ್ನಡಿಗರ ಬಗ್ಗೆ ಅಷ್ಟು ಆಸಕ್ತಿಯನ್ನು ತೋರಿಸುತ್ತ ಇಲ್ಲ.

ತಮಿಳು ನಾಡಿಗೆ ಸೇರಿದಂತಹ ಹೊಸೂರು ಭಾಗದ ಕನ್ನಡಿಗರ ಬಗ್ಗೆ ಆಸ್ತೆ ತೋರಿಸುತ್ತಾ ಇಲ್ಲ. ಆಂಧ್ರ ಬಾರ್ಡರ್‌ನಲ್ಲಿ ಇರತಕ್ಕ ಮಡಕಸಿರಾದ ಕನ್ನಡಿಗರ ಬಗ್ಗೆ ಆಸ್ತೆ ತೋರಿಸುತ್ತಾ ಇಲ್ಲ. ಬೆಳಗಾಂ ಒಂದನ್ನೇ ಮೂಲವಾಗಿ ಹಿಡಿದುಕೊಂಡು ಆಸಕ್ತಿಯನ್ನು ವಹಿಸಿ ಆಸ್ತೆಯನ್ನು ತೋರಿಸುತ್ತಾ ಇರುವುದನ್ನು ನೋಡಿದರೆ ಇದರಲ್ಲಿ ಮೂಲಗುಟ್ಟು ಏನೋ ಇದೆ ಎಂದು ತೋರುತ್ತದೆ. ಕೇಂದ್ರ ಸರಕಾರಕ್ಕೆ ಮಹಾಜನ್ ಅವರು ತಮ್ಮ ವರದಿಯನ್ನು ಕೊಟ್ಟ ಮೇಲೆ ನಾವು ಆ ಬಗ್ಗೆ ನಿರ್ಣಯ ಮಾಡಿ ನಮ್ಮ ಸರಕಾರಕ್ಕೆ ಬೆಂಬಲವನ್ನು ಸೂಚಿಸಿ ಅವರಿಗೆ ಒಂದು ಧೈರ್ಯ ಕೊಟ್ಟ ಮೇಲೆ ಆ ನಿರ್ಣಯವನ್ನು ಕೇಂದ್ರ ಸರಕಾರದ ಮುಂದೆ ಇಟ್ಟ ಮೇಲೆ, ಕೇಂದ್ರ ಸರಕಾರದವರು ನಮ್ಮನ್ನು ಮೋಸಗೊಳಿಸುವುದಕ್ಕೆ ಪ್ರಯತ್ನ ನಡೆಸಿದ್ದಾರೆ ಎಂದು ಈವತ್ತು ಊಹಾಪೋಹದ ಮೇಲೆ ಹೇಳಿ, ಕೇಳಿ ಬಂದಂಥ ಮಾತಿನ ಮೇಲೆ ಇನ್ನೊಂದು ನಿರ್ಣಯವನ್ನು ಮತ್ತೆ ಈ ಮನೆಯ ಮುಂದೆ ತಂದು ಚರ್ಚೆ ಮಾಡಿ ಅದನ್ನು ಪಾಸು ಮಾಡಬೇಕು ಎಂದು ಹೇಳುವುದು ನನಗೆ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ, ಅದು ಸೂಕ್ತವಲ್ಲ ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಏನೇ ಆಗಲಿ ಕನ್ನಡ ನಾಡಿನಲ್ಲಿ ಜನತೆಯು ಯಾವ ರಾಜಕೀಯ ಗೊಂದಲವನ್ನೂ ತಮ್ಮ ಮನಸ್ಸಿನಲ್ಲಿ ಹಾಕಿಕೊಳ್ಳದೆ, ವೀರೇಂದ್ರ ಪಾಟೀಲರು ಧೈರ್ಯವಾಡಿ ಬರೇ ಮಹಾರಾಷ್ಟ್ರ ಮೈಸೂರು ಗಡಿಗೆ ಸಂಬಂಧಪಟ್ಟಂತೆ ಇಂದು ನಮಗೆ ಗಂಡಾಂತರ ಒದಗಿರತಕ್ಕಂಥ ಬೆಳಗಾಮನ್ನು ಭಾಗ ಮಾಡಿ ಮಹಾರಾಷ್ಟ್ರಕ್ಕೆ ಕೊಡುತ್ತಾರೆ ಎನ್ನುವ ಊಹಾಪೋಹದ ಮಾತಿನ ಮೇಲೆ ನಿರ್ಣಯ ಮಾಡುವುದಕ್ಕೆ ಬದಲಾಗಿ, ಕರ್ಣಾಟಕಕ್ಕೆ ಸೇರದಿರುವ ಮೈಸೂರಿಗೆ ಸುತ್ತಮುತ್ತ ಇರುವ ಎಲ್ಲಾ ರಾಜ್ಯಗಳ ಗಡೀ ಬಗ್ಗೆಯೂ ಕೂಡ ತೀರ್ಮಾನವನ್ನು ಕೊಡಿಸುವುದಕ್ಕೆ ಕೇಂದ್ರ ಸರಕಾರದ ಜೊತೆಯಲ್ಲಿ, ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಅವರು ಪ್ರಯತ್ನ ನಡೆಸುವುದಕ್ಕೆ ಈ ಮನೆಯಲ್ಲಿ ಅವರು ಭರವಸೆಯನ್ನು ಕೊಟ್ಟು ನಮ್ಮೆಲ್ಲರ ಸಹಕಾರವನ್ನು ಕೇಳಲಿ. ನನ್ನ ಸ್ವಂತ ಅಭಿಪ್ರಾಯದಲ್ಲಿ ಮತ್ತೆ ಈ ನಿರ್ಣಯವನ್ನು ಮಾಡುವಂಥದ್ದು ಸಾಧುವಾದುದು ಅಲ್ಲವೆಂದು ನನ್ನ ಭಾವನೆ. ಈಗ ನಿರ್ಣಯದ ಮೇಲೆ ಮೂರು ದಿವಸಗಳಿಂದ ಚರ್ಚೆ ನಡೆದಿದೆ. ಈ ಮಾನ್ಯ ಸಭೆಯಲ್ಲಿ ಸದಸ್ಯರೆಲ್ಲರಿಗೂ ಒಂದು ಅಭಯ ವಚನ ಕೊಡಬೇಕು. ಕನ್ನಡ ನಾಡಿನ ರಾಜ್ಯದ ಗಡಿಯಲ್ಲಿ ಇರತಕ್ಕ ಕನ್ನಡ ಭಾಗಗಳ ಸಮಸ್ಯೆ ಬಗೆಹರಿಸುತ್ತೇವೆ, ಕೇಂದ್ರ ಸರಕಾರದ ಜೊತೆಯಲ್ಲಿ ಸಮಾಲೋಚನೆ ನಡೆಸಿ ಇಷ್ಟು ದಿವಸದೊಳಗೆ, ಒಂದು ವರ್ಷದೊಳಗೋ ಆರು ತಿಂಗಳೊಳಗೋ ಈ ಸಮಸ್ಯೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ವೆಸ್ಟರ್ನ್ ಜೋನಲ್ ಕೌನ್ಸಿಲ್‌ನಲ್ಲಿಯೋ ಸದರನ್ ಜೋನಲ್ ಕೌನ್ಸಿಲ್ಲಿ

ನಲ್ಲಿಯೋ ನಮ್ಮ ಗಡಿಗೆ ಸಂಬಂಧಪಟ್ಟ ಜೋನಲ್ ಕೌನ್ಸಿಲ್ಲಿನಲ್ಲಿ ನಾನು ಈ ಒಂದು ವಿಷಯವನ್ನು ತಂದು ದಿಟ್ಟತನದಿಂದ ನಿಲುವನ್ನು ತೆಗೆದುಕೊಂಡು ಎಲ್ಲಾ ಕನ್ನಡ ಭಾಗಗಳನ್ನು ಮೈಸೂರಿಗೆ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ವೀರೇಂದ್ರ ಪಾಟೀಲು ಭರವಸೆಯನ್ನು ಕೊಡುತ್ತಾರೆಂದು ಆಶಿಸುತ್ತೇನೆ. ಸಿದ್ದವೀರಪ್ಪನವರು ತಂದಿರತಕ್ಕ ನಿರ್ಣಯದ ಬಗ್ಗೆ ಜಿಜ್ಞಾಸೆ ಬರುವುದಕ್ಕೆ ಕಾರಣವಿಲ್ಲ. ಬಹುಶಃ ಕೇಂದ್ರ ಸರಕಾರದವರು ನಮಗೆ ಹೇಳದೆ ಕೇಳದೆ ಊಹೆಯಿಂದ ಬಂದಿವೆ ಎಂದು ಹೇಳತಕ್ಕ ಮಾತುಗಳಿಗಿಂತ ನಮ್ಮಲ್ಲಿ ಇರತಕ್ಕ ಕನ್ನಡ ಭಾಗವನ್ನು ಉಳಿಸಿಕೊಂಡು ಜೋನಲ್ ಕೌನ್ಸಿಲ್‌ನಲ್ಲಿ ಉಳಿದ ಕನ್ನಡ ಭಾಗಗಳನ್ನು ಕೇಳುವ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಒಂದು ದೃಷ್ಟಿಯಿಂದ ಈ ಒಂದು ಪ್ರಸ್ತಾವನೆಯನ್ನು ಸಿದ್ದವೀರಪ್ಪನವರು ಈ ಮನ ಮುಂದೆ ತಂದಿದ್ದಾರೆಯೋ ಹೊರತು ಗೋಪಾಲಗೌಡರು ಇಟ್ಟಿರತಕ್ಕ ನಿರ್ಣಯಕ್ಕೆ ವಿರೋಧ ಮಾಡುವ ಸಂದರ್ಭವಾಗಲಿ ಸರಕಾರವನ್ನು ವಿರೋಧಿಸಬೇಕು ಎನ್ನುವ ದೃಷ್ಟಿಯಿಂದಾಗಲಿ ತಂದಿಲ್ಲ ಎಂದು ಹೇಳಿ ವೀರೇಂದ್ರ ಪಾಟೀಲರು ಎಲ್ಲಾ ಪಕ್ಷದ ಮುಖಂಡರ ಜೊತೆಯಲ್ಲಿ ಸಮಾಲೋಚನೆ ಮಾಡಿ ಮತ್ತೊಂದು ನಿರ್ಣಯವನ್ನು ಈ ಸಭೆಯ ಮುಂದೆ ಇಟ್ಟು ಪಾಸು ಮಾಡಿಕೊಳ್ಳುತ್ತಾರೆಂದು ಸೂಚನೆಯನ್ನು ಹೇಳಿ ನನಗೆ ಅವಕಾಶಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

†ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದೆ ಅನೇಕ ನಿರ್ಣಯಗಳು ಬಂದಿವೆ. ಬಹುಶಃ ಒಂದೇ ನಿರ್ಣಯ ಬಂದಿದ್ದರೆ ಚೆನ್ನಾಗಿತ್ತು ಎಂದು ನನಗನಿಸುತ್ತದೆ. ನಾವು ಈಗ ಬಹಳ ಗಂಭೀರ ಪರಿಸ್ಥಿತಿಯಲ್ಲಿ ಇದ್ದೇವೆ. ಕನ್ನಡ ನಾಡಿಗೆ ನಾವು ನಿರೀಕ್ಷಣೆ ಮಾಡಿದಂಥ ಈ ದುರ್ಘಟನೆ ಸಂಭವಿಸಿವೆ ಸ್ಟೇಟ್ ರೀ ಆರ್ಗನೈಸೇಷನ್ ಕಮಿಷನ್ ಒಂದು ತೀರ್ಪು ಕೊಟ್ಟಮೇಲೆ, ಉಳಿದ ಸಣ್ಣಪುಟ್ಟ ವಿಚಾರಗಳನ್ನು ಎಸ್. ಆರ್. ಸಿ. ಭಾಷೆಯಲ್ಲಿ ಹೇಳುವುದಾದರೆ ಮೈನರ್ ಅಡ್ಜಸ್ಟ್‌ಮೆಂಟ್ಸ್ ಎಂದು ಏನು ಹೇಳುತ್ತಾರೆ, ಅವುಗಳನ್ನು ಉಭಯ ರಾಜ್ಯಗಳ ಮುಖ್ಯ ಮಂತ್ರಿಗಳು ಸೇರಿ ಇತ್ಯರ್ಥ ಮಾಡಿಕೊಳ್ಳಬೇಕು ಎನ್ನುವುದು ಸ್ಪಷ್ಟವಾದಂಥ ವಿಚಾರ. ಉದಾಹರಣೆಗೆ ಮದರಾಸು ಮತ್ತು ಆಂಧ್ರ ದೇಶದ ಮುಖ್ಯ ಮಂತ್ರಿಗಳು ಆ ರೀತಿ ಸೇರಿ ಸರಿಪಡಿಸಿಕೊಂಡರು. ಆದರೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಮಹಾರಾಷ್ಟ್ರ ರಾಜ್ಯದ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಅನೇಕ ಸಾರಿ ಈ ವಿಷಯದಲ್ಲಿ ಚರ್ಚೆ ಮಾಡಿದರೂ ಕೂಡ ನಮ್ಮ ದುರ್ದೈವದಿಂದ ಈ ಸಮಸ್ಯೆ ಇತ್ಯರ್ಥವಾಗಲಿಲ್ಲ. ಇತ್ಯರ್ಥವಾಗಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಅನೇಕ ವರ್ಷಗಳು ಹಾಗೆಯೇ ಇತ್ಯರ್ಥವಾಗದೆ ನಿಂತಿದ್ದರಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಮಹಾಜನ್ ಆಯೋಗ ನೇಮಕದ ಬಗ್ಗೆ ಚರ್ಚೆ ಮಾಡಿ ಅದರಲ್ಲಿ ಒಬ್ಬರು ಸದಸ್ಯರು ಇರಬೇಕೇ, ಮೂರು ಜನ ಸದಸ್ಯರು ಇರಬೇಕೇ ಎಂದು ಚರ್ಚಿಸಿ ಕೊನೆಗೆ ಒಬ್ಬ ಸದಸ್ಯರು ಇರಬೇಕೆಂದು ನಿರ್ಣಯ ಮಾಡಿದರು. ಹಾಗೆ ಆ ನಿರ್ಣಯ ಮಾಡುವ ಕಾಲಕ್ಕೆ ಮಹಾಜನ್ ಕೊಡುವ ತೀರ್ಪು ಉಭಯ ರಾಷ್ಟ್ರಕ್ಕೂ ಅನ್ವಯಿಸುವಂಥಾದ್ದು ಏನೇ ತೀರ್ಮಾನ ಇರಲಿ ಉಭಯ ರಾಜ್ಯಗಳು ಒಪ್ಪಿಕೊಳ್ಳಬೇಕು, ಕೇಂದ್ರ ಸರಕಾರ ಅದನ್ನು ಅನುಷ್ಠಾನಕ್ಕೆ ತರಬೇಕು ಎಂದು ಹೇಳಿ ಕೇಂದ್ರ ಸರಕಾರ ಹಾಗೂ ಮಹಾರಾಷ್ಟ್ರ, ಮೈಸೂರು ರಾಜ್ಯಗಳ ಒಪ್ಪಂದದಿಂದ ಆದಂಥ ನಿರ್ಣಯ ಅದು. ಅದಾದ ಮೇಲೆ ಮೈಸೂರಿಗೆ ಮಹಾಜನ್ ರಿಪೋರ್ಟ್‌ನಿಂದ ಬೆಳಗಾಂ ಉಳಿದಿದೆಯೋ ಹೊರತಾಗಿ ಮೈಸೂರಿಗೆ ನಷ್ಟವಾಗಿದೆ. ನಿಪ್ಪಾಣಿ ಭಾಗ ಹೋಗಿದೆ, ಒಳ್ಳೆಯ ಕಾಡುಗಳಿಂದ ಕೂಡಿದ ಪ್ರದೇಶ ಹೋಗಿದೆ. ಖಾನಾಪುರ ಭಾಗಗಳು ಹೋಗಿವೆ. ಆದರೆ ಅವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಕಾಸರಗೋಡನ್ನು ಸೇರಿಸಿದ್ದಾರೆ. ಕಾಸರಗೋಡು ಮೊದಲೇ ನಮಗೆ ಬರಬೇಕಾಗಿತ್ತು. ಹಿಂದೆ ಪ್ರಾಂತ ಪುನರ್ವಿಂಗಡಣಾ ಸಮಿತಿಯಲ್ಲಿ ಪಣಿಕ್ಕರ್ ಇದ್ದುದರಿಂದ ಅದನ್ನು ಕೇರಳಕ್ಕೆ ಕೊಟ್ಟಿದ್ದರು. ಗೂಡಲೂರು ಕೇರಳಕ್ಕೆ ಹೋಗಬೇಕಾಗಿತ್ತು. ಆದರೆ ಅದನ್ನು ಮದರಾಸಿನಲ್ಲಿ ಉಳಿಸಿದರು. ಹೀಗೆ ಅಂತರ ರಾಜ್ಯಗಳ ವಿವಾದ ಪರಿಹರಿಸುವಾಗ ಹೀಗೆಯೇ ಆಗಬೇಕು ಎಂದು ಹೇಳುವುದು ಕಷ್ಟ. ಪ್ರತಿಯೊಂದು ರಾಜ್ಯದಲ್ಲಿಯೂ ಬೇರೆ ಭಾಷೆ ಮಾತನಾಡುವವರು ಇರುತ್ತಾರೆ. ಮದರಾಸಿನಲ್ಲಿ ಕನ್ನಡಿಗರು, ನಮ್ಮಲ್ಲಿ ತಮಿಳರು, ಬೆಂಗಳೂರು ನಗರವನ್ನು ತೆಗೆದುಕೊಂಡರೆ ಇಲ್ಲಿ ಬಹುಭಾಗ ತಮಿಳರು ವಾಸ ಮಾಡುತ್ತಿದ್ದಾರೆ. ನಾವೆಲ್ಲಾ ಒಂದೇ ರಾಜ್ಯಕ್ಕೆ ಸೇರಿದವರು ಎಂದು ಗೆರೆ ಹಾಕಿ ಮಾಡುವುದಕ್ಕೆ ಕಷ್ಟವಾಗಿದೆ. ಆದ್ದರಿಂದ ಪಣಿಕ್ಕರ್‌ರವರು ತಪ್ಪಾಗಿ ಏನು ಕೇರಳಕ್ಕೆ ಕೊಟ್ಟಿದ್ದರು ಅದನ್ನು ಮಹಾಜನ್‌ರವರು ನಮಗೆ ವಾಪಸ್ಸು ಕೊಟ್ಟಿದ್ದಾರೆ. ಮೈಸೂರು ರಾಜ್ಯ ಮತ್ತು ಮಹಾರಾಷ್ಟ್ರದ ನಡುವೆ ಇರುವ ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಮಹಾಜನ್ ಆಯೋಗ ನೇಮಿಸಿದರು. ಮಹಾಜನ್ ತೀರ್ಪನ್ನು ಒಪ್ಪಿದೆವು. ಮಹಾರಾಷ್ಟ್ರದವರು ಅಂತೆಯೇ

(ಶ್ರೀ ಡಿ. ಎಂ. ಸಿದ್ದಯ್ಯ)

ಅದನ್ನು ಒಪ್ಪಬೇಕಾಗಿತ್ತು. ಮತ್ತು ಕೇಂದ್ರ ಸರಕಾರದವರು ಅದನ್ನು ಅನುಷ್ಠಾನಕ್ಕೆ ತರಬೇಕಾಗಿತ್ತು. ಕೇಂದ್ರ ಸರಕಾರದವರು ಏನು ಮಾಡುತ್ತಾರೆ ನೋಡೋಣವೆಂದು ಕಾದೆವು. ಈ ಮಾನ್ಯ ಸಭೆಯಲ್ಲಿ ಈ ಪ್ರಶ್ನೆ ಬಂದಾಗ, ಮಹಾ ಪ್ರಧಾನಿಗಳು, ಗೃಹ ಮಂತ್ರಿಗಳೂ ಇದನ್ನು ಆದಷ್ಟು ಬೇಗ ಬಗೆಹರಿಸುವ ಭರವಸೆ ಕೊಟ್ಟಿದ್ದಾರೆ ಎಂದು ನಮ್ಮ ಮುಖ್ಯ ಮಂತ್ರಿಗಳು ನಮಗೆ ಉತ್ತರವನ್ನು ಕೊಟ್ಟಿದ್ದಾರೆ. ಈ ಮಧ್ಯೆ ಒಂದು ವರ್ಷದ ಹಿಂದೆ ಪೇಪರ್‌ನಲ್ಲಿ ಮಹಾಜನ್ ವರದಿ ಗೃಹ ಖಾತೆಯಲ್ಲಿ ಮಾಯವಾಗಿದೆ ಎಂದು ಬಂದಿತ್ತು. ಈ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಮಹಾರಾಷ್ಟ್ರ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಾಯಕ್‌ರು ಮೊದಲು ಆಯೋಗದ ನೇಮಕಕ್ಕೆ ಒಪ್ಪಿ ಆಮೇಲೆ ಅದರ ವರದಿ ಮಹಾರಾಷ್ಟ್ರಕ್ಕೆ ಅನಾನುಕೂಲವಾಗಿದೆ ಅದನ್ನು ಒಪ್ಪುವುದಿಲ್ಲ ಎಂದರೆ ಇದು ಯಾವ ಪ್ರಜಾಪ್ರಭುತ್ವ ಧರ್ಮ ಎಂದು ಮಾನ್ಯ ಸ್ನೇಹಿತರಾದಂಥ ಮಾನ್ಯ ನಂದಿಹಾಳ್ ಅವರು ಹೇಳಬೇಕು. ಪ್ರಜಾಪ್ರಭುತ್ವ ರೀತಿಯಂತೆ ಪ್ರತಿಯೊಂದು ವಿಚಾರದಲ್ಲಿಯೂ ವ್ಯಾಜ್ಯ ಹರಿಸಬೇಕು ಎಂದು ಅವರು ಹೇಳಿದರು. ಅದಕ್ಕೆ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮಹಾಜನರು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದು ಒಂದು ನಿಷ್ಪಕ್ಷಪಾತ ದೃಷ್ಟಿಯಿಂದ ತೀರ್ಪನ್ನು ಕೊಟ್ಟಾಗ ಅದನ್ನು ಏತಕ್ಕೋಸ್ಕರ ಒಪ್ಪಲಿಲ್ಲ, ಒಪ್ಪದೆ ಇರುವುದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿದೆಯೇ ಎಂದು ನಂದಿಹಾಳ್ ಅವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

Sri B. P. KADAM.—Is his approach uniform ? Are the principles applied uniform ? Is it not that they differ from place to place ? Is it not a total advantage to Mysore ? Is it not a partisam document ?

ಶ್ರೀ ಡಿ. ಎಮ್. ಸಿದ್ದಯ್ಯ.—ಅವರು ಸಂಪೂರ್ಣವಾಗಿ ತಪ್ಪು ತಿಳಿದುಕೊಂಡಿದ್ದಾರೆ. ಮಹಾಜನ್ ಆಯೋಗದ ವರದಿಯಿಂದ ಮೈಸೂರಿಗೆ ಅನುಕೂಲವಾಗಿಲ್ಲ. ಮೈಸೂರಿಗೆ ಬರಬೇಕಾದ ಭಾಗಗಳು ಹೋಗಿವೆ. ಒಂದು ವರ್ಷಕ್ಕೆ 4–5 ಕೋಟಿ ರೂಪಾಯಿಗಳ ವ್ಯಾಪಾರ ನಿಪ್ಪಾಣಿಯಲ್ಲಿ ನಡೆಯುತ್ತದೆ. ಅದು ಹೋಗುತ್ತದೆ. ಖಾನಾಪುರ ಭಾಗಗಳು ಹೋಗಿರುವುದು ಅಪರಿಮಿತವಾಗಿದೆ. ಅಲ್ಲಿ ಅರಣ್ಯ ಸಂಪತ್ತು ಇದೆ, ಒಂದು ಕಡೆ ಒಂದು ತತ್ವವನ್ನು ಅನುಸರಿಸಿ ಇನ್ನೊಂದು ಕಡೆ ಅದನ್ನು ಕೈಬಿಟ್ಟಿದ್ದಾರೆಂದು ಹೇಳುವುದು ಸರಿಯಲ್ಲ. ಯಾರೇ ನಿಷ್ಪಕ್ಷಪಾತವಾಗಿ ತೀರ್ಮಾನ ಮಾಡಿದರೂ ಕೂಡ ಪರಿಪೂರ್ಣವಾಗಿ ಎರಡು ರಾಜ್ಯಗಳಿಗೂ 100ಕ್ಕೆ ನೂರರಷ್ಟು ತೀರ್ಪು ಸರಿಯಾಗಿ ಕೊಡುವುದಕ್ಕಾಗುವುದಿಲ್ಲ. ಯಾವ ಆಯೋಗವೇ ಆಗಲೀ ಆ ರೀತಿ ತೀರ್ಮಾನವಮಾಡುವುದಕ್ಕಾಗುವುದಿಲ್ಲ. ಇವತ್ತಿನದಿವಸ ಇಂದು ಮಹಾಜನ್ ವರದಿ ನಮ್ಮ ಮುಂದೆ ಇದೆ. ಸುಪ್ರೀಂ ಕೋರ್ಟ್ ಜಡ್ಜ್ ಆಗಿದ್ದವರು ಒಂದು ತೀರ್ಮಾನವನ್ನು ಕೊಟ್ಟಮೇಲೆ, ಈಗ ಅದು ಅವಾರ್ಡ್ ಅಲ್ಲವೆಂದು ಹೇಳುವ ಪರಿಸ್ಥಿತಿಗೆ ಈ ಪ್ರಶ್ನೆ ಬರಬೇಕಾದರೆ ಇದು ರಾಜಕಾರಣವೇ ಹೊರತು ಧರ್ಮಬುದ್ಧಿಯಲ್ಲವೆಂದು ನಾನು ಹೇಳುತ್ತೇನೆ. ಈ ದೇಶದ ದೌರ್ಭಾಗ್ಯದಿಂದ ಈಗ ಕಾಂಗ್ರೆಸ್ ಒಡೆದುಹೋಗಿ ಎರಡು ಹೋಳುಗಳಾಗಿವೆ. ಇಂಡಿಕೇಟ್ ಆಗಲೀ ಅಥವಾ ಸಿಂಡಿಕೇಟ್ ಆಗಲೀ ರಾಜ್ಯದ ಹಿತವನ್ನು ಸಾಧಿಸುವುದು ಬಹಳ ಪ್ರಾಮುಖ್ಯವಾದ ವಿಷಯವೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಮಾನ್ಯ ಶ್ರೀ ಸಿದ್ಧವೀರಪ್ಪನವರು ಈ ಪ್ರಶ್ನೆಯನ್ನು ಎಸ್. ಆರ್. ಸಿ.ಗೆ ಒಪ್ಪಿಸಬೇಕೆಂದು ಒಂದು ಸೂಚನೆಯನ್ನು ಕಳುಹಿಸಿದ್ದಾರೆ. ಮಹಾಜನ್ ವರದಿಯ ವಿಷಯದಲ್ಲಿ ಅವರು ಏನು ಅಭಿಪ್ರಾಯವನ್ನು ಈಗ ಹೇಳುತ್ತಾ ಇಲ್ಲ. ಆದರೆ ಮಹಾಜನ್ ವರದಿ ಬಗ್ಗೆ ಸರ್ಕಾರದವರು ಒಂದು ನಿಲುವನ್ನು ಹೊಂದಿದ್ದಾರೆ. ಮಹಾಜನ್ ವರದಿಯನ್ನು ಅನುಷ್ಠಾನಕ್ಕೆ ತರುವುದರಿಂದ ಕಾಸರಗೋಡಿನಿಂದಲೂ ನಮಗೆ ಅನುಕೂಲವಾಗುತ್ತದೆ. ಅಂತಹ ಸ್ಥಿತಿಯಲ್ಲಿ ಈ ಒಂದು ನಿರ್ಣಯವನ್ನು ಒಪ್ಪಿಕೊಳ್ಳದೆ ಇವತ್ತಿನದಿವಸ ತಮ್ಮದೇ ಆದಂಥ ನಿರ್ಣಯವನ್ನು ಇಲ್ಲಿ ಮಂಡಿಸಬೇಕೆಂದು ಹೋಗುವುದರಲ್ಲಿ ಏನು ಅರ್ಥವಿದೆ? ಅವರು ಕರ್ಣಾಟಕ ರಾಜ್ಯಸ್ಥಾಪನೆಯಾಗುವಾಗ ಈ ದೇಶದ ಗೃಹ ಸಚಿವರಾಗಿ ಸೇವೆಯನ್ನು ಮಾಡಿದ್ದಾರೆ. ಅಂತಹವರಿಗೆ ನಾನು ಈಗ ಕರ್ಣಾಟಕರಾಜ್ಯದ ಪರವಾಗಿ ಕೃತಜ್ಞತೆಯನ್ನು ಸೂಚಿಸಬೇಕಾಗಿದೆ. ಮಾನ್ಯ ಶ್ರೀ ಚನ್ನಬಸಪ್ಪನವರೂ ಸಹ ಮಾನ್ಯ ಶ್ರೀ ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ ಬಹಳ ಮಹತ್ವವಾದಂಥ ಸೇವೆಯನ್ನು ಸಲ್ಲಿಸಿ ಎಂಥಾ ಕಠಿಣ ಸಮಸ್ಯೆಗಳು ಬಂದಿದ್ದರೂ ಅವನ್ನು ಬಗೆಹರಿಸಿ ಹಿಂಜರಿಯದೆ ನೇರವಾದ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಅಂದಮೇಲೆ ಈಗ ಕೇವಲ ರಾಜಕೀಯ ಕಾರಣಗಳಿಗೋಸ್ಕರವಾಗಿ ಅವರು ತೀರ್ಮಾನ ತೆಗೆದುಕೊಂಡಿರುವುದು ನನಗೆ ಬಹಳ ದುಃಖವಾಗಿದೆ. ಕೆಲವು ಕಡೆಗಳಲ್ಲಿ ರಾಜ್ಯಸರ್ಕಾರಗಳ ಪರಿಸ್ಥಿತಿ ಹದಗೆಟ್ಟಿದೆ. ಆದರೆ ಮೊದಲಿನಿಂದಲೂ ನಮ್ಮ ರಾಜ್ಯ ಸರ್ಕಾರ

ಒಂದು ಮಾದರಿಯಾಗಿತ್ತು. ಹೇಗೋ ಪ್ರಧಾನ ಮಂತ್ರಿಗಳೂ ಸಹ ಒಂದು ರೀತಿ ನಮ್ಮ ರಾಜ್ಯ ಸರ್ಕಾರಕ್ಕೂ ಸಹಾಯಮಾಡುತ್ತಿದ್ದರು. ಈಗ ತಮ್ಮ ಪಕ್ಷಕ್ಕೆ ಬೆಂಬಲಕೊಡುತ್ತಾ ಇಲ್ಲವೆಂಬ ಕಾರಣದಿಂದ ತತ್ವಗಳಿಗೆ ಬಲ ಕೊಡುತ್ತಿದ್ದಾರೆ. ನಾಳೆ ಚುನಾವಣೆಯಲ್ಲಿ ಇಂಡಿಕೇಟ್ ಬಹುಮತವನ್ನು ಪಡೆದು ಈ ಕರ್ಣಾಟಕ ರಾಜ್ಯವನ್ನು ಆಳಬಹುದು ಅಥವಾ ಇನ್ನೊಂದು ಪಕ್ಷ ಆಳಬಹುದು, ರಾಜ್ಯಭಾರ ಮಾಡಬಹುದು. ಯಾವಾಗಲೂ ಮಂತ್ರಿಮಂಡಲ ಪ್ರಾಮಾಣಿಕವಾಗಿ ಕೆಲಸಮಾಡಬೇಕು. ಏಕೆಂದರೆ ಈ ದೇಶದ ರಾಜ್ಯಭಾರಮಾಡುವುದು ಒಂದು ಪಕ್ಷಕ್ಕೆ ಏನೂ ಗುತ್ತಿಗೆಯಲ್ಲ. ಇದು ಎರಡೂವರೆ ಕೋಟಿ ಜನರ ಪ್ರಶ್ನೆ. ದೇಶದ ಎರಡೂವರೆ ಕೋಟಿ ಜನರ ನಂಬಿಕೆಗಳಿಸಿ ರಾಜ್ಯಭಾರಮಾಡಬೇಕು. ಎಂದಿಗೂ ನಾವೇ ಶಾಶ್ವತವಾಗಿ, ಸ್ವತಂತ್ರವಾಗಿ ರಾಜ್ಯಭಾರ ಮಾಡುತ್ತೇವೆ, ಇದು ನಮ್ಮ ಗುತ್ತಿಗೆ ಎಂಬುದಾಗಿ ಯಾರೂ ಹೇಳುವ ಹಾಗಿಲ್ಲ. ಮಾನ್ಯ ಶ್ರೀ ದಯಾನಂದಸಾಗರ್ ಅವರು ಭಾಷಣ ಮಾಡುತ್ತಾ ಕೆಲವು ದೃಷ್ಟಾಂತಗಳನ್ನು ಕೊಟ್ಟಿದ್ದು ನೋಡಿದರೆ ಅವು ಬಹಳ ಅಹಿತವಾಗಿತ್ತು. ಸಮ್ಮಿಶ್ರ ಮಂತ್ರಿಮಂಡಲ ಮಾಡಿಕೊಂಡು ಫ್ರಂಟ್ ಮಾಡೋಣ ಎಂದು ಹೇಳಿದರು ನಮ್ಮ ನಾಡಿನ ಈ ಸಭೆಯ ಸದಸ್ಯತ್ವ ಶಾಶ್ವತವಾಗಿದೆಯೆಂಬ ಅಭಿಪ್ರಾಯದಿಂದ ಆ ರೀತಿ ಮಾತನಾಡಿದರು. ಯಾರೇ ಆಗಲಿ ಅವನು ಕನ್ನಡಿಗನಾಗಿ ಹೋರಾಡುವುದಕ್ಕೆ ಹಕ್ಕು ಇಲ್ಲವೇ ಅವನಿಗೂ ಮಾತೃಪ್ರೇಮ ಇಲ್ಲವೇ ಎಂದು ನಾನು ಹೇಳುತ್ತೇನೆ. ಹಾಗೆ ಅಧಿಕಾರವನ್ನು ತೆಗೆದುಕೊಂಡು ಹೋಗಬೇಕೇ ಎಂದು ನಾನು ಕೇಳುತ್ತೇನೆ. ಕಷ್ಟಬಂದಾಗ್ಗೆ ಸಂದಿಗ್ಧ ಸನ್ನಿವೇಶಗಳು ಬಂದಾಗ್ಗೆ ಮಾನ್ಯ ಸದಸ್ಯರಲ್ಲಿ ರಾಜಕೀಯ ಭಿನ್ನಾಭಿಪ್ರಾಯ ಏನೇ ಇರಲಿ, ವೈಯಕ್ತಿಕ ಭಿನ್ನಾಭಿಪ್ರಾಯ ಏನೇ ಇರಲಿ, ನಾವೆಲ್ಲರೂ ಏಕಮುಖವಾಗಿ ಒಂದೇ ಕಂಠದಿಂದ ಒಂದು ನಿರ್ಣಯಮಾಡಿ ಕಳುಹಿಸಬೇಕು. ಅಲ್ಲದೆ ಕೇವಲ 16 ಜನರ ಮೂಲಕವೇ ಇಡೀ ಎರಡೂವರೆ ಕೋಟಿ ಜನಗಳಿಗೆ ಕೇಂದ್ರಸರ್ಕಾರದಲ್ಲಿ ನಂಬಿಕೆ, ಮಾನ್ಯತೆ ದೊರೆಯುತ್ತದೆಂದು ಹೇಳುವುದರಲ್ಲಿ ಅರ್ಥವಿಲ್ಲ. ಇದರಿಂದ ನಮ್ಮಲ್ಲಿ ಭಿನ್ನಾಭಿಪ್ರಾಯಗಳು ಬಂದಿರುವುದಾಗಿದೆ. ಇವತ್ತಿನದಿವಸ ಅಂತಹ ಒಂದು ಸಮಯವನ್ನೇ ಕಾಯುತ್ತಿರುವವರು ಇದನ್ನು ಉಪಯೋಗಿಸಿಕೊಳ್ಳುತ್ತಾರೆ. ಈಗ ಈ ಸಭೆಯಲ್ಲಿ ಬೇರೆ ನಿರ್ಣಯವನ್ನು ಮಂಡಿಸಿರುವವರಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ರಾಜಕೀಯ ಭಿನ್ನಾಭಿಪ್ರಾಯವನ್ನು ಎಲ್ಲರೂ ಬದಿಗಿಡೋಣ. ಇಲ್ಲದಿದ್ದರೆ ಎರಡು ಹೋಳಾಗಿ ಚುನಾವಣೆಗೆ ಹೋಗಿ ಮಹಾಜನ್ ಅವರ ವರದಿಯನ್ನು ಒಪ್ಪಿಕೊಳ್ಳಬೇಕೇ ಬೇಡವೇ ಎನ್ನುವುದನ್ನೂ ಜನತೆಯೇ ನಿರ್ಧಾರಮಾಡಲಿ. ಆಗ ಯಾವ ಪಕ್ಷ ಚುನಾವಣೆಯಲ್ಲಿ ಗೆದ್ದು ಬರುತ್ತದೋ ಆ ಪಕ್ಷವೇ ಒಂದು ಸರ್ಕಾರ ನಡೆಸಲಿ. ಆ ಒಂದು ಸರ್ಕಾರ ರಾಜ್ಯಭಾರ ನಡೆಸತಕ್ಕದ್ದು ಗೌರವವಾದದ್ದು. ಇವತ್ತಿನದಿವಸ ದೇಶದ ಜನತೆಗೆ ಕಲ್ಯಾಣವಾಗಬೇಕು. ಇವತ್ತಿನದಿವಸ ಕರ್ಣಾಟಕಕ್ಕೆ ಬಂದಿರುವ ವಿಪತ್ತಿನಿಂದ ಪಾರಾಗಲು ಹೆಚ್ಚು ಪ್ರಯತ್ನಮಾಡಬೇಕು. ಈ ದೇಶದಲ್ಲಿರುವ ಬಡತನ, ಅನ್ಯಾಯಗಳನ್ನು ಹೋಗಲಾಡಿಸುವುದನ್ನು ಬದಿಗೊತ್ತಿ ಕೇವಲ ಅಧಿಕಾರಕ್ಕೋಸ್ಕರ ಈ ರೀತಿ ಹಿರಿಯ ನಾಯಕರುಗಳು ಹೋರಾಟ ನಡೆಸುತ್ತಿದ್ದರೆ ಅದಕ್ಕಿಂತ ಹೆಚ್ಚಿನ ದ್ರೋಹ ಕನ್ನಡನಾಡಿಗೆ ಇನ್ನು ಯಾರೂ ಮಾಡುತ್ತಾ ಇಲ್ಲವೆಂದು ಹೇಳಬಹುದು. ಇವತ್ತು ಕೆಲವರು ಸಿಂಡಿಕೇಟ್ ಸರ್ಕಾರದಲ್ಲಿರಬಹುದು.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಸದಸ್ಯರು ಹೇಳಿದ ಧಾಟಿ ನೋಡಿದರೆ, ಇಲ್ಲಿ ಬೇರೆಬೇರೆ ಪಕ್ಷಗಳು ಇವೆ. ಸರ್ಕಾರ ಇದರ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡಿದ್ದಕ್ಕೆ ಇಲ್ಲಿ ಭಿನ್ನಾಭಿಪ್ರಾಯ ಬರಬಹುದೆಂದು ಹೇಳುತ್ತಿದ್ದಾರೆ. ನಮ್ಮ ನಿಲುವಿನ ಬಗ್ಗೆ ನಮ್ಮ ಪಕ್ಷದ ಮಾನ್ಯ ಶ್ರೀ ಸಿದ್ಧವೀರಪ್ಪನವರು ಒಂದು ನಿರ್ಣಯವನ್ನು ಇಟ್ಟಿದ್ದಾರೆ. ಇದರಲ್ಲಿ ಏನೋ ಒಂದು ಭಿನ್ನಾಭಿಪ್ರಾಯವಿದ್ದರೂ ಕೂಡ ಈ ದೇಶದ ಹಿತರಕ್ಷಣೆ ಬಗ್ಗೆ ನಿಮಗಿಂತ ನಾವೇನೂ ಕಡಿಮೆ ಇಲ್ಲ ಯಾವ ಪಕ್ಷಕ್ಕೂ ಕಡಿಮೆ ಇಲ್ಲ. ಈ ದೇಶದ ಹಿತವನ್ನು ಕಾಪಾಡುವುದಕ್ಕೆ ನೀವು ಏನು ಇದ್ದೀರೋ ಅದಕ್ಕಿಂತ ಒಂದು ಹೆಜ್ಜೆ ಮುಂದೆಯೇ ನಾವು ಇದ್ದೇವೆ. ಆದರೆ ಇದನ್ನೇ ಭೂತಾಕಾರವಾಗಿ ಮಾಡಬೇಡಿ.

ಶ್ರೀ ಕೆ. ಎಚ್. ಶ್ರೀನಿವಾಸ.—ನಿಮ್ಮದ್ದು ಬರೀ ಭಾಷಣದಲ್ಲಿಯೇ ಆಯಿತು.

ಶ್ರೀ ಜಿ. ದುಗ್ಗಪ್ಪ.—ನೀವು ಹೊಸಬರು. ಹಳೆಯ ಸ್ನೇಹಿತರಿಗೆ ಹೇಳಲು ಹೊರಟಿದ್ದೀರಿ. ನೀವು ಎಲ್ಲೆಲ್ಲಿ ತಪ್ಪು ಹೆಜ್ಜೆಗಳನ್ನು ಇಟ್ಟಿದ್ದೀರೋ ಅದನ್ನು ಸರಿಪಡಿಸಿಕೊಳ್ಳಿ. ಕೇಂದ್ರ ಸರ್ಕಾರದವರ ವಿಶ್ವಾಸವನ್ನು ಗಳಿಸಿ.

ಶ್ರೀ ಡಿ. ಎಂ. ಸಿದ್ಧಯ್ಯ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದುಗ್ಗಪ್ಪನವರು ಹೇಳಿದವಿಷಯ ನಮಗೆ ಗೊತ್ತಿದೆ. ಅವರ ಪಕ್ಷಕ್ಕಾಗಲೀ, ಅವರಿಗಾಗಲೀ ಕನ್ನಡನಾಡಿನಮೇಲೆ ಅಭಿಮಾನ ಇಲ್ಲವೆಂದು ಹೇಳುವುದಿಲ್ಲ. ನಮಗಿಂತಲೂ ಅವರಿಗೆ ಅಭಿಮಾನ ಜಾಸ್ತಿ ಇದೆ. ಆದರೆ ಈಗ ಪ್ರಶ್ನೆ

(ಶ್ರೀ ಡಿ. ಎಂ. ಸಿದ್ದಯ್ಯ)

ಇರುವುದು ಶ್ರೀಮಾನ್ ಗೋಪಾಲಗೌಡರ ನಿರ್ಣಯಕ್ಕೂ ಮಾನ್ಯ ಶ್ರೀ ಸಿದ್ದವೀರಪ್ಪನವರ ನಿರ್ಣಯಕ್ಕೆ ವ್ಯತ್ಯಾಸವಿದೆ. ಮಾನ್ಯ ಶ್ರೀ ಗೋಪಾಲಗೌಡರ ನಿರ್ಣಯದಲ್ಲಿ ಮಹಾಜನ್ ಅವರ ವರದಿಯನ್ನು ಕಾರ್ಯಗತಮಾಡಬೇಕೆಂಬುದು ಇದೆ. ಕರ್ಣಾಟಕದ ರಾಜ್ಯದ ಹಿತದೃಷ್ಟಿಯಿಂದ ಅದನ್ನು ಎತ್ತಿಹಿಡಿಯುವುದು ಒಳ್ಳೆಯದು ಎಂದು ಹೇಳುತ್ತೇನೆ. ಆದರೆ ಶ್ರೀ ಸಿದ್ದವೀರಪ್ಪನವರ ಎಸ್. ಆರ್. ಸಿ. ನಿಲುವಿನ ಪ್ರಕಾರ ಕರ್ಣಾಟಕ ರಾಜ್ಯದ ಹಿತವನ್ನು ರಕ್ಷಣೆಮಾಡುವುದಕ್ಕಾಗುತ್ತದೆಯೇ? ಈಗ ಈ ಸಮಸ್ಯೆಯನ್ನು ಪುನಃ ಹೊಸದಾಗಿ ಎತ್ತಿದ ಹಾಗೆ ಆಗುತ್ತದೆ. ಇದರಿಂದ ಮಹಾಜನ್ ಅವರ ವರದಿಗೆ ಯಾವ ವಿಧವಾದ ಮಾನ್ಯತೆ ಬರುವುದಿಲ್ಲ. ಮಾನ್ಯ ಶ್ರೀ ದುಗ್ಗಪ್ಪನವರು ಇದರ ಬಗ್ಗೆ ಯಾವ ಸಂಶಯವನ್ನೂ ಪಡುವ ಹಾಗೆ ಇಲ್ಲ. ಕನ್ನಡನಾಡಿನ ಬಗ್ಗೆ ಅವರಿಗೆ ಇರುವ ಅಭಿಮಾನದ ವಿಷಯದಲ್ಲಿ ನನಗೆ ಸಂಶಯವಿಲ್ಲ. ನಾನು ಹೇಳಿದಹಾಗೆ ಇಂತಹ ಕ್ಲಿಷ್ಟ ಸನ್ನಿವೇಶದಲ್ಲಿ ಸಂದಿಗ್ಧ ಸನ್ನಿವೇಶದಲ್ಲಿ ಕನ್ನಡನಾಡಿನ ಧ್ಯೇಯವನ್ನು ಏಕಮುಖವಾಗಿ ಇಡುವ ಕಾಲದಲ್ಲಿ ಉಳಿದ ವಿಷಯಗಳಲ್ಲಿ ಸರ್ಕಾರಕ್ಕೂ ನಮಗೂ ಏನೇ ಭಿನ್ನಾಭಿಪ್ರಾಯವಿದ್ದರೂ, ರಾಜ್ಯಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಬಂದಿರುವಾಗ ಒಂದೇ ಒಂದು ಕಂಠದಿಂದ ನಾವು ನಮ್ಮ ನಿಲುವನ್ನು ಹೇಳಬೇಕೆಂಬ ಒಂದು ದೃಷ್ಟಿಯಿಂದ ಇಲ್ಲಿ ನಾನು ಹೇಳುತ್ತಿದ್ದೇನೆ.

ಇನ್ನೊಂದು ಮಾತು. ಕಾಸರಗೋಡಿನ ವಿಷಯ. ಈಗಿನ ನಿರ್ಣಯದಲ್ಲಿ ಅದನ್ನು ಬಿಟ್ಟಿದ್ದಾರೆ. ಕಾಸರಗೋಡಿನ ವಿಷಯವನ್ನು ಈ ನಿರ್ಣಯದಲ್ಲಿ ಸೇರಿಸದೇ ಇದ್ದರೂ, ಮಹಾಜನ್ ಅವರ ವರದಿಯಲ್ಲಿ ಇದರ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಇದರಲ್ಲಿ ಬರುವುದಿಲ್ಲ ಈ ನಿರ್ಣಯ ಪರಿಪೂರ್ಣವಾಗಿರುವುದರಿಂದ, ಮಾನ್ಯ ಶ್ರೀ ಸಿದ್ದವೀರಪ್ಪನವರು ದೊಡ್ಡಮನಸ್ಸು ಮಾಡಿ ಅವರು ಮಂಡಿಸಿರುವ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡು ಮಾನ್ಯ ಶ್ರೀ ಗೋಪಾಲಗೌಡರು ತಂದಿರತಕ್ಕ ನಿರ್ಣಯಕ್ಕೆ ಏಕಕಂಠದಿಂದ ನಾವೆಲ್ಲರೂ ಬೆಂಬಲ ಕೊಡುವುದು ಒಳ್ಳೆಯದು. ಹಿಂದೆ ಮಾಡಿದಂತೆ ನಾವು ಈಗ ಒಂದು ನಿರ್ಣಯಮಾಡಿ ಕೇಂದ್ರಸರ್ಕಾರಕ್ಕೆ ಕಳುಹಿಸುವುದು ಒಳ್ಳೆಯದೆಂದು ನಾನು ವಿನಯಪೂರ್ವಕವಾಗಿ ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯವಿರಬೇಕು. ಯಾವ ಸರ್ಕಾರದಲ್ಲಿಯೇ ಆಗಲೀ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ಆದರೆ ನಾವು ಯಾವ ಒಂದು ಭಿನಾಭಿಪ್ರಾಯವನ್ನು ತೋರಿಸದೆ ಕನ್ನಡನಾಡಿನ ಒಂದು ಐಕಮತ್ಯವನ್ನು ಸಾಧಿಸುವುದರಲ್ಲಿ ಕನ್ನಡಿಗರು ಒಂದು ಎಂಬ ವಿಶಾಲವಾದ ಬುದ್ಧಿಯಿಂದ ಮಾನ್ಯ ಶ್ರೀ ಗೋಪಾಲಗೌಡರು ತಂದಿರತಕ್ಕ ನಿರ್ಣಯಕ್ಕೆ ಬೆಂಬಲ ಕೊಟ್ಟು ಇದನ್ನು ಸರ್ವಾನುಮತದಿಂದ ಪಾಸ್ ಮಾಡೋಣವೆಂದು ನಾನು ಪ್ರಾರ್ಥನೆಯನ್ನು ಸಲ್ಲಿಸಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

7-20 P.M.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಸನ್ಮಾನ್ಯ ಸಭಾಪತಿಗಳೇ, ಈ ದಿನ ಒಂದು ಗಂಭೀರವಾದ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಬಂದೊದಗಿದೆ. ಇದರಲ್ಲಿ ಗಡಿ ವಿವಾದ ಬಹಳವಾಗಿ ಉಲ್ಬಣಿಸಿ ಈಗಾಗಲೇ ಅನೇಕ ಕಡೆಗಳಲ್ಲಿ ಘರ್ಷಣೆಗಳೂ ಕೂಡ ಆಗುತ್ತಾ ಇವೆ. ಇಂತಹ ಒಂದು ಸನ್ನಿವೇಶದಲ್ಲಿ ಈ ಗಡಿ ವಿವಾದವನ್ನು ಬಗೆಹರಿಸುವುದರ ಬಗ್ಗೆ ನಾನಾ ಸೂಚನೆಗಳು ಕೇಂದ್ರದಿಂದ ಬಂದಿವೆ ಎಂದು ಹೇಳಲಾಗಿದೆ, ಅದರ ಬಗ್ಗೆ ನಮಗೆ ಯಾವ ದೃಷ್ಟಿಕೋಣ ಇರಬೇಕು ಧೋರಣೆ ಇರಬೇಕು ಎಂಬುದನ್ನು ಕೆಲವು ನಿರ್ಣಯಗಳೂ ಸೂಚಿಸಿವೆ. ನಾನೂ ಒಂದು ನಿರ್ಣಯ ಕಳುಹಿಸಿದ್ದೆ. ಶ್ರೀಮಾನ್ ಗೋಪಾಲಗೌಡರು ತಂದಂತಹ ನಿರ್ಣಯವನ್ನು ನಾನು ಅನುಮೋದಿಸಿ ನನ್ನ ನಿರ್ಣಯವನ್ನು ವಾಪಸು ತೆಗೆದುಕೊಂಡಿದ್ದೇನೆ. ಇದರಲ್ಲಿ ಒಂದು ಪ್ರಶ್ನೆ ಏನು ಬರುತ್ತದೆ ಎಂದರೆ ಮೊದಲನೆಯದಾಗಿ ಕೆಲವೊಂದು ತಪ್ಪಭಿಪ್ರಾಯಗಳನ್ನು ಇಲ್ಲಿ ಮಾನ್ಯ ಸದಸ್ಯರ ಮನಸ್ಸಿನಿಂದಲೂ ಮತ್ತು ಎಲ್ಲ ಜನತೆಯ ಮನಸ್ಸಿನಿಂದಲೂ ಕೂಡ ತೆಗೆಯಲಿಕ್ಕೆ ಇಚ್ಛೆ ಪಡುತ್ತೇನೆ. ಅದೇನೆಂದರೆ ನಮ್ಮ ಪಕ್ಷ, ಕಮ್ಯೂನಿಸ್ಟ್ ಪಕ್ಷ, ಇದು ಸಿಂಡಿಕೇಟ್ ಸರ್ಕಾರ ತಂದಂತಹ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ಇದೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಸ್ನೇಹಿತರು ಕೆಲವರು ವ್ಯಕ್ತಪಡಿಸಿದರು. ಅದಕ್ಕೆ ಇಷ್ಟು ಹೇಳಬೇಕಾಗಿದೆ. ಅದೇನೆಂದರೆ ಇವತ್ತಿನ ದಿವಸ ನಮ್ಮ ಮಾನ್ಯ ಮಿತ್ರರು ಹೇಗೆ ಸಿಂಡಿಕೇಟ್ ಸರ್ಕಾರವನ್ನು ಕಟುವಾಗಿ ಟೀಕೆ ಮಾಡುತ್ತಾರೆಯೋ ಅಷ್ಟೇ ಕಟುವಾಗಿ ಮತ್ತು ಅದಕ್ಕಿಂತ ಹೆಚ್ಚು ಕಟುವಾಗಿ ಟೀಕೆ ಮಾಡುವಂತಹ ಜನ ನಾವು ಎಂಬುದನ್ನು ನಾನು

ಅವರಿಗೆ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇದು ವೀರೇಂದ್ರ ಪಾಟೀಲರ ಸರ್ಕಾರ ಆದರೂ ಮೂಲಭೂತವಾಗಿ ವಿಚಾರ ಮಾಡಿ ನೋಡಬೇಕು. ವ್ಯಕ್ತಿಶಃ ಅವರು ಒಳ್ಳೆಯವರೇ, ಕೆಟ್ಟವರೇ ಎಂಬ ದೃಷ್ಟಿಯಿಂದ ನೋಡುವಂತಹ ವಿಷಯ ಇದು ಅಲ್ಲ. ಅವರ ಮೂಲಭೂತವಾದ ಧೋರಣೆ ಏನಿದೆ ಅದು ತಪ್ಪು, ಮತ್ತು ಅವರು ತಪ್ಪು ಮಾಡುತ್ತಾ ಇದ್ದಾರೆ ಎಂಬುದು ಬಹಳ ಸ್ಪಷ್ಟವಾಗಿದೆ. ಅವರ ಪ್ರಗತಿ ಪರವಾದ ಧೋರಣೆಯನ್ನು ಯಾವ ರೀತಿಯಲ್ಲೂ ತಾಳುತ್ತಾ ಇಲ್ಲ. ನಮ್ಮ ಮುಖ್ಯ ಮಂತ್ರಿಗಳಾಗಿದ್ದ, ಕಾಂಗ್ರೆಸ್ ಅಧ್ಯಕ್ಷರಾಗಿರುವ ಮಾನ್ಯ ನಿಜಲಿಂಗಪ್ಪನವರು ಯಾವ ಧೋರಣೆ ಯನ್ನು ಅನುಸರಿಸುವುದಕ್ಕೆ ಪ್ರಯತ್ನಪಡುತ್ತಾ ಇದ್ದಾರೋ ಅದನ್ನು ಪ್ರತಿಯೊಂದು ಕಡೆಯಲ್ಲೂ ಹೇಳುತ್ತಾ ಇದ್ದಾರೆ. ಬ್ಯಾಂಕ್ ರಾಷ್ಟ್ರೀಕರಣ ಆಗಕೂಡದು, ಆಗಿದ್ದು ತಪ್ಪು, ಭೂಸುಧಾರಣೆ ಆಗಿದ್ದು ತಪ್ಪು. ಇವತ್ತಿನ ದಿವಸ ಫಂಡಮೆಂಟಲ್ ರೈಟ್ ಟು ಪ್ರಾಪರ್ಟಿ ಏನಿದೆ ಅದನ್ನು ಬದಲಾವಣೆ ಮಾಡಕೂಡದೆಂದು ಸಾರುತ್ತಿದ್ದಾರೆ. ಇವತ್ತಿನ ದಿವಸ ಇರತಕ್ಕ ಘಟನಾವಳಿ ಏನಿದೆ ಬಂಡವಾಳ ಗಾರರು, ಜಮೀನ್ದಾರರು, ಭೂಮಾಲಿಕರು ಇವರಿಗೆ ವಿರೋಧವಾಗಿ ಏನೊಂದೂ ಬದಲಾವಣೆ ಯಾಗಕೂಡದು ಎನ್ನುತ್ತಿದ್ದಾರೆ. ಹಾಗೆಯೇ ಇರಬೇಕೆಂಬ ಸಿಂಡಿಕೇಟ್ ಸರ್ಕಾರದ ಧೋರಣೆ ಏನಿದೆ ಇದನ್ನು ಕಟುವಾಗಿ ಟೀಕೆ ಮಾಡುತ್ತೇವೆ. ಇವರು ಏನೂ ಪ್ರಗತಿಪರಕಾರ್ಯ ಸಾಧಿಸಿಲ್ಲ. ಪ್ರತಿಗಾಮಿಗಳಿಗೆ ಬೆಂಬಲ ಕೊಡುತ್ತಿದ್ದಾರೆ. ಇದು ಸರಿಯಾದ್ದಲ್ಲ ಮತ್ತು ಇವರೆಲ್ಲರೂ ಸೇರಿ ಕೇಂದ್ರದಲ್ಲೂ ಸಹ ಇದೇ ಸರ್ಕಾರ ಬರುವುದಕ್ಕೆ ಪ್ರಯತ್ನಪಡುತ್ತಾ ಇದ್ದಾರೆ. ಇಂಡಿಕೇಟ್ ಸರ್ಕಾರ ಮುಂದುವರಿಯದಂತೆ ಅದನ್ನು ಉರುಳಿಸಬೇಕೆಂಬುದೇ ಅವರ ಸ್ಪಷ್ಟ ಅಭಿಪ್ರಾಯ. ನಾವು ಈ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದಿಲ್ಲ. ಜನಸಂಘ—ಸ್ವತಂತ್ರ—ಸಿಂಡಿಕೇಟ್ ಒಕ್ಕೂಟ ಅಧಿಕಾರದಲ್ಲಿರಕೂಡದೆಂಬುದು ನಮ್ಮ ಅಭಿಪ್ರಾಯ. ಹಾಗಿದ್ದರೂ ಸಹ ಏಕೆ ಇವರು ಗಡಿವಿವಾದದ ಬಗ್ಗೆ ತಾಳಿರುವಂತಹ ನಿಲುವನ್ನು ಬೆಂಬಲಿಸುತ್ತಿದ್ದೇವೆ ಎಂದರೆ ಅದು ರಾಜ್ಯದ ಹಿತದಿಂದ ಸರಿ ಯಾಗಿದೆ. ಶ್ರೀಮಾನ್ ಗೋಪಾಲಗೌಡರು ತಂದಿರುವ ನಿರ್ಣಯವನ್ನು ಸಿಂಡಿಕೇಟ್‌ನವರೂ ಒಪ್ಪಿಕೊಳ್ಳುತ್ತಾ ಇದ್ದಾರೆ, ಅಂದಮಾತ್ರಕ್ಕೆ ಇದು ಸರ್ಕಾರಿ ನಿರ್ಣಯವಾಯಿತು ಎಂದು ಹೇಳು ವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಇದೇ ಮನೆಯಲ್ಲಿ ಮಹಾಜನ್ ಆಯೋಗದ ವರದಿಯ ಬಗ್ಗೆ ಚರ್ಚೆನಡೆದಾಗ ಒಂದು ತೀರ್ಮಾನ ತೆಗೆದುಕೊಂಡೆವು. ಆಗ ಸಿದ್ದವೀರಪ್ಪನವರು ಏನು ಮಾತನಾಡಿದರೋ, ಚನ್ನಬಸಪ್ಪನವರು ಏನು ಮಾತನಾಡಿದರೋ—ಅವರು ಈ ಕಡೆ ಇದ್ದರು ಜನತಾ ಪಕ್ಷದ ಪ್ರತಿನಿಧಿಗಳಾಗಿದ್ದರು—ಆಗ ಏನು ಮಾತನಾಡಿದರೋ ಅದನ್ನು ಈಗ ವಿಚಾರ ಮಾಡಬೇಕಾಗಿದೆ. ಆಗ ಅವರು ಹೇಳಿದ್ದೇನೆಂದರೆ ಈ ಒಂದು ನಿರ್ಣಯ ಏನಿದೆ ಇದನ್ನು ಸರ್ಕಾರದ ನಿರ್ಣಯ ಎಂದು ತೆಗೆದುಕೊಳ್ಳಕೂಡದು ಇದು ಈ ಮನೆಯ ನಿರ್ಣಯ, ಕನ್ನಡ ನಾಡಿನ ಜನಗಳಿಗೆ ಅನುಕೂಲಮಾಡುವಂತಹ ನಿರ್ಣಯವೆಂದು ಒಪ್ಪಿಕೊಳ್ಳಬೇಕು ಎಂಬ ಧಾಟಿಯಲ್ಲಿ ಮಾನ್ಯ ಸಿದ್ದವೀರಪ್ಪನವರು ಮಾತನಾಡಿದರು. ಇವತ್ತು ಬೇರೆ ರೀತಿಯಲ್ಲಿ ಹೀಗೆ ಮಾತನಾ ಡುತ್ತಾ ಇರುವುದು ವಿರೋಧಾಭಾಸ ಅಲ್ಲವೇ? ಇದು ಸಮಂಜಸವೇ ಎಂದು ನಾನು ಅವರಿಗೆ ಪ್ರಶ್ನೆ ಹಾಕಬೇಕಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಒಮ್ಮೆ ನಿರ್ಣಯವಾದಮೇಲೆ ಮತ್ತೆ ಪುನಃ ಪುನರಪಿ ಪುನರಪಿ ಮಾಡುವುದು ಸರಿಯೇ

ಶ್ರೀ ಎಂ. ಎಸ್. ಕೃಷ್ಣನ್.—ಇದು ಯಾವ ರೀತಿ ವಿರೋಧಾಭಾಸ ಎಂದರೆ ಆ ದಿನ ಒಂದು ನಿರ್ಣಯವನ್ನು ತೆಗೆದುಕೊಂಡು ಬಂದಾಗ ಇವತ್ತು ಎಲ್ಲಾ ಪಕ್ಷಗಳ ನಿರ್ಣಯ ಎಂದು ಹೇಳಿದರು. ಇವತ್ತು ಎಲ್ಲಾ ಪಕ್ಷಗಳೂ ಸೇರಿ ಒಂದು ನಿರ್ಣಯ ತಂದಾಗ ಸಿಂಡಿಕೇಟ್ ಪಕ್ಷದವರು ಇದನ್ನು ಸಪೋರ್ಟ್ ಮಾಡುತ್ತಾರೆ ಆದ್ದರಿಂದ ಇದು ಎಲ್ಲಾ ಪಕ್ಷಗಳ ನಿರ್ಣಯವಾಗುವುದಿಲ್ಲ ಸರ್ಕಾರಿ ನಿರ್ಣಯ ವಾಗುತ್ತದೆ ಎಂದು ವಾದ ಮಾಡಿದರೆ ಇದು ಸರಿಯಾದ ವಾದವೇ ಅಥವಾ ಶುಷ್ಕವಾದವೇ ಎಂಬು ದನ್ನು ಯೋಚನೆ ಮಾಡಬೇಕಾಗುತ್ತದೆ ಈ ವಾದ ಸರಿಯಿಲ್ಲ ಎಂದು ಇಷ್ಟು ಮಾತ್ರ ಹೇಳಬಯಸುತ್ತೇನೆ. ಇವತ್ತು ನಾನೂ ಕೂಡ ಸಿದ್ದವೀರಪ್ಪನವರ ಜೊತೆಯಲ್ಲಿ ಸಂಪೂರ್ಣವಾಗಿ ಕೆಲವು ವಿಷಯಗಳ ಬಗ್ಗೆ ಒಪ್ಪುತ್ತೇನೆ. ಇವತ್ತಿನ ಪರಿಸ್ಥಿತಿಗೆ ಯಾರು ಹೊಣೆಗಾರರು ಎಂದು ಅವರ ಮಿತ್ರರು ಕೆಲವರು ಮಾತನಾಡಿದರು. ಇವತ್ತು ಇಂತಹ ಒಂದು ಪ್ರಪೋಸಲ್ ಬಂದಿದೆ ಇದಕ್ಕೆ ಯಾರು ಹೊಣೆಗಾರರು? ಮಹಾಜನ್ ಆಯೋಗದ ವರದಿಯನ್ನು ಒಪ್ಪಿಕೊಳ್ಳದೇ ಇದುವರೆಗೂ ಕಾಲಹರಣವಾಗುವುದಕ್ಕೆ ಹೊಣೆಗಾರರು? ಇದಕ್ಕೆ ಮೂಲಭೂತವಾದ ಹೊಣೆಗಾರಿಕೆ ಚೀಫ್ ಮಿನಿಸ್ಟರದು, ಇವರ ಹಿಂದೆ ಚೀಫ್ ಮಿನಿಸ್ಟರ್ ಆಗಿದ್ದ ಮತ್ತು ಸಿಂಡಿಕೇಟ್ ಕಾಂಗ್ರೆಸ್‌ನ ಅಧ್ಯಕ್ಷರದು ಅನ್ನುವುದನ್ನು ಮರೆಯುವ ಹಾಗೇ ಇಲ್ಲ. ಇಂಡಿಕೇಟು, ಸಿಂಡಿಕೇಟು ಒಟ್ಟಿಗೆ ಇದ್ದಾಗ ಇದನ್ನು ಏಕೆ ಜಾರಿಗೆ ತರು ವುದಕ್ಕೆ ಆಗಲಿಲ್ಲ? ಏಕೆ ಸಾಧ್ಯವಾಗಲಿಲ್ಲ ಎಂದರೆ ಅವರಿಗೆ ಶಕ್ತಿ, ಸಾಮರ್ಥ್ಯ ಇರಲಿಲ್ಲ ಎಂದು

(ಶ್ರೀ ಎಂ. ಎಸ್. ಕೃಷ್ಣನ್)

ಹೇಳಬೇಕಾಗಿದೆ. ನಿಜ, ಒತ್ತಾಯ ತರಬೇಕಾಗುತ್ತದೆ, ಆ ಒತ್ತಾಯ ತರಲು ಇವರಿಂದ ಸಾಧ್ಯವಾಗಲಿಲ್ಲ. ಬಿಹಾರದಲ್ಲಿ ಏನಾಯಿತು ? ಕ್ಷಾಮ ಪರಿಹಾರನಿಧಿಗೆ ನಿಧಿಗೆ ಕೇಂದ್ರಸರ್ಕಾರದಿಂದ 80 ಕೋಟಿ ರೂಪಾಯಿ ಕೊಡಬೇಕೆಂದು ಕೇಳಿದಾಗ ಕೇಂದ್ರದವರು ಕೊಡಲಿಲ್ಲ. ಆಗ ಬಿಹಾರದ ಮಂತ್ರಿಮಂಡಲ ಏನು ತೀರ್ಮಾನ ಮಾಡಿತು ಎಂದರೆ ನಾವೆಲ್ಲರೂ ಹೋಗಿ ಪಾರ್ಲಿಮೆಂಟಿನ ಮುಂದೆ ಕುಳಿತುಕೊಂಡು ಒತ್ತಾಯ ತರೋಣ ಅಂತ ತೀರ್ಮಾನ ಮಾಡಿದರು, ಆಗ ಕೇಂದ್ರ ಸರ್ಕಾರ ಅದಕ್ಕೆ ಮಣಿದು ಅವರಿಗೆ ಅನುಕೂಲಮಾಡಿ ಕೊಟ್ಟಿತು. ಅಂತಹ ಒಂದು ದಿಟ್ಟತನದ ನಿಲುವು ತೆಗೆದುಕೊಳ್ಳುವುದಕ್ಕೆ ಏಕೆ ತಯಾರಾಗಲಿಲ್ಲ ಎಂದು ಕೇಳುತ್ತೇನೆ? ಇದು ಅವರ ಅಸಮರ್ಥತೆಯನ್ನು ತೋರಿಸುತ್ತದೆ, ನಿರ್ವೀರ್ಯತೆಯನ್ನು ತೋರಿಸುತ್ತಾ ಇದೆ. ಎಲ್ಲ ವಿಷಯದಲ್ಲೂ ಇದು ಅನ್ವಯಿಸುತ್ತದೆ, ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇಷ್ಟೇ ಅಲ್ಲ ಮಹಾಜನ್ ಕಮಿಷನ್ ವರದಿ ಬರುವುದಕ್ಕೆ ಮುಂಚೆ ಎಲ್ಲರೂ ಒಪ್ಪಿಕೊಂಡು, ವರದಿಬಂದಮೇಲೆ ಅದನ್ನು ಕಾರ್ಯಗತ ಮಾಡಬೇಕು ಅನ್ನುವಾಗ ಶಂಕೆ ಬಂದು, ವಾದ ನಡೆಯಿತು. ಶುಕ್ಲಾರವರು ಚವಾನ್‌ರವರು ಜನಾಭಿಪ್ರಾಯ ತೆಗೆದುಕೊಳ್ಳಬೇಕು ಅಂತ ಹೇಳುತ್ತಾ ಇದ್ದರು. ಆ ಸಂದರ್ಭದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು, ದಿಟ್ಟವಾಗಿ ಮಾತನಾಡಿದರೋ ? ಇಲ್ಲ. ಕಾನ್‌ಸೆಸ್ ಅಲ್ಲ ಅಂತ ಹೇಳಿದರೇ ? ಹೇಳಲಿಲ್ಲ ಆದಕ್ಕೆ ಬದಲಾಗಿ ಅವರು ಹೇಳಿರುವಂತಹ ಒಂದು ಮಾತನ್ನು ಇಲ್ಲ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಈ ರೀತಿ ಇದೆ :

"I expect the Central Government to take a stand on the Mahajan Commission before it is placed before the Parliament."

ಶ್ರೀ ನಿಜಲಿಂಗಪ್ಪನವರು ಯಾವ ಸಂದರ್ಭದಲ್ಲಿ ಮಾತನಾಡಿದ್ದಾರೆ ಎಂಬುದನ್ನು ನೋಡಬಹುದು, ಅವರು, ಈ ಸರಕಾರದ ಜವಾಬ್ದಾರಿ ಹೊತ್ತುಕೊಂಡಿದ್ದರು.

ಇನ್ನೊಂದು ಏನೆಂದರೆ ಪ್ರಶ್ನೋತ್ತರಗಳ ಕಾಲದಲ್ಲಿ ಸಪ್ಲಿಮೆಂಟರಿ ಕೇಳಿದಾಗ ಮುಖ್ಯಮಂತ್ರಿಗಳನ್ನು ಅವರೇನು ಮಾಡಿದರು, ಮಹಾಜನ್ ಕಮಿಷನ್ ಆಯೋಗವಾದಮೇಲೆ, ಅದರ ವರದಿ ಬಂದಮೇಲೆ ಏನು ಮಾಡಿದರು ಎಂದು ಕೇಳಿದ್ದಕ್ಕೆ ಶ್ರೀ ವೀರೇಂದ್ರ ಪಾಟೀಲರು ಪದೇಪದೇ ಪತ್ರ ಬರೆದೆ, ಮೇಲಿಂದ ಮೇಲೆ ಹೋಗಿ ಕಂಡು ಒತ್ತಾಯಮಾಡಿ ಹೇಳಿದೆ, ಸಂಬಂಧಪಟ್ಟವರಿಗೆ ವಿಷಯ ಮನವರಿಕೆ ಮಾಡಿ ಹೇಳಿದೆ ಎಂದು ತಿಳಿಸಿದರು. ಇಷ್ಟು ಮಾತ್ರ ಮಾಡಿದರೆ ಪ್ರಶ್ನೆ ಬಗೆಹರಿಯುವುದಿಲ್ಲ, ಇತ್ಯರ್ಥವಾಗುವುದಿಲ್ಲ. ಬೇರೆ ರಾಜ್ಯಗಳವರು ತಮಗೆ ಬೇಕಾದ ಕೆಲಸವಾಗಲು ಯಾವರೀತಿ ಒತ್ತಾಯಮಾಡಿದ್ದಾರೆ ಮಾಡುತ್ತಿದ್ದಾರೆ, ಎಂಬುದನ್ನು ನೋಡಬೇಕು, ನೋಡಿ ಹಾಗೆ ಮಾಡಿದರೆ ಬೇಗ ಇತ್ಯರ್ಥವಾಗುತ್ತದೆ. ಹಾಗೆ ಮಾಡದಿರುವುದರಿಂದ ಸರಕಾರದವರು ಜವಾಬ್ದಾರಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಈಗ ಇಲ್ಲಿರುವ ಸರಕಾರ ಮತ್ತು ಹಿಂದಿದ್ದ ಸರಕಾರ ಎರಡೂ ಕೂಡ ಈ ಸಂಕಟ ಪರಿಸ್ಥಿತಿಗೆ ಪೂರ್ಣ ಜವಾಬ್ದಾರಿ ಹೊರಬೇಕು.

ಇನ್ನು ನಿರ್ಣಯಕ್ಕೆ ಏಕೆ ಬೆಂಬಲ ಕೊಡುತ್ತೇನೆಂದರೆ ಎರಡು ದೃಷ್ಟಿಯಿಂದ. ಮಹಾಜನ ವರದಿ ಸಮರ್ಪಕವಾಗಿದೆ, ಆದುದರಿಂದ ಒಪ್ಪಬೇಕು ಎಂದು ಯಾರೂ ತೀರ್ಮಾನಮಾಡಿಲ್ಲ. ಅದು ನಮಗೂ ಮತ್ತು ಹಾಗೆಯೇ ಮಹಾರಾಷ್ಟ್ರದವರಿಗೂ ಅಸಮರ್ಪಕವಾಗಿದೆ ; ಹೇಗಾದರೂ ಒಂದು ಇತ್ಯರ್ಥಕ್ಕೆ ಬರಬೇಕು, ಇಲ್ಲದಿದ್ದರೆ ಒಂದು ಭಾಷೆಯವರಿಗೂ ಇನ್ನೊಂದು ಭಾಷೆಯವರಿಗೂ ಜಗಳವಾಗುತ್ತದೆ, ಅದು ಸರಿಯಲ್ಲ, ಆದುದರಿಂದ ಬೇಗ ಅಖೈರಾಗಿ ಇತ್ಯರ್ಥವಾಗಬೇಕು ಎಂಬ ದೃಷ್ಟಿಯಿಂದ ಅದಕ್ಕೆ ಬೆಂಬಲ ನಾವು ಕೊಟ್ಟೆವು. ಮಹಾಜನ್ ವರದಿ ಒಂದು ಅವಾರ್ಡ್ ಎಂದು ತಿಳಿದು ಅದನ್ನು ಜಾರಿಗೆ ತರಬೇಕೆಂದು ಹೇಳಿದೆವು ಈ ವರೆಗೆ ಒಪ್ಪಿಕೊಂಡಿದ್ದರೆ ಎಲ್ಲವೂ ಸಮರ್ಪಕವಾಗಿದೆ ಎಂಬುದು ಅದರ ಅರ್ಥವಲ್ಲ. ಈಗ ಬಂದಿರುವ ಕೆಲವು ವರದಿಗಳೇನಿವೆ ಅವು ಅನ್ಯಾಯವಾದುವು, ಸರಿಯಲ್ಲ. ಈ ಸೂಚನೆಗಳ ಆಧಾರದಮೇಲೆ ಮಾತನಾಡುವುದು ಸರಿಯೇ, ಸ್ಪಷ್ಟವಾಗಿ ಸೂಚನೆಯಿದ್ದರೆ ಅದರ ಮೇಲೆ ಮಾತನಾಡಬಹುದು ಎಂದು ನಮ್ಮ ಮಿತ್ರರು ಹೇಳಿದರು. ಅದು ಸರಿಯಲ್ಲ, ವಾಸ್ತವಾಂಶ ಅನೇಕ ಅಂಶಗಳು ಪತ್ರಿಕೆಗಳಲ್ಲಿ ಬಂದಿದೆ, ಎಲ್ಲರಿಗೂ ಗೊತ್ತಿದೆ. ಹಾಗೆ ಗೊತ್ತಿರುವ ವಿಷಯದ ಮೇಲೆ ಚರ್ಚೆಮಾಡುವುದು ಸರಿಯಾಗಿದೆ, ಇದರಲ್ಲಿ ಭಿನ್ನಾಭಿಪ್ರಾಯವಿರುವಂತಿಲ್ಲ, ಮಾಡಲೇಬೇಕು.

ಶ್ರೀ ಎಸ್. ಪುಟ್ಟಸ್ವಾಮಿ.—ಸೂಚನೆಗಳು ಪತ್ರಿಕೆಯಲ್ಲಿ ಬಂದಿವೆ, ಕೇಳಿ ತಿಳಿದುಕೊಂಡಿದ್ದೇವೆ, ಅದರ ಆಧಾರದಮೇಲೆ ಚರ್ಚೆ ನಡೆಸುವುದು ಸರಿ ಎಂದು ಹೇಳಿದರು. ಹಾಗೆ ಬಂದಿದ್ದರೆ

ಈ ಸಭೆಯ ಮುಂದೆ ಅವನ್ನಿಡಲು ಸರಕಾರ ಏಕೆ ಹಿಂಜರಿಯುವುದು ? 67 ನೇ ಇಸವಿ ಡಿಸೆಂಬರಿನಲ್ಲಿ ಮಹಾಜನ್ ವರದಿ ಬಂದಾಗ ಅದನ್ನೊಪ್ಪಿ ತೀರ್ಮಾನ ಕೈಕೊಳ್ಳಬೇಕೆಂದು ಪ್ರಸ್ತಾವನೆ ತಂದು ಸರಕಾರ ಸಭೆ ಮುಂದಿಟ್ಟಿತು. ಆದರೆ ಈಗ ಜಾಣತನದಿಂದ ಹಾಗೆ ಮಾಡದೆ ಗೋಪಾಲಗೌಡರ ಹೆಸರಿನಲ್ಲೇಕೆ ನಿರ್ಣಯ ಇಡಿಸಬೇಕಾಗಿತ್ತು ?

ಶ್ರೀ ಎಂ. ಎಸ್. ಕೃಷ್ಣನ್.—ಇದಕ್ಕೆ ಉತ್ತರ ನಿರೀಕ್ಷೆಮಾಡಬೇಕಾಗಿಲ್ಲ. ಈಗ ಕೆಲ ಗ್ರಾಮಗಳು ನಮ್ಮ ಕೈಬಿಟ್ಟುಹೋಗುತ್ತವೆಂದು ಪತ್ರಿಕೆಯಲ್ಲಿ ವರದಿಯಾಗಿದೆ ; ರೈಲ್ವೆ ಲೈನಿನ ಆಧಾರದ ಮೇಲೆ ಬೆಳಗಾಂವಿನ ವಿಭಜನೆ ನಡೆಯುವುದೆಂದು ಎಲ್ಲರೂ ಮಾತನಾಡುತ್ತಿದ್ದಾರೆ. ಹಾಗಿರುವಾಗ ಇದರ ಬಗ್ಗೆ ನಾವು ಮಾತನಾಡಬಾರದೆಂದು ಹೇಳುವುದು ಸರಿಯಲ್ಲ. ಜವಾಬ್ದಾರಿಯುತವಾದ ಮಾತಲ್ಲ. ಈ ವಿಚಾರದಲ್ಲಿ ಕೇಂದ್ರ ಸರಕಾರದ ಸ್ಪಷ್ಟವಾದ ನಿಲುವೇನು ಎಂಬುದನ್ನು ದೆಹಲಿಗೆ ಹೋಗಿದ್ದ ಮಳಿಮಠ್ ಮತ್ತು ರಾಚಯ್ಯನವರು ಹೇಳಬಹುದು, ಅವರು ತಿಳಿದುಕೊಂಡು ಬಂದಿರಬಹುದು. ಹಿಂದೆ ಮಹಾಜನರ ವರದಿಬಂದಾಗ ಇಂದಿರಾ ಗಾಂಧಿಯವರು ಅದನ್ನು ಜಾರಿಗೆ ತರಬೇಕೆಂದು ಹೇಳಿ ಈಗೇಕೆ ಬೇರೆ ಸೂಚನೆ ಮಾಡಿದ್ದಾರೆ? ಏಕೆಂದರೆ ಕಾಂಗ್ರೆಸ್‌ನಲ್ಲಿ ಎರಡು ಭಾಗವಾಗಿದೆ, ಇಂಡಿಕೇಟಿಗೂ ಸಿಂಡಿಕೇಟಿಗೂ ಜಗಳವಾಗುತ್ತಿದೆ. ಆದುದರಿಂದ ನಮ್ಮ ನಾಡಿನ ಜನ ಸಾಮಿಲ ಎಂದು ಹೀಗೆ ಮಾಡಿದ್ದಾರೆ ಎಂಬ ಶಂಕೆಯಿದೆ. ಇದು ತಪ್ಪುಧೋರಣೆ ಅದಕ್ಕಾಗಿ ಗೋಪಾಲ ಗೌಡರ ನಿರ್ಣಯಕ್ಕೆ ಬೆಂಬಲ ಕೊಡುತ್ತಿದ್ದೇವೆ.

[Mr. SPEAKER in the Chair]

ಇನ್ನು ಒಂದೇ ಒಂದು ವಿಷಯ. ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ಇತ್ಯರ್ಥವಾಡಿಲ್ಲ, ಆದಕ್ಕ ವಿರೋಧವಾಗಿದೆ ಎಂದು ಎಂ. ಇ. ಎಸ್. ನವರು ಹೇಳಿದ್ದಾರೆ. ಅವರು ಗ್ರಾಮಘಟಕ, ಜನತೆಯ ಅಭಿಲಾಷೆ ಮತ್ತು ಒಂದು ಪ್ರದೇಶ ಇನ್ನೊಂದಕ್ಕೆ ಹೊಂದಿಕೊಂಡಿರುವುದು. ಇವು ಪ್ರಜಾಪ್ರಭುತ್ವ ತತ್ವಗಳೆಂದು ಹೇಳಿದರು. ಇವು ಮಾತ್ರ ಸರಿಯಾದತತ್ವಗಳೆಂದು ಯಾರು ಹೇಳಿದ್ದಾರೆ? ಎಸ್. ಆರ್. ಸಿ. ಕಮಿಷನ್ ಇವನ್ನು ಮಾತ್ರ ಒಪ್ಪಿಲ್ಲ. ಅಂತೆಯೇ ಮಹಾಜನ್ ಕಮಿಷನ್ ಇದನ್ನು ಒಪ್ಪಿಲ್ಲ, ಪಾರ್ಲಿಮೆಂಟಿನಲ್ಲಿ ಹಾಗೆ ತೀರ್ಮಾನವಾಗಿಲ್ಲ. ಅದಲ್ಲದೆ ಎಕನಾಮಿಕ್ ಲಯಬಲಿಟಿ, ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಇವು ಇರಬೇಕು ಎಂದು ಹೇಳಲಾಗಿದೆ. ರಷ್ಯಾದಲ್ಲಿ ಈ ಸಮಸ್ಯೆ ಇತ್ಯರ್ಥವಾಗಿಯೆಂದು ಶ್ರೀ ಕದಂ ಹೇಳಿದರು. ಅಲ್ಲಿ ಸಮತಾವಾದ ತತ್ವವಿದೆ, ವರ್ಗರಹಿತ ಸಮಾಜವಿದೆ, ವರ್ಗಗಳಿಗೆ ತಿಕ್ಕಾಟವಿಲ್ಲ. ಆದುದರಿಂದ ಅಲ್ಲಿ ಸುಲಭವಾಗಿ ಇತ್ಯರ್ಥ ಮಾಡಲು ಸಾಧ್ಯ. ಅಂಥ ಪರಿಸ್ಥಿತಿ ಇಲ್ಲಿ ಬರುವವರೆಗೆ ಕಚ್ಚಾಟ ನಿಲ್ಲುವುದಿಲ್ಲ. ಸಮತಾವಾದ ಬಂದರ ಮಾತ್ರ ಈ ಪ್ರಶ್ನೆ ಪೂರ್ಣವಾಗಿ ಇತ್ಯರ್ಥವಾಗುವುದು. ಅಲ್ಲಿಯವರೆಗೆ ಆದಷ್ಟು ಮಟ್ಟಿಗೆ ಇತ್ಯರ್ಥಮಾಡುವುದು ಯಾವ ಆಧಾರದಮೇಲೆ ಎಂದರೆ ಈಗ ಮಹಾಜನ್ ವರದಿ ಇದೆ, ಅದನ್ನಾದರೂ ಜಾರಿಗೆ ತರಲಿ, ಗಡಿ ಪ್ರಶ್ನೆ ಆಖೈರಾಗಿ ಇತ್ಯರ್ಥವಾಗಲಿ ಎಂದು ನಿರ್ಣಯಕ್ಕೆ ಬೆಂಬಲ ಕೊಡುತ್ತಿದ್ದೇವೆ. ಇನ್ನು ಕೊನೆಯದಾಗಿ ಒಂದು ಎಚ್ಚರಿಕೆ ಕೊಡಬೇಕಾಗಿದೆ. ಈ ಸಂದರ್ಭದಲ್ಲಿ ನ್ಯಾಯವಾದ ರೀತಿಯಲ್ಲಿ ಚಾಕಚಕ್ಯತೆಯಿಂದ ಇತ್ಯರ್ಥಮಾಡಲು ಸರ್ಕಾರ ಪ್ರಯತ್ನಮಾಡಬೇಕು. ಹೋರಾಟ ನಡೆಸಬೇಕು, ವೀರಾವೇಶದಿಂದ ನಡೆಸಬೇಕು, ಒಂದು ಅಂಗಲದಷ್ಟು ನಮ್ಮ ನೆಲವನ್ನು ಸಹ ಮಹಾರಾಷ್ಟ್ರಕ್ಕೆ ಕೊಡುವುದಿಲ್ಲ ಎಂದು ಕೆಲವರು ಹೇಳಿದರು. ಸಂತೋಷ. ಎರಡು ಮೈಸೂರಾಗಬೇಕೆಂದು ಹೇಳುತ್ತಿದ್ದವರು ಈಗ ಒಂದು ಕರ್ನಾಟಕವಾಗಬೇಕೆಂದು ಮಾತನಾಡುತ್ತಿದ್ದಾರೆ. ಸುಮ್ಮನೆ ವೀರಾವೇಶದಿಂದ ಮಾತನಾಡಿದರೆ ಪ್ರಯೋಜನವಿಲ್ಲ. ಒಟ್ಟಿಗೆ ಕುಳಿತು ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬರಲು ಪ್ರಯತ್ನ ಮಾಡಬೇಕು, ಇಲ್ಲದಿದ್ದರೆ ಮುಂದೇನು ಮಾಡಬೇಕೆಂದು ಚರ್ಚೆಮಾಡಿ ಇತ್ಯರ್ಥಮಾಡಬೇಕು ಎಂದು ಸೂಚಿಸಿ ಗೋಪಾಲಗೌಡರ ನಿರ್ಣಯಕ್ಕೆ ಬೆಂಬಲ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri AZEEZ SAIT.—Sir, the hon. Minister Sri B. Rachiah had gone to Delhi to appraise the Central leaders and M. Ps. about the case of Mysore in regard to State boundary. He should have made some statement as to what he did there. I do not know why we are all taken to surprise in this matter ?

Sri H. SIDDAVEERAPPA.—There is some force in what hon. Member Sri Azeez Sait has said. We read in the newspapers that two f the Mysore Ministers went to Delhi in connection with this matter.

(SRI H. SIDDAVEERAPPA)

We would like to know from them what is the position there and whether there is any truth in the reported move of the Central Government or whether they did see any of the Central Ministers and their reactions on the same etc. It is for them to make a statement or not. We are throwing a suggestion, so that we should not take a decision in a vacuum.

Mr. SPEAKER.—It is left to the Hon. Ministers to make statement or not. I cannot compel them to make a statement.

Sri R. DAYANANDA SAGAR.—Sir, after all they have spent State's money for their visit. I am requesting them through you. Kindly use your good offices and see that they make some statement about their visit and the position obtained in Delhi with regard to this problem.

Mr. SPEAKER.—It is for the Hon. Ministers to say anything. I cannot compel them. Now, I call upon hon. Member Sri Mallappa to speak.

† ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸಗಳಿಂದ ಅನುಮಾನ ಮತ್ತು ಕ್ಲಿಷ್ಟವಾದ ಗಡಿ ಸಮಸ್ಯೆಯ ಮೇಲೆ ಚರ್ಚೆ ನಡೆಯುತ್ತಿದೆ. ಮೂಲ ನಿರ್ಣಯವನ್ನು ಶ್ರೀಮಾನ್ ಗೋಪಾಲಗೌಡರು ಮಂಡಿಸಿದ್ದಾರೆ. ಪ್ರತಿಪ್ರಸ್ತಾವನೆಯನ್ನು ನಮ್ಮ ಪಕ್ಷದ ನಾಯಕರಾದ ಶ್ರೀಮಾನ್ ಸಿದ್ಧವೀರಪ್ಪನವರು ಮಂಡಿಸಿದ್ದಾರೆ. ನಾನಾದರೂ ಹೇಳುವುದು ಇಷ್ಟೇ. ಶ್ರೀ ಸಿದ್ಧವೀರಪ್ಪನವರು ಮಂಡಿಸಿರುವ ನಿರ್ಣಯ ಏನಿದೆ ಅದು ಮೂಲ ನಿರ್ಣಯಕ್ಕೆ ವಿರೋಧವಾಗಿಲ್ಲ ಎನ್ನುವ ವಿಷಯವನ್ನು ಸಮರ್ಥಿಸಿ ನಾನು ಮಾತನಾಡಬೇಕೆಂದಿದ್ದೇನೆ. ಏಕೆಂದರೆ ಶ್ರೀ ಮಾನ್ ಸಿದ್ಧವೀರಪ್ಪನವರ ಪ್ರತಿಪ್ರಸ್ತಾವನೆಯನ್ನು ಓದಿದಾಗ ಅದರಲ್ಲಿ ಎಲ್ಲಿಯೂ ಮಹಾಜನ್ ಕಮಿಟಿ ರಿಪೋರ್ಟನ್ನು ಒಪ್ಪಬಾರದು, ಅದರಂತೆ ಕೇಂದ್ರ ನಡೆಯಬಾರದು ಎನ್ನುವ ವಿಷಯವನ್ನು ಎತ್ತಿಲ್ಲ ಅಥವಾ ಆ ವಿಷಯದಲ್ಲಿ ಮಾತನಾಡಿಲ್ಲ. ಒಂದು ವಿಷಯ ಕರ್ಣಾಟಕದ ಎಲ್ಲ ಜನತೆಗೂ ಕೂಡ ಗೊತ್ತಿದೆ. ಕರ್ಣಾಟಕ ರಾಜ್ಯವಾದ ಮೇಲೆ ಇದ್ದ ಗಡಿ ಸಮಸ್ಯೆ ಬರಿ ಮಹಾರಾಷ್ಟ್ರ-ಮೈಸೂರಿನದಲ್ಲ ಕೇರಳ-ಮೈಸೂರಿನದೂ ಅಲ್ಲ, ಇನ್ನೂ ತಮಿಳುನಾಡು-ಮೈಸೂರು ಹಾಗೂ ಆಂಧ್ರ-ಮೈಸೂರು ಇವುಗಳಿಗೂ ಸಂಬಂಧಪಟ್ಟ ಗಡಿ ಸಮಸ್ಯೆಗಳಿವೆ. ಆದರೆ ಇವನ್ನೆಲ್ಲ ಪಂಚಾಯಿತಿಗೆ ಒಪ್ಪಿಸದೆ ಕೇರಳ-ಮೈಸೂರು ಮತ್ತು ಮಹಾರಾಷ್ಟ್ರ-ಮೈಸೂರು ಈ ಸಮಸ್ಯೆಗಳನ್ನು ಮಾತ್ರ ಒಪ್ಪಿಸಿದ್ದು ತಪ್ಪು ಎಂದು ಇಡೀ ಕನ್ನಡ ಜನತೆ ಆ ಕಾಲದಲ್ಲಿ ಮಹಾಜನ್ ಸಮಿತಿ ನೇಮಕವಾದಾಗ ಉಗ್ರ ಚಳುವಳಿಯನ್ನು ನಡೆಸಿತು. ಅದರ ಮೂಲ ಉದ್ದೇಶ ವಿಷ್ಟು. ಗಡಿ ಸಮಸ್ಯೆಗಳನ್ನು ಪದೇ ಪದೇ ಎತ್ತಕೂಡದು ಏನಾದರೂ ಮಾಡಿ ಇದಕ್ಕೆ ಮಂಗಳವನ್ನು ಹಾಡಬೇಕು, ಇದನ್ನು ಆಗಾಗ ಎತ್ತುವುದರ ಮೂಲಕ ನಮ್ಮ ಏನು ಸಮಸ್ಯೆಗಳಿವೆ ಆ ಸಮಸ್ಯೆಗಳನ್ನು ಮೂಲತಹಃ ಬಗೆಹರಿಸುವುದು ನಮಗೆ ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದರು. ಆದರೂ ಕೂಡ ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯದ ಮೇಲೆ ಕೇಂದ್ರ ಸರ್ಕಾರದವರು ಮಹಾಜನ್ ಕಮಿಟಿಯನ್ನು ನೇಮಕ ಮಾಡಿದರು, ಅವರು ತೀರ್ಪನ್ನು ಕೂಡ ಕೊಟ್ಟರು. ಈಗಾಗಲೇ ಅನೇಕ ಜನ ಮಾತನಾಡಿರುವಂತೆ ಮಹಾಜನ್ ಕಮಿಟಿ ರಿಪೋರ್ಟ್ ಮೂಲತಃ ಕರ್ನಾಟಕಕ್ಕೆ ಸಂಪೂರ್ಣವಾಗಿ ಅನುಕೂಲ ತರುವಂಥದ್ದಲ್ಲ. ಅದರಲ್ಲಿ ಕೆಲವು ಭಾಗ, ನಮ್ಮ ಉತ್ಕೃಷ್ಟವಾದ ಭಾಗಗಳು ಮಹಾರಾಷ್ಟ್ರಕ್ಕೆ ಹೋಗುತ್ತವೆ. ಮಹಾರಾಷ್ಟ್ರದಿಂದ ಕೆಲವು ಭಾಗಗಳು ಬರುತ್ತವೆ. ಆದರೆ ನಾವು ಏನು ಮಹಾಜನ್ ಕಮಿಷನ್ ರಿಪೋರ್ಟನ್ನು ಒಪ್ಪಿದ್ದೇವೆ ಅದರಲ್ಲಿ ಅನುಕೂಲವೂ ಆಗುತ್ತದೆ, ಅನಾನುಕೂಲವಾಗುತ್ತದೆ. ಆದರೂ ಅದನ್ನು ಒಪ್ಪೋಣ. ಏಕೆಂದರೆ ನ್ಯಾಯಸಮ್ಮತವಾದ ಒಂದು ಕಮಿಟಿಗೆ, ಪಂಚಾಯಿತಿಗೆ ನಾವು ಒಪ್ಪಿಕೊಂಡ ಮೇಲೆ ಅದರಿಂದ ಅನುಕೂಲವಾಗಲಿ, ಅನಾನುಕೂಲವಾಗಲಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವ ದೃಷ್ಟಿಯಿಂದ ಈ ಮನೆಯಲ್ಲಿ ಕೂಡ ಚರ್ಚೆ ನಡೆದು 15-11-1967 ರಂದು ಒಂದು ಸರ್ವಸಮ್ಮತವಾದ ನಿರ್ಣಯವಾಯಿತು. ನಿರ್ಣಯವಾಗಿ ಮೂರುವರ್ಷಗಳಾದರೂ ಕೂಡ ಆ

ನಿರ್ಣಯದ ಮೇಲೆ ಯಾವ ತೀರ್ಮಾನವನ್ನೂ ಕೇಂದ್ರ ಸರ್ಕಾರ ಕೈಗೊಳ್ಳಲಿಲ್ಲ ಅಥವಾ ಕೇಂದ್ರ ಸರ್ಕಾರ ಕೈಗೊಳ್ಳುವ ರೀತಿಯಲ್ಲಿ ಯಾವ ಒತ್ತಾಯವನ್ನೂ ನಮ್ಮ ಸರ್ಕಾರ ತರಲಿಲ್ಲ. ಆ ಬಗ್ಗೆ ಸರ್ಕಾರ ವಿಫಲವಾಗಿದೆ ಎಂದು ಅನೇಕ ಜನ ಹೇಳಿದ್ದಾರೆ. ಅದು ಒಪ್ಪತಕ್ಕ ಮಾತು.

ಇವೊತ್ತಿನ ದಿವಸ ಮಹಾಜನ್ ರಿಪೋರ್ಟ್ ಒಪ್ಪಬೇಕು, ಹಿಂದಿನ ನಿರ್ಣಯದಂತೆ ಅದನ್ನು ಒಪ್ಪಬೇಕು ಎನ್ನುವುದು ಸ್ವಾಭಾವಿಕ ಹಾಗೂ ಒಂದು ನ್ಯಾಯ ಸಮಿತಿಗೆ ಒಪ್ಪಿಸಿದಾಗ, ಪಂಚಾಯಿತಿ ಕೊಟ್ಟ ತೀರ್ಪನ್ನು ಒಪ್ಪಬೇಕು ಎನ್ನುವುದು ಸ್ವಾಭಾವಿಕ. ಈ ವಿಧಾನ ಸಭೆ ಯಾವ ರೀತಿ ನಿರ್ಣಯವನ್ನು ಮಾಡಿದೆಯೋ, ಈ ಮಹಾಜನ್ ಕಮಿಟಿ ರಿಪೋರ್ಟನ್ನು ಒಪ್ಪಬೇಕು ಎಂದು ತೀರ್ಮಾನವನ್ನು ಮಾಡಿದ್ದೇವೆಯೋ ಅದೇ ರೀತಿ ಮಹಾರಾಷ್ಟ್ರ ಸರ್ಕಾರ ಕೂಡ ತಮ್ಮ ವಿಧಾನ ಸಭೆಯನ್ನು ಅದನ್ನು ಒಪ್ಪಬಾರದು ಎಂದು ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದಾರೆ. ಇದರಿಂದ ಕೇಂದ್ರ ಸರ್ಕಾರ ನಿಜವಾಗಿಯೂ ಇಕ್ಕಟ್ಟಿನಲ್ಲಿ ಸಿಕ್ಕಿದೆ, ಪೇಚಾಟದಲ್ಲಿ ಸಿಕ್ಕಿದೆ. ಒಂದು ವೇಳೆ ಅವರಿಗೆ ಯಾವಕಾರಣದಿಂದಲಾದರೂ ಕೂಡ ಮಹಾಜನ್ ಕಮಿಟಿ ರಿಪೋರ್ಟ್ ಒಪ್ಪಬಾರದು ಎಂದು ತೀರ್ಮಾನ ಮಾಡಿ, ಬೆಳಗಾಂ ಅನ್ನು ಒಡೆಯುತ್ತೇವೆ, ವಿರೋಧವಾದ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎಂದರೆ ಅದನ್ನು ಒಪ್ಪುವುದಕ್ಕೆ ಸರ್ವಥಾ ಸಾಧ್ಯವಿಲ್ಲ. ಅವರೇ ಒಪ್ಪಿದ ಮಹಾಜನ್ ಕಮಿಟಿ ರಿಪೋರ್ಟನ್ನು ಸಂಪೂರ್ಣವಾಗಿ ಒಪ್ಪಲಿ, ಇಲ್ಲದೆ ಇದ್ದರೆ ಇವೊತ್ತಿಗೆ ಏನು ಸ್ಥಿತಿ ಇದೆ ಆ ನೀತಿಯನ್ನೇ ಮುಂದುವರಿಸಿ, ನಮಗೆ ಇರತಕ್ಕ ಮೈಸೂರು ಮಹಾರಾಷ್ಟ್ರ ಗಡಿ ಸಮಸ್ಯೆ ಏನಿದೆ ಮತ್ತು ಮೈಸೂರು ಕೇರಳ ಗಡಿ ಸಮಸ್ಯೆ ಏನಿದೆ, ಹಾಗೂ ತಮಿಳುನಾಡು ಮೈಸೂರು ಗಡಿ ಸಮಸ್ಯೆ ಏನಿದೆ, ಕನ್ನಡ ಮಾತನಾಡಕ್ಕ, ಕನ್ನಡ ನುಡಿ, ನಡೆ, ಸಂಸ್ಕೃತಿ ಇರುವಂಥ ಅಪೋಣಿ, ಆಲೂರು, ರಾಯದುರ್ಗ, ಭಾಗಗಳೇನಿವೆ ಈ ಸಮಸ್ಯೆಗಳನ್ನೆಲ್ಲ ಜೀವಂತ ವಾಗಿ ಇಟ್ಟರೆ, ಜೋನಲ್ ಕೌನ್ಸಿಲ್‌ನಲ್ಲ ಆ ವಿಷಯವನ್ನು ತಂದು ಸಣ್ಣಪುಟ್ಟ ಹೊಂದಾಣಿಕೆ ಗಳನ್ನು, ಸ್ಟೇಟ್ಸ್ ರೀ ಆರ್ಗನೈಜೇಷನ್ ಆಕ್ಟ್‌ನಲ್ಲಿ ಏನು ಅನುಕೂಲವಿದೆ ಅದನ್ನು ಉಪಯೋಗಿಸಿ ಕೊಂಡು ನಾವು ಮಾಡಬಹುದು ಎಂದು ನಿರ್ಣಯ ಬಂದಿದೆಯೇ ಹೊರತು ಅದು ಮಹಾಜನ್ ಕಮಿಟಿ ರಿಪೋರ್ಟನ್ನು ಒಪ್ಪಬಾರದು, ಅದಕ್ಕೆ ವಿರೋಧವಾಗಿ ಮಾಡಿದ್ದೇವೆ ಎನ್ನುವುದಲ್ಲ. 1956ನೇ ಇಸವಿಯಿಂದ ಕನ್ನಡನಾಡು ಆಯಿತು. ಕರ್ಣಾಟಕಕ್ಕೆ ಬರಬೇಕಾದ ಭಾಗಗಳು ಅನೇಕ ಇವೆ. ಸುಖದುಃಖಗಳಲ್ಲಿ ಒಂದಾಗಿ ಬಾಳಬೇಕಾಗಿರುವ ಭಾಗಗಳು ಒಂದು ಕಡೆ ಸೇರದೆ ಇದ್ದರೆ ಒಂದು ದೇಹವನ್ನು ಕತ್ತರಿಸಿದಂತೆಯೇ ಸರಿ. ಇದನ್ನು ಯಾರೂ ಒಪ್ಪುವುದಕ್ಕೆ ಆಗುವುದಿಲ್ಲ. ಶ್ರೀಮಾನ್ ಸಿದ್ಧವೀರಪ್ಪನವರು ನಿರ್ಣಯದಲ್ಲಿ ಮಹಾಜನ್ ಕಮಿಟಿ ರಿಪೋರ್ಟಿಗೆ ವಿರೋಧವಾದ ಯಾವ ಅಂಶಗಳೂ ಇಲ್ಲ. ಕೇಂದ್ರ ಸರ್ಕಾರದವರು ಏನಾದರೂ ಕಾರಣಕ್ಕಾಗಿ ಮಹಾಜನ್ ಕಮಿಟಿ ರಿಪೋರ್ಟನ್ನು ಒಪ್ಪದೆ ಇದ್ದರೆ ಆ ಸಂದರ್ಭದಲ್ಲಿ ಏನು ಮಾಡಬೇಕು ಎನ್ನ ತಕ್ಕದ್ದು ಬಹಳ ಮುಖ್ಯವಾದ ಮತ್ತು ಕ್ರಾಂತಿಕಾರಕ ನಿರ್ಣಯ ಎಂದು ನಾನು ಹೇಳುತ್ತೇನೆ. ಸ್ಟೇಟ್ಸ್ ರೀ ಆರ್ಗನೈಜೇಷನ್ ಆಕ್ಟ್‌ಗೆ ಸಂಬಂಧಪಟ್ಟಂತೆ ಸ್ಟೇಟಸ್‌ಕೋ ಇಟ್ಟುಕೊಂಡರೆ ನಾಳೆಯ ದಿವಸ ಇದನ್ನು ಚರ್ಚೆ ಮಾಡಬಹುದು ಮತ್ತು ತೀರ್ಮಾನವನ್ನು ಕೈಗೊಳ್ಳಬಹುದು. ಈಗ ನಮ್ಮ ಗಡಿ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಬಹುದು, ಅದಕ್ಕಾಗಿ ಈ ಒಂದು ನಿರ್ಣಯವನ್ನು ತರಲಾಗಿದೆ. ಮಹಾಜನ್ ಕಮಿಟಿ ರಿಪೋರ್ಟಿಗೆ ವಿರೋಧವಾಗಿ ವರ್ತಿಸ ಬೇಕು ಎಂದು ತಂದಿಲ್ಲ. ಇವೊತ್ತಿನ ದಿವಸ ಕನ್ನಡನಾಡಿನ ಗಡಿಗಳನ್ನು ಕಾಪಾಡುವುದರಲ್ಲಿ, ಕನ್ನಡಿಗರ ಹಿತಾಸಕ್ತಿಗಳನ್ನು ಕಾಪಾಡುವುದರಲ್ಲಿ ಪಕ್ಷಭೇದವಿಲ್ಲ, ರಾಜಕೀಯ ಭಿನ್ನಾಭಿಪ್ರಾಯ ವಿಲ್ಲ. ಕನ್ನಡನಾಡಿನ ಗಡಿ ಸಮಸ್ಯೆಯನ್ನು ತೀರ್ಮಾನ ಮಾಡುವುದಕ್ಕೆ ಬದ್ಧರಾಗಿದ್ದೇವೆ, ಆ ರೀತಿ ನಡೆಯುವವರಿದ್ದೇವೆ. ಅದಕ್ಕಾಗಿ ಈ ನಿರ್ಣಯ ಮೂಲತಃ ಮಾನ್ಯ ಗೋಪಾಲಗೌಡರು ತಂದಿರುವ ನಿರ್ಣಯಕ್ಕೆ ವಿರೋಧವಾಗಿಲ್ಲ. ಇದು ಗೋಪಾಲಗೌಡರ ನಿರ್ಣಯಕ್ಕೆ ಪೋಷಕ ವಾಗಿದೆ. ಅಲ್ಲದೆ ಇನ್ನೂ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕೇಂದ್ರಕ್ಕೆ ಅನುಕೂಲ ಸಿಂಧುವನ್ನು ಕರುಣಿಸಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

8-00 P.M.

† ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮಿ, ನಾಲ್ಕು ದಿನಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ ಗಡಿ ಸಮಸ್ಯೆಯ ಬಗ್ಗೆ ಭಾಷಣಗಳನ್ನು ಆಲಿಸಿ ಈಗ ನಾನು ಆ ಬಗ್ಗೆ ಹೇಳು ತ್ತೇನೆ. ಇದನ್ನೆಲ್ಲಾ ಅವಲೋಕಿಸಿ ನೋಡಿದರೆ ಗಡಿ ಸಮಸ್ಯೆ ಕಾಂಗ್ರೆಸ್ಸಿನ ಇಂಡಿಕೇಟ ಸಿಂಡಿ ಕೇಟಿನಿಂದ ನಿರ್ಮಿತವಾದ ಗಡಿಬಿಡಿ ಸಮಸ್ಯೆಯಾಗಿದೆಯೋ ಎಂಬ ಅನುಮಾನವಾಗುತ್ತದೆ. ಕಳೆದ 23 ವರ್ಷಗಳಿಂದ ಕಾಂಗ್ರೆಸ್ಸು ಪಕ್ಷಗಳನ್ನು ಒಡದು ಆಳುವ ನೀತಿ ಅನುಸರಿಸುತ್ತಿದೆ. ಎಲ್ಲರೂ ನಾಯಕರಾಗುವ ಹಂಬಲ, ಇದು ದೇಶದ ರಾಜಕೀಯದಲ್ಲಿ ಒಂದು ದೊಡ್ಡ ಭೂತ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಈ ಭೂತವನ್ನು ಅಷ್ಟ ದಿಗ್ಬಂಧನ ಮಾಡದ ಹೊರತು ಗತಿ ಇಲ್ಲ. ಈ ಭೂತ ಇಂದು ಪ್ರೇತವಾಗಿ ಎರಡೂವರೆ ಕೋಟಿ ಕನ್ನಡಿಗರಿಗೆ ಹಿಡಿದಿದೆ. ಇದನ್ನು ಹೇಗೆ ಬಿಡಿಸ ಬೇಕು ? ಈ ಗಡಿ ಸಮಸ್ಯೆ ಈಗಿನ ಪ್ರಶ್ನೆಯಲ್ಲ. ಇದಕ್ಕೆ ಇಂಡಿಕೇಟಾಗಲಿ ಸಿಂಡಿಕೇಟಾಗಲಿ ಜವಾಬ್ದಾರರು. ಒಡೆದು ಆಳುವ ನೀತಿ ಇಟ್ಟುಕೊಂಡಿರುವ ಕಾಂಗ್ರೆಸ್ಸು ಇದಕ್ಕೆ ಜವಾಬ್ದಾರರು. ಶ್ರೀ ದಯಾನಂದ ಸಾಗರವರು ಹೇಳಿದ ಹಾಗೆ 1967 ನೇ ಇಸವಿಯಲ್ಲಿ ಮಹಾಜನ ಕಮಿಷನ್ ರಿಪೋರ್ಟ ಬಂದ ಮೇಲೆ ಆಗ್ಗೆ ನಿಜಲಿಂಗಪ್ಪನವರು ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು, ಅಲ್ಲದೆ ಕಾಂಗ್ರೆಸ್ ಸಂಸ್ಥೆಯು ಅಧ್ಯಕ್ಷರೂ ಆಗಿದ್ದರು. ಆಗ ಈ ಗಡಿ ಸಮಸ್ಯೆ ಬಿಡಿಸಲು ಅವರಿಗೆ ಆಗಲಿಲ್ಲ, ಇದು ಅವರ ನಪುಂಸಕತನ ಅಲ್ಲವೇ ! ಮಹಾಜನ್ ಕಮಿಷನ್ ವರದಿಯ ತೀರ್ಪು ಬಂದು ಎರಡು ವರ್ಷಗಳಾಗಿ ಹೋದರೂ ಅದನ್ನು ಜಾರಿಗೆ ತರಲು ಪ್ರಯತ್ನ ಮಾಡಲಿಲ್ಲ. ಇದರಿಂದ ಇಂದಿರಮ್ಮ ನವರಿಗೆ ಚವ್ಹಾಣ ಸಾಹೇಬರಿಗೆ ನೋವು ಆಗುತ್ತದೆ ಎಂದು ಸುಮ್ಮನೆ ಇದ್ದರು ! ಇಂದಿರಮ್ಮ ನವರ ಭಯಕ್ಕೆ ಮಹಾಜನ ಕಮಿಷನ್ ತೀರ್ಪು ಕಸದ ಬುಟ್ಟಿಗೆ ಹಾಕ ಬೇಕೇ ! ಮಹಾರಾಷ್ಟ್ರದ ಒತ್ತಾಯಕ್ಕೆ ಮಣಿಯ ಬೇಕೇ ! ಈಗ ಕೇರಳ ಮೈಸೂರು ಗಡಿ ಪ್ರಸ್ತಾಪ ಎತಕ್ಕೆ ಮಾಡಲಿಲ್ಲ ? ಇದರ ಅರ್ಥ ಏನು ಅಂದರೆ ಈ ಕ್ಷೇತ್ರದ ರಾಜಕೀಯ ಜನತೆಯ ಮೇಲೆ ಹೇರಿ ಜನತೆಯ ಮೇಲೆ ಸವಾರಿ ಮಾಡಬೇಕು ಎಂದು ಇದ್ದುದರಿಂದ ಈಗ ಕಾಂಗ್ರೆಸ್ಸು ಬೇರೆ ಬೇರೆಯಾಗಿದೆ ಎಂದು ಹೇಳಬೇಕಾಗುತ್ತದೆ. ಶ್ರೀಮಾನ್ ಸಿದ್ಧವೀರಪ್ಪನವರು ತಂದಿರು ನಿರ್ಣಯ ಒಪ್ಪುವುದಾದರೆ—ಒಪ್ಪಲು ತೊಂದರೆ ಇಲ್ಲ—ಬಹು ಕಾಲದಿಂದ ಕಾಸರಗೋಡಿನ ಜನರ ಮೇಲೆ ಕೇರಳದ ಉಗ್ರದೃಷ್ಟಿ ಬಿದ್ದು ಅವರು ಪರಿತಪಿಸುತ್ತಿದ್ದಾರೆ, ಎಸ್.ಆರ್.ಸಿ. ರಿಪೋರ್ಟ್ ಒಪ್ಪಿದರೆ ಕೇರಳದಲ್ಲಿ ಉಳಿದಿರುವ ಕನ್ನಡಿಗರ ಗತಿ ಏನು ? ಅವರ ನಿರ್ಣಯ ಒಪ್ಪಿಕೊಂಡರೆ ಈ ಪ್ರಶ್ನೆ ಪುನಃ ರೀ—ಓಪನ್ ಆಗುವುದಿಲ್ಲ. ಇದನ್ನು ಕನ್ನಡಿಗರು ಚೆನ್ನಾಗಿ ಆಲೋಚನೆ ಮಾಡಬೇಕಾಗಿದೆ. ಇದು ಗಂಡಾಂತರದ ವಿಷಯ. ಮುಂಬಯಿನಲ್ಲಿ ಬರುವ ತಿಂಗಳ 2ನೇ ತಾರೀಖು ಒಳಗಾಗಿ ಈ ಗಡಿ ಸಮಸ್ಯೆ ಸಂಪೂರ್ಣವಾಗಿ ಮುಗಿಯದಿದ್ದರೆ ಮುಂಬಯಿ ಬಂದು ಮಾಡುತ್ತೇವೆ ಎಂದು ಶಿವಸೇನೆಯ ಮುಖಂಡ ಬಾಳ ಠಾಕರೆ ಹೇಳಿದ್ದಾರೆ. ಶ್ರೀಮಾನ್ ದಯಾನಂದ ಸಾಗರ ಅವರು ಹೇಳಿದ ಹಾಗೆ ಬೆಳಗಾಂವಿಯಲ್ಲಿ ವೀರೇಂದ್ರ ಪಾಟೀಲರು ಗುಡುಗಿದರು. ಅದರಿಂದ ಇದು ಪ್ರಾರಂಭ ವಾಯಿತು. ಈ ಕಾಂಗ್ರೆಸ್ ಸರಕಾರ ಇಂಡಿಕೇಟ್ ಇರಲಿ ಸಿಂಡಿಕೇಟ್ ಇರಲಿ ಒಂದು ದಿವಸ ಜನತೆ ಇವರಿಗೆ ಬೆಂಕಿ ಕೊಟ್ಟು ಭಸ್ಮ ಮಾಡುತ್ತಾರೆ ಎಂದು ಹೇಳುತ್ತೇನೆ. ಕಳೆದ 23 ವರ್ಷ ಕಾಂಗ್ರೆಸ್ ನಿರ್ವಹಿಸಿಕೊಂಡು ಬಂದ ನೀತಿ ಇದೇ ಆಗಿದೆ. ಜನರಲ್ಲಿ ಸಮಸ್ಯೆ ಹುಟ್ಟಿಸಿ, ಜನರ ಮನಸ್ಸನ್ನು ಅಲ್ಲೋಲ ಕಲ್ಲೋಲ ಮಾಡಿ ದೇಶ ನಾಶ ಮಾಡುವ ಪರಿಸ್ಥಿತಿ ಬಂದಿರುವುದಕ್ಕೆ ಈ ಕಾಂಗ್ರೆಸ್ಸೇ ಕಾರಣ. ಇಂಡಿಕೇಟಿನವರು ಸಿಂಡಿಕೇಟಿನವರು ಇದಕ್ಕೆ ಜವಾಬ್ದಾರರು. ಇಂದು ಸಿಂಡಿಕೇಟ ಮತ್ತು ಇಂಡಿಕೇಟ ಸರಕಾರ ದೇಶವನ್ನು ಬಲಿ ಕೊಡಲು ಸಿದ್ಧರಾಗಿದ್ದಾರೆ. ಆದುದರಿಂದಲೇ ಇಂಡಿಕೇಟ ಸಿಂಡಿಕೇಟ ಗಲಾಟೆ ಬಂದಿದೆ. ಅದು ಏನೇ ಇರಲಿ, ಕಾಸರಗೋಡಿನ ವಿಷಯ ಮುಖ್ಯ. ಎಸ್. ಆರ್. ಸಿ. ಕಮಿಷನ್ನಿನ ಸದಸ್ಯರಲ್ಲಿ ಒಬ್ಬರಾದ ಪಣಿಕ್ಕರ್‌ರವರು ಒಂದು ಸಮಯ ದಲ್ಲಿ ಕಾಸರಗೋಡು ಕರ್ನಾಟಕಕ್ಕೆ ಹೋಗಬೇಕು ಎಂದು ಮಂಗಳೂರಿನಲ್ಲಿ ಹೇಳಿ ಆ ಮೇಲೆ ಕಾಸರಗೋಡ ಬಗ್ಗೆ ಕೈ ಕೊಟ್ಟಿದ್ದಾರೆ. ಕಾಸರಗೋಡಿನ ಬಗ್ಗೆ ಅವರು ಒಂದು ಮಾತು ಹೀಗೆ ಹೇಳಿದ್ದಾರೆ :

> "The Kasargod is the creation of the States Reorganisation Commission. The suggestion that in the reorganisation of States Chandragiri River should be the boundary line between Karnataka and Kerala had first come from Sardar Panicker, one of the members of the States Reorganisation Commission, at the sitting of the Commission in Mangalore, and he proceeded to state that he was very well aware that this has been the traditional boundary line between Kerala and Tulunad, which no Nayar woman of Kerala was permitted to cross for fear of loss of caste."

ನಾಯರ್ ಹೆಂಗಸರ ಜಾತಿ ಕೆಟ್ಟು ಹೋಗುತ್ತದೆ ಆದುದರಿಂದ ಈ ಭಾಗ ಕರ್ನಾಟಕಕ್ಕೆ ಸೇರ ಬೇಕು ಎಂದು ಎಸ್. ಆರ್. ಸಿ. ಕಮಿಷನ್ನಿನ ಸದಸ್ಯರಾದ ಪಣಿಕರರು ಮೊದಲು ಹೇಳಿ ಆಮೇಲೆ

ಕೈ ಕೊಟ್ಟರು. ಇಷ್ಟೇ ಅಲ್ಲದೆ ನಂಬೂದ್ರಿಪಾದರು ಕೂಡ ಕಾಸರಗೋಡು ಕರ್ನಾಟಕಕ್ಕೆ ಹೋಗಬೇಕು ಎಂದು ಹೇಳಿದ್ದಾರೆ.

"Sri E.M.S. Namboodripad, who was the first Chief Minister of Kerala in 1957-59, and who is heading the Government in Kerala once again since the second week of March after the Genaral Elections in 1967, in his book 'The National Question in Kerala' published in 1952 in describing the limits of Kerala State at pages 2nd 3 said that 'to the west of Kerala lies the Arabian Sea, and to the East the Western Ghats. On its immediate south lie parts of Tamilnad and on its north live the Tulu, Coorg and other peoples who are generally considered to be part of Karanataka."

ಕಾಸರಗೋಡು ಕರ್ನಾಟಕಕ್ಕೆ ಹೋಗಬೇಕು ಎಂದು ಹೇಳಿದ ನಂಬೂದ್ರಿಪಾದರು ಆಮೇಲೆ ಹಾಗೂ ಹೀಗೂ ಏನೇನೋ ಮಾಡಿದರು. ಆದರೆ ದೊಡ್ಡ ವ್ಯಕ್ತಿಯಾದ ಮಹಾಜನರವರು ವಿಷಯ ಕ್ರೋಢೀಕರಿಸಿ ಕಾಸರಗೋಡು ಕರ್ನಾಟಕಕ್ಕೆ ಹೋಗಬೇಕು ಎಂದು ತೀರ್ಮಾನ ಮಾಡಿದ್ದಾರೆ. ಅಲ್ಲಿ ಸುಮಾರು 300 ಚ. ಮೈಲಿ ವಿಸ್ತೀರ್ಣದಲ್ಲಿ ಎರಡು ಲಕ್ಷ ಕನ್ನಡಿಗರು ಇದ್ದಾರೆ. ಚಂದ್ರಗಿರಿ ನದಿಯ ಹಾಗೂ ಪಾಯಸ್ವಿನಿ ನದಿಗಳ ಉತ್ತರ ಭಾಗಕ್ಕೆ ಇರತಕ್ಕ ಪ್ರದೇಶವೆಲ್ಲಾ ಕನ್ನಡ ನಾಡಿಗೇ ಸೇರಬೇಕೆಂದು ಅವರು ಹೇಳಿದ್ದಾರೆ. ಹಾಗಿದ್ದರೂ ಆ ಪ್ರದೇಶದ ಜನರ ಮೇಲೆ ನಮ್ಮ ಇಂದಿರಮ್ಮನವರ ವಕ್ರದೃಷ್ಟಿ ಬೀಳುವುದಕ್ಕೆ ಮುಖ್ಯ ಕಾರಣ ಎಂದರೆ ಇಂದಿರಮ್ಮನವರು ತಮ್ಮ ಕುರ್ಚಿಯನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಮಹಾರಾಷ್ಟ್ರೀಯರ ಹಿತವನ್ನು ತನ್ನಕಡೆಗೆ ಒಲಿಸಿಕೊಳ್ಳಬೇಕೆಂಬ ಒಂದೇ ಒಂದು ಉದ್ದೇಶದಿಂದ ಮೈಸೂರು ಮುಖ್ಯಮಂತ್ರಿಗಳಲ್ಲಿ ಅನಧಿಕೃತವಾಗಿ ಕೆಲವು ವಿಷಯಗಳನ್ನು ಚರ್ಚೆ ಮಾಡುವುದಕ್ಕಾಗಿ ಕೆಲವು ಸಾಮಾನ್ಯ ಅಧಿಕಾರಿಗಳನ್ನು ದೆಹಲಿಯಿಂದ ಮೈಸೂರಿಗೆ ಕಳುಹಿಸಿದ್ದರೆಂದು ಪತ್ರಿಕೆಗಳಲ್ಲಿ ಬಂದ ವರದಿಗಳಿಂದ ನಮಗೆ ಆ ವಿಚಾರ ತಿಳಿಯ ಬಂದಿದೆ. ಆದರೆ ಅವರು ಹಾಗೆ ನಡೆಯತಕ್ಕದ್ದು ಸರಿಯಲ್ಲ. ಆದರೆ ಕೆಲವರು ಕೆಲವು ಕಾಲ ಕೆಲವರನ್ನು ವಂಚಿಸುವುದು, ಅಷ್ಟೇವಿನಾ ಎಲ್ಲರನ್ನೂ ಎಲ್ಲ ಕಾಲಗಳಲ್ಲೂ ವಂಚಿಸುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ಕನ್ನಡಿಗರು ಇಲ್ಲಿಯವರೆಗೂ ಒಂದು ಸೌಜನ್ಯತೆಗಾಗಿ ಸುಮ್ಮನಿದ್ದರು. ಅವರಲ್ಲಿ ಕೆಚ್ಚು ಎದೆಗಾರಿಕೆ ಇಲ್ಲವೆಂದು ಯಾರೂ ಭಾವಿಸಬಾರದು. ಬೇಕೆಂದರೆ ಆ ಮರಾಠಿಗರಿಗಿಂತ ಕನ್ನಡಿಗರು ಕಲ್ಲುತೂರುವುದರಲ್ಲಿ ಗಲಾಟೆ ಎಬ್ಬಿಸುವುದರಲ್ಲಿ ನಿಪುಣರು, ಬೇಕೆಂದರೆ ನಾಳೆಯೇ ಷುರು ಮಾಡುತ್ತೇವೆ. ಆದರೆ ಯಾರೋ ಹೇಳುತ್ತಿದ್ದಹಾಗೆ ನಮ್ಮ ಕಾಂಗ್ರೆಸ್ಸಿನವರ ಚರ್ಮ ಧಾರವಾಡದ ಎಮ್ಮೆಗಳ ಚರ್ಮ ಇದ್ದಷ್ಟು ಮಂದ ಎಂದು ಹೇಳುತ್ತಿದ್ದರು. ಅದರಿಂದಲೇ ಏನೋ ಅವರು ಇಲ್ಲಿಯವರೆಗೂ ಚಳವಳಿಯನ್ನು ಎಬ್ಬಿಸಲು ಹೊರಟಿಲ್ಲ. ಆದ್ದರಿಂದ ಇಂಥದಕ್ಕೆ ಖಂಡಿತ ಅವಕಾಶ ಕೊಡಬಾರದೆಂದು ನಾನು ಅವರಿಗೆ ಎಚ್ಚರಿಕೆ ಕೊಡಬಯಸುತ್ತೇನೆ.

ಇನ್ನು ನಮ್ಮ ಶ್ರೀಮಾನ್ ಸಿದ್ದವೀರಪ್ಪನವರ ವಿಚಾರಕ್ಕೆ ಬಂದರೆ ಅವರು ಈ ರಾಜಕೀಯದಲ್ಲಿ ಒಂದು ಉಚ್ಚವ್ಯಕ್ತಿತ್ವವನ್ನು ಪಡೆದವರಾಗಿದ್ದಾರೆ. ಅವರಾದರೂ ಇದೇ ಅಧಿವೇಶನದಲ್ಲಿ ಈ ಹಿಂದೆ ಮಹಾಜನ್ ವರದಿಯ ಬಗ್ಗೆ ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ ಅಂದರೆ 1967ನೇ ಡಿಶಂಬರ್ 27ನೇ ತಾರೀಖಿನಲ್ಲಿ ಭಾಷಣಮಾಡುತ್ತ ಮಹಾಜನ್ ವರದಿಯ ಬಗೆಗೆ ನಾವೆಲ್ಲರೂ ಸೇರಿ ಒಂದು ಯುನಾನಿಮಸ್ ರೆಸಲ್ಯೂಲಷನ್ ಪಾಸ್ ಮಾಡಬೇಕೆಂಬುದಾಗಿ ಅವರ ಭಾಷಣವನ್ನು ಮುಗಿಸತಕ್ಕ ಕಾಲದಲ್ಲಿ ಹೇಳಿದ್ದಾರೆ. ಅವರ ಭಾಷಣದ ವಿವರಣೆ ಹೀಗಿದೆ:

"Sri H. SIDDAVEERAPPA.—I therefore feel-I am in full agreement with the recommendations of the Mahajan Commission and I support it."

ಮತ್ತು ಹಾಗೇ ಮುಂದುವರಿದು ಅವರು ಏನು ಹೇಳಿದ್ದಾರೆಂದರೆ :

"There, as put by the Hon'ble Leader of the Opposition whatever may be the gains or losses, whatever may be the plus or minus, every part of it remains in Mother India. We have

(ಶ್ರೀ ಎಂ. ಭಾಸ್ಕರ ಶೆಟ್ಟಿ)

to agree with the recommendations of the Mahajan commission. I am perfectly convinced there is no bias or prejudice. I therefore feel, we must agree with these recommendations."

ಆದ್ದರಿಂದ ಶ್ರೀ ಸಿದ್ದವೀರಪ್ಪನವರು ಒಬ್ಬ ದೊಡ್ಡ ವ್ಯಕ್ತಿಗಳಾದುದರಿಂದ ಅವರು ಒಂದಾವರ್ತಿ ಮುಂದೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯತಕ್ಕವರಲ್ಲ. ಆದ್ದರಿಂದ ಅವರೂ ಕೂಡ ಶ್ರೀ ಗೋಪಾಲಗೌಡರು ಮಂಡಿಸಿರತಕ್ಕ ನಿರ್ಣಯಕ್ಕೆ ತಮ್ಮೆಲ್ಲರ ಸಂಪೂರ್ಣ ಸಹಾನುಭೂತಿ ಹಾಗೂ ಬೆಂಬಲವನ್ನು ನೀಡಿ ಅವರು ಮಂಡಿಸಿರತಕ್ಕ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಶ್ರೀಮಾನ್ ಕೆ. ಎಚ್. ಪಾಟೀಲರ ವಿಚಾರಕ್ಕೆ ಬಂದರೆ ಹಿಂದೆ ಅವರೇನು ಇದೇ ಸಭೆಯಲ್ಲಿ ಹೇಳಿದ್ದಾರೆ ಎಂಬುದನ್ನು ಅವರ ಭಾಷಣದಿಂದಲೇ ಓದಿಹೇಳುತ್ತೇನೆ. ಅವರ ಭಾಷಣದಲ್ಲಿ ಇನ್ನು ಮುಂದಾದರೂ ರಾಜ್ಯದ ಹಿತದೃಷ್ಟಿಯಿಂದ ಕೇಂದ್ರದ ಒತ್ತಾಯಕ್ಕೆ ಮಣಿಯುವುದು ಬೇಡಿ. ಆ ರೀತಿ ಮಾಡುವುದಾದರೆ ಮೈಸೂರು ರಾಜ್ಯ ಹಾಳಾದೀತು. ಆದ್ದರಿಂದ ಯಾವ ಹೆದರಿಕೆ ಬೆದರಿಕೆಗಾಗಲೀ ಈ ವರದಿಯನ್ನು ತೀರ್ಪೆಂದು ಪರಿಗಣಿಸುವ ಈಗಿನ ಮೈಸೂರಿನ ನಿಲುವಿನಲ್ಲಿ ಬದಲಾವಣೆಯಾದರೆ ಪರಿಣಾಮ ಹಿತಕಾರಿಯಾಗಲಾರದು ಎಂದು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದ ಗೃಹಮಂತ್ರಿಗಳಾದ ಶ್ರೀ ಚವಾಣ್ ಅವರು ಮತ್ತು ಶ್ರೀ ಶುಕ್ಲಾ ಅವರು ಪಾರ್ಲಿಯಮೆಂಟಿನಲ್ಲಿ ಅಪದ್ಧವಾದ ಮಾತುಗಳನ್ನು ಹೇಳಿರುವುದು ಯೋಗ್ಯವಾಗಿ ಕಾಣುವುದಿಲ್ಲ. ಯಾವುದು ಕಾನೂನಿಗೆ ಮತ್ತು ಕಾಯಿದೆಗೆ ಸಂಬಂಧಪಡುವುದಿಲ್ಲವೋ ಅಂಥ ಮಾತುಗಳನ್ನು ಅವರು ಹೇಳಿದ್ದಾರೆ. ಇದರಿಂದ ಎರಡೂ ರಾಜ್ಯಗಳ ಜನರಲ್ಲಿ ವಿರುದ್ಧಭಾವನೆಗಳು ಬರುವುದಕ್ಕೆ ಅವಕಾಶವಾಗುತ್ತದೆ. ಮಹರಾಷ್ಟ್ರದವರಿಗೆ ಮತ್ತು ಕೇಂದ್ರದವರಿಗೆ ಮತ್ತು ಆ ಕೇಂದ್ರದ ನಾಯಕರುಗಳಿಗೆ ನಾನು ಏನು ಎಚ್ಚರಿಗೆ ಕೊಡಬಯಸುತ್ತೇನೆಂದರೆ—ಕನ್ನಡಿಗರಾದ ನಾವೇನೂ ಹೇಡಿಗಳಲ್ಲ, ಸಮಯ ಬಂದರೆ ನಾವು ಸಹಾ ಹೋರಾಟ ಮಾಡುವುದಕ್ಕೆ ತಯಾರಿದ್ದೇವೆ. ಒಮ್ಮೆ ಕೆರಳಿದರೆ ಸುಮ್ಮನೆ ಇರುವುದಕ್ಕೆ ನಮಗೆ ಸಾಧ್ಯವಿಲ್ಲ. ಯಾವುದೇ ರೀತಿಯಿಂದ ನಾವು ಆ ಶಿವಸೇನೆ ಮಾಡಿದಂತೆ ಕೆಡಕು ಮಾಡುವುದಿಲ್ಲ. ನಾವು ಸ್ನೇಹಪ್ರಿಯರು, ಶಾಂತಿಪ್ರಿಯರು, ಆದರೆ ನಮಗೆ ಕೆಡಕು ಮಾಡುವವರನ್ನು ನಾವು ಸುಮ್ಮನೆ ಬಿಡುವುದಿಲ್ಲ. ಈ ಮಹಾಜನ್ ವರದಿಯನ್ನು ಪಕ್ಷಭೇದವಮಾಡದೆ ಎಲ್ಲರೂ ಒಪ್ಪಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆಂದು ಹೇಳಿದ್ದಾರೆ." ಹೀಗೆ ಹಿಂದೆ ಎಲ್ಲರೂ ಈ ಮಹಾಜನ್ ವರದಿಗೆ ಸಂಪೂರ್ಣ ಬೆಂಬಲವನ್ನು ನೀಡಿರುವುದರಿಂದ ಈಗ ಸಭೆಯ ಮುಂದೆ ಶ್ರೀ ಗೋಪಾಲಗೌಡರು ಮಂಡಿಸಿರತಕ್ಕ ನಿರ್ಣಯವೇನಿದೆ ಅದಕ್ಕೆ ಸರ್ವರೂ ಸಂಪೂರ್ಣ ಬೆಂಬಲನೀಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಇದೇ ಸಂದರ್ಭದಲ್ಲಿ ನಾನು ನಮ್ಮ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳಬೇಕೆಂದಿರತಕ್ಕ ಮತ್ತೊಂದು ವಿಷಯವೇನೆಂದರೆ —ಸಾಮಾನ್ಯವಾಗಿ ಈ ಗಡಿ ವ್ಯವಹಾರದಲ್ಲಿ ಬಹಳವಾಗಿ ಕಷ್ಟನಷ್ಟಗಳಿಗೆ ಒಳಗಾಗುತ್ತಿರುವವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜನರು. ಹಿಂದೆ ಬೊಂಬಾಯಿನಲ್ಲಿ 1969 ರಲ್ಲಿ ನಡೆದ ಶಿವಸೇನೆಯ ದೊಂಬಿಯಲ್ಲಿ ನಮ್ಮ ಕನ್ನಡಿಗರಿಗೆ ಅಲ್ಲಿ ಆದ ನಷ್ಟ ಸುಮಾರು 15—20 ಲಕ್ಷಕ್ಕೆ ಮುಟ್ಟಿದೆ. ಬೊಂಬಾಯಿನಲ್ಲಿ ಹೋಟಲುಗಳನ್ನು ನಡೆಸತಕ್ಕ ನಮ್ಮ ದಕ್ಷಿಣ ಕನ್ನಡದ ಜನರಿಗೆ ಮತ್ತೆ ಇನ್ನೆರಡು ದಿನಗಳಲ್ಲಿ ಬೊಂಬಾಯಿನಲ್ಲಿ ಆ ಶಿವಸೇನೆಯವರು ಬೊಂಬಾಯಿ ಬಂದನ್ನು ಆಚರಣೆಮಾಡತಕ್ಕ ಸಂದರ್ಭದಲ್ಲಿ ಅವರಿಗೆ ಯಾವ ಅಪಾಯವು ಆಗದಂತೆ ಮಹರಾಷ್ಟ್ರ ಸರ್ಕಾರನೋಡಿಕೊಳ್ಳಬೇಕೆಂಬುದಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಅವರಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಕೆ. ಬೊಮ್ಮೆಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಈಗ ಸಭೆಯಮುಂದೆ ಶ್ರೀ ಗೋಪಾಲಗೌಡರು ತಂದಿರುವ ಮತ್ತು ನಮ್ಮ ಪಕ್ಷದ ಶ್ರೀ ಸಿದ್ದವೀರಪ್ಪನವರು ತಂದಿರುವ ಎರಡೂ ನಿರ್ಣಯಗಳು ಚರ್ಚೆಯಾಗುತ್ತಿವೆ. ಈ ಹಿಂದೆ 1967 ನ ಡಿಶಂಬರಿನಲ್ಲಿ ನಡೆದ ಅಧಿವೇಶನದಲ್ಲಿ ಮಹಾಜನ್ ವರದಿಯ ಬಗ್ಗೆ ನಾವೆಲ್ಲರೂ ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುತ್ತೇವೆ. ಆದರೆ ಮಹರಾಷ್ಟ್ರೀಯರು ಆ ವರದಿಯನ್ನು ತಿರಸ್ಕಾರ ಮಾಡಿದ್ದಾರೆ. ಈ ಒಂದು ಕಾರಣದಿಂದ ನಮ್ಮ ರಾಜ್ಯದಲ್ಲಿ ಪಾಸಾದ ನಿರ್ಣಯ ಮತ್ತು ಮಹರಾಷ್ಟ್ರದಲ್ಲಿ ಪಾಸಾದ ನಿರ್ಣಯಗಳೆರಡೂ

ಹಾಗೇ ಮೂಲೆಗೆ ಬಿದ್ದವು. ಅದಕ್ಕಾಗಿ ಈ ದಿವಸ ಇಲ್ಲಿ ಮಹಾಜನ್ ವರದಿಯ ಬಗ್ಗೆ ಒಪ್ಪಿಗೆಯನ್ನು ಕೊಡಬೇಕೆನ್ನತಕ್ಕ ನಿರ್ಣಯವೇನು ಚರ್ಚೆಯಾಗುತ್ತಿತ್ತು, ಅದಕ್ಕೆ ಶ್ರೀ ಸಿದ್ಧವೀರಪ್ಪನವರು ಒಂದು ತಿದ್ದುಪಡಿಯನ್ನು ಮಂಡಿಸಿದರು. ಹಾಗೆ ಅವರು ಮಂಡಿಸಿದ ತಿದ್ದುಪಡಿಯಲ್ಲಿ ನಾವು ಆ ಗಡೀ ರಕ್ಷಣೆಯ ಕಾರ್ಯದಲ್ಲಿ ಹಿಂದುಳಿಯಬೇಕೆಂದಾಗಲಿ ಅಥವಾ ನಮ್ಮ ಕನ್ನಡ ನೆಲವನ್ನು ಬೇರೆಯವರಿಗೆ ಬಿಟ್ಟುಕೊಡಬೇಕೆಂದಾಗಲಿ ಎಂಬ ಧಾಟಿಯಲ್ಲಿ ಆ ತಿದ್ದುಪಡಿಯನ್ನು ಮಂಡಿಸಿಲ್ಲ. ನಾವೇನು ಈಗಾಗಲೇ ಆ ಮಹಾಜನ್ ವರದಿಯನ್ನು ಒಪ್ಪಿದ್ದೇವೆ ಅದನ್ನು ಆ ಮಹರಾಷ್ಟ್ರೀಯರೂ ಒಪ್ಪಿದರೆ ಪರವಾ ಇಲ್ಲ, ಹಾಗಿಲ್ಲದೆ ಹೋದಾಗ ನಾವು ಆ ಹಿಂದೆ ರಾಜ್ಯಪುನರ್ವಿಂಗಡಣೆಯ ಬಗ್ಗೆ ಎಸ್. ಆರ್. ಸಿ. ಅವರ ವರದಿಯಲ್ಲಿ ಏನು ಹೇಳಿದ್ದಾರೆ ಅದಕ್ಕೆ ಒಪ್ಪಬೇಕೇ ವಿನಾ ಬೇರೇನೇ ಹೇಳಿದರೂ ಒಪ್ಪಿಕೊಳ್ಳಬಾರದೆಂದು ಅವರ ತಿದ್ದುಪಡಿ ಇದೆ. ಇದರಲ್ಲಿ ಕಾಸರಗೋಡು, ತಾಳವಾಡಿ, ಹೊಸೂರು ಕೆಲವು ಪ್ರಾಂತ್ಯಗಳು ಬಿಟ್ಟುಹೋಗಿದೆ. ಜೋನಲ್ ಕಮೀಷನ್ ಸೇರಿದಾಗ ಇಂತಹ ಮೈನರ್ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳಬಹುದು ಎಂದು ಫಸಲಾಲಿ ಕಮಿಷನ್ ವರದಿಯಲ್ಲಿ ಹೇಳಿದ್ದಾರೆ. ಇಲ್ಲಿಯವರಿಗೆ ಫಜಲಾಲಿ ಕಮೀಷನ್ ಬಂದು 12 ವರ್ಷವಾದರೂ ಕೂಡ ನಮ್ಮ ಸರ್ಕಾರದವರು ಅಂದರೆ ನಮ್ಮ ದೇಶವನ್ನು ಆಳಿಕೊಂಡು ಬಂದಿರತಕ್ಕಂಥ ಕಾಂಗ್ರೆಸ್ ಸರ್ಕಾರದವರು ಆ ಕೆಲಸಕ್ಕೆ ಕೈ ಹಾಕಿಲ್ಲ ಎಂದು ನನಗೆ ಅನಿಸುತ್ತದೆ. ಎಸ್. ಆರ್. ಸಿ. ರಿಪೋರ್ಟ್ ಆದಮೇಲೆ ರಾಜ್ಯ ಪುನರ್ವಿಂಗಡಣೆ ಆದಮೇಲೆ ದೇಶದಲ್ಲಿ ಮುಖಂಡತ್ವ ಯಾವರೀತಿ ಬೆಳೆದು ಬಂದಿದೆ ಎಂದರೆ ಒಂದು ತರಹ ಗುಂಪಿನ ಮೇಲೆ ಬೆಳೆದುಕೊಂಡು ಬಂದಿದೆ. ಆದರೆ ಇದರ ಮೂಲ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವ ಉದಾತ್ತ ಧ್ಯೇಯದ ಕಡೆ ಮುಂಖಡರ ಮನಸ್ಸು ಹೋಗಲಿಲ್ಲ. ದೇಶದ ಸೂತ್ರವನ್ನು ಹಿಡಿದುಕೊಂಡು ಸ್ಥಾನ ಪಡೆಯಬೇಕು ಎನ್ನುವ ದೃಷ್ಟಿ ಬಂದಿರುವುದರಿಂದ ಈವೊತ್ತು ನಾವು ಕಷ್ಟವನ್ನು ಅನುಭವಿಸುತ್ತಿದ್ದೇವೆ. ನಾವು ಈ ರೀತಿ ಕಷ್ಟವನ್ನು ಅನುಭವಿಸುವುದು ಇರಲಿ ದೇಶದಲ್ಲಿರುವ ತರುಣರೂ ವಿದ್ಯಾರ್ಥಿಗಳು ಬಲಿಯಾಗುವುದಕ್ಕೆ ಕಾರಣರಾಗಿದ್ದಾರೆ. ಇದಕ್ಕೆ ಯಾರು ಕಾರಣರು ಎಂಬುದನ್ನು ಪ್ರಸ್ತಾಪ ಮಾಡದೇ ವಿಧಿ ಇಲ್ಲ. ಇದರ ಬಗ್ಗೆ ನಾವು ಹೇಳಿದರೆ ಅರ್ಥವಿಲ್ಲ ಎಂದು ಹೇಳಬಹುದು. ನಿಜ. ನಾವು ಹೇಳಿ ಆದರೂ ಹೊಟ್ಟೆಯಲ್ಲಿ ಇರತಕ್ಕಂಥ ಉರಿಯನ್ನು ಕಡಿಮೆ ಮಾಡಬಹುದು ಎನ್ನುವ ಉದ್ದೇಶದಿಂದ ಈ ಮಾತನ್ನು ಆಡುತ್ತಾ ಇದ್ದೇನೆ. ಭಾಷಾವಾರು ಪ್ರಾಂತ ಆದಮೇಲೆ ದೇಶದಲ್ಲಿ ಎಲ್ಲ ಪ್ರಾಂತ್ಯಗಳಲ್ಲೂ ಮುಖಂಡತ್ವ ಬೆಳೆದಿದೆ. ದೇಶದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಮುಖಂಡತ್ವ ಹೇಗೆ ಬೆಳೆದಿದೆ ಎನ್ನುವುದನ್ನು ನೋಡಿದ್ದೇವೆ. ಹಿಂದೆ ಉದಾತ್ತ ಧ್ಯೇಯವನ್ನು ಇಟ್ಟುಕೊಂಡು ಲಾಫ್ಟಿ ಕ್ಯಾರೆಕ್ಟರ್ ಬೆಳೆಸಿಕೊಂಡು ದೇಶದ ಕಣ್ಮಣಿಗಳಾಗಿ ಕಾಣುತ್ತ ಇದ್ದರು. ಆದರೆ ಭಾಷಾವಾರು ಪ್ರಾಂತ ಆದಮೇಲೆ ಲೀಡರ್ಸ್ ಬೆಳೆದು ಯಾವುದಾದರೂ ದೇಶದಲ್ಲಿ ಏನಾದರೂ ಮಹತ್ತರವಾದ ಪ್ರಶ್ನೆ ಇದ್ದರೆ ಅದನ್ನು ಪರಿಹಾರ ಮಾಡುವುದಕ್ಕೆ ಹೋದರೆ ನಮ್ಮ ಸ್ಥಾನಕ್ಕೆ ಎಲ್ಲಿ ಧಕ್ಕೆ ಬರುತ್ತದೋ ಎನ್ನುವ ಭೀತಿ ಅವರಲ್ಲಿ ಹುಟ್ಟಿದೆ. ಈ ರೀತಿ ಆಗಿರುವುದರಿಂದ ಈವೊತ್ತಿನ ದಿವಸ ಇರುವ ಜಿಜ್ಞಾಸೆ, ಇವೊತ್ತು ಬಂದಿರುವ ಸಂಕಟವನ್ನು ಪರಿಹಾರ ಮಾಡುವ ಮಾರ್ಗ ಕಂಡುಹಿಡಿಯಬೇಕಾಗಿದೆ. ಬಲಾಢ್ಯ ಶಕ್ತಿಯೊಡನೆ ಸೆಣಸುತ್ತಿರುವಾಗ ಯಾವುದಾದರೂ ಒಂದು ಯುಕ್ತಿಯ ಮೂಲಕ ನಮ್ಮ ಗುರಿಯನ್ನು ಗೆಲ್ಲಬೇಕಾಗಿದೆ. ಅದಕ್ಕೋಸ್ಕರ ಈ ಎಸ್. ಆರ್. ಸಿ. ರಿಪೋರ್ಟ್ ಅನ್ನು ಒಪ್ಪಬೇಕು ಎಂದು ಸೂಚನೆ ಮಾಡಿರುವುದು ಇದನ್ನು ಆಳುವ ಪಕ್ಷದವರು ತಂದಿದ್ದಾರೆ, ಆದ್ದರಿಂದ ಇದನ್ನು ನಾವು ಒಪ್ಪತಕ್ಕಂಥದ್ದಲ್ಲ ಎನ್ನುವ ದುರಭಿಮಾನ ಇಟ್ಟುಕೊಂಡಿಲ್ಲ. ದೇಶದ ಪ್ರಶ್ನೆ ಬಂದಾಗ ಒಗ್ಗಟ್ಟಾಗಿ ಇರುತ್ತೇವೆ ಹೊಡೆದಾಡುವುದಕ್ಕೂ ತಯಾರಾಗಿದ್ದೇವೆ. ಆದುದರಿಂದ ಇದನ್ನು ಬಗೆಹರಿಸುವ ದೃಷ್ಟಿಯಿಂದ ಶ್ರೀ ಸಿದ್ಧವೀರಪ್ಪನವರು ತಿದ್ದುಪಡಿಯನ್ನು ತಂದಿದ್ದಾರೆ. ಅದನ್ನು ಎಲ್ಲರೂ ಒಪ್ಪಿಕೊಂಡು ಪಾಸುಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೇ, ಈಗ ಶ್ರೀಯುತ ಗೋಪಾಲಗೌಡರು ನಮ್ಮ ಮುಂದೆ ಇಟ್ಟಿರತಕ್ಕಂಥ ನಿರ್ಣಯವನ್ನು ಪುಷ್ಟೀಕರಿಸುತ್ತಾ, ಈ ಮೈಸೂರು ಮಹಾರಾಷ್ಟ್ರ ಗಡಿ ವಿಚಾರದಲ್ಲಿ ನಾನು ಹೇಳುವುದಾದರೆ ಕೇಂದ್ರ ಸರ್ಕಾರದವರು ಮೈಸೂರು, ಮಹಾರಾಷ್ಟ್ರ ಈ ಎರಡೂ ಸರ್ಕಾರಗಳ ಅನುಮತಿಯನ್ನು ಪಡೆದುಕೊಂಡು ಈ ಮಹಾಜನ್ ಕಮೀಷನ್ನನ್ನು ಏರ್ಪಾಡು ಮಾಡಿ ಅನಂತರ ಮಹಾಜನ್ ಕಮೀಷನ್‌ನವರು 3 ವರ್ಷದ ಹಿಂದೆ ಒಂದು ಅಂತಿಮ ರಿಪೋರ್ಟನ್ನು ಕೊಟ್ಟರು. ಹೀಗೆ ಅಂತಿಮವಾಗಿ ಕೊಟ್ಟಂಥ ರಿಪೋರ್ಟನ್ನು ಮಹಾರಾಷ್ಟ್ರದವರು ಒಪ್ಪಲಿಲ್ಲ, ತಿರಸ್ಕರಿಸಿದರು. ಶ್ರೀಮಾನ್ ಚವ್ಹಾಣರವರು ಕೇಂದ್ರದಲ್ಲಿ ಹೋಮ್‌ಮಿನಿಸ್ಟರ್ ಆಗಿದ್ದರೆ ಪ್ರಭಾವದಿಂದ ಮಹಾರಾಷ್ಟ್ರೀಯರು ಒಪ್ಪಲಿಲ್ಲ. ಮಹಾಜನ್ ರಿಪೋರ್ಟ್‌ನಲ್ಲಿ ಕನ್ನಡ ರಾಜ್ಯಕ್ಕೆ ಸೇರಬೇಕಾದಂಥ ಅನೇಕ ಕನ್ನಡ ಪ್ರದೇಶಗಳು

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ಬಿಟ್ಟುಹೋಗಿದೆ. ಆದರೂ ಒಂದು ಉದಾತ್ತ ಭಾವನೆಯಿಂದ ಒಮ್ಮತ ತೀರ್ಮಾನದಿಂದ ಅವರು ಕೊಟ್ಟಂಥ ತೀರ್ಮಾನವನ್ನು ಒಪ್ಪಿಕೊಂಡೆವು. ಆಗ ಮೈಸೂರು ಪ್ರಾಂತದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು ಅಷ್ಟೇ ಅಲ್ಲದೆ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಕೂಡ ಆಗಿದ್ದರು. ಅವೊತ್ತಿನ ದಿವಸ ಶ್ರೀಮಾನ್ ನಿಜಲಿಂಗಪ್ಪನವರಿಗೆ ಈ ಕಮೀಷನ್ ರಿಪೋರ್ಟನ್ನು ಕೇಂದ್ರ ಸರ್ಕಾರದಲ್ಲಿರುವ ಇಂದಿರಾಗಾಂಧಿಯವರಿಗೆ ಒತ್ತಾಯ ಮಾಡಿ ಜಾರಿಗೆ ತರಲಿಕ್ಕೆ ಶಕ್ತಿ ಇತ್ತು. ಅದರಲ್ಲಿ ಅವರು ವಿಫಲರಾಗಿದ್ದಾರೆ ಮತ್ತು ಕನ್ನಡಿಗರಿಗೆ ಅನ್ಯಾಯ ಮಾಡಿದ್ದಾರೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 1942ರಲ್ಲಿ ನಾನು ವಿದ್ಯಾರ್ಥಿ ಆಗಿದ್ದ ಕಾಲದ ಒಂದು ವಿಷಯ ಜ್ಞಾಪಕಕ್ಕೆ ಬಂತು. ಅದಕ್ಕಾಗಿ ಯಾವ ಕಾರಣದಿಂದಲೂ ಮಾತನಾಡದೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಮಾತನಾಡಲು ನಿಂತಿದ್ದೇನೆ.

1942 ರಿಂದ ಹೋರಾಟ ಮಾಡಿ 1947ರಲ್ಲಿ ಈಗ ಇರತಕ್ಕಂಥ ಸಿಂಡಿಕೇಟ್ ಮತ್ತು ಇಂಡಿಕೇಟ್‌ನವರು ದೇಶದ ಜವಾಬ್ದಾರಿಯನ್ನು ವಹಿಸಿಕೊಂಡರು. ಈ ರೀತಿ ಜವಾಬ್ದಾರಿ ವಹಿಸಿಕೊಂಡಮೇಲೆ 23 ವರ್ಷದಿಂದ ಕೊಟ್ಟಿರತಕ್ಕಂಥ ಕಾಣಿಕೆ ಕನ್ನಡಿಗರಿಗೆ ಆಗಿರತಕ್ಕಂಥ ಅನ್ಯಾಯ ಈ ರೀತಿ ಆಗಿದೆ. ಈಗಾಗಲೇ ಹುಬ್ಬಳ್ಳಿ, ಧಾರವಾಡದಲ್ಲಿ ವಿದ್ಯಾರ್ಥಿಗಳ ಗಲಾಟೆ ಶುರುವಾಗಿದೆ. ಗುಲ್ಬರ್ಗಾದಲ್ಲೂ ಕೂಡ 25 ಸಹಸ್ರ ಜನ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಇರತಕ್ಕಂಥ ಪ್ರದೇಶಗಳನ್ನು ಉಳಿಸಿಕೊಳ್ಳಬೇಕು ಎನ್ನುವ ಬಗ್ಗೆ ಈಗಾಗಲೇ ಹೋರಾಟಕ್ಕೆ ಹೊರಟಿದ್ದಾರೆ. ಈಗಾಗಲೇ ದೇಶದ ಜನ ಸಿಂಡಿಕೇಟ್‌ನವರಿಗೆ, ಮತ್ತು ಇಂಡಿಕೇಟ್‌ನವರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಮೊದಲು ನೀವು ಜವಾಬ್ದಾರರು. ಯಾವ ಕಾರಣದಿಂದಲೂ ತಪ್ಪಿಸಿಕೊಳ್ಳಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. ಈವೊತ್ತು ತಾವು ಜಾರಬಹುದು. ಜಾರುವುದಕ್ಕೋಸ್ಕರ ಎರಡು ಗುಂಪುಗಳನ್ನು ಮಾಡಿಕೊಂಡಿದ್ದೀರಿ. ಅದಕ್ಕೆ ದೇಶದ ಜನ ಒಪ್ಪುವುದಿಲ್ಲ. ಇಡೀ ಹಿಂದೂಸ್ಥಾನವೆಲ್ಲಾ ಒಂದೇ ಬೊಂಬಾಯಿನಲ್ಲಿ ಇರತಕ್ಕ ಜನ ಯಾರು? ಬೊಂಬಾಯಿನಲ್ಲಿ ಈವೊತ್ತು 10 ಲಕ್ಷ ಜನ ಮೈಸೂರಿನ ಕನ್ನಡಿಗರು ಇದ್ದಾರೆ. ಈವೊತ್ತು ಬಾಳಠಾಕ್ರೆಯವರು ಮಾರ್ಚ್ ಎರಡನೇ ತಾರೀಕಿನೊಳಗೆ ಕೇಂದ್ರ ಸರ್ಕಾರದವರು ಇದರ ಬಗ್ಗೆ ತೀರ್ಮಾನವನ್ನು ಕೊಡದೇ ಹೋದರೆ ನಾವೇ ಮೈಸೂರಿನ ಮೇಲೆ ದಂಡಯಾತ್ರೆ ಬಂದು ಹೋರಾಟ ಮಾಡುತ್ತೇವೆ ಎನ್ನುವ ಸೂಚನೆ ಕೊಟ್ಟಿದ್ದಾರೆ. ಯಾರೇ ಆಗಲಿ ಅವರು ಬಂದು ನಮ್ಮ ಮೇಲೆ ಬಿದ್ದಾಗ ನಾವು ಅವರ ಮೇಲೆ ಬೀಳಬೇಕಾಗುವ ಸಂದರ್ಭ ಒದಗಿಬರುತ್ತದೆ. ಅದಕ್ಕೆ ಇಂಡಿಕೇಟ್ ಮತ್ತು ಸಿಂಡಿಕೇಟ್‌ನವರು ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

8-30 P. M.

ನೀವು ಜಾರುವ ಮಾತನ್ನು ಆಡಬಾರದು. ಕೆಲವರು ಬಹಳ ಸುಲಭವಾಗಿ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಮಾನ್ಯ ಶ್ರೀ ದಯಾನಂದ ಸಾಗರ್ ಅವರ ಜವಾಬ್ದಾರಿಯೂ ಇದರಲ್ಲಿದೆ. ಏಕೆಂದರೆ ಅವರು ಬಹಳ ವರ್ಷಗಳ ಕಾಲ ನಮ್ಮ ಸ್ನೇಹಿತರಾಗಿದ್ದರು. ಅವರು ಮೊದಲು ನಮ್ಮನ್ನು ಬಿಟ್ಟು ಕಾಂಗ್ರೆಸ್ಸಿಗೆ ಸೇರಿದರು. ಪುನಃ ಈಗ ಇಂಡಿಕೇಟಿಗೆ ಬಂದಿದ್ದಾರೆ. ತಮ್ಮ ಜವಾಬ್ದಾರಿಯಿಂದ ಯಾರೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಕನ್ನಡ ರಾಜ್ಯಗಳ ವಿಚಾರ ಮತ್ತು ಮಹಾರಾಷ್ಟ್ರ ರಾಜ್ಯಗಳ ವಿಚಾರ ಬಹಳ ದೊಡ್ಡ ವಿಚಾರವೆಂದು ನಾನು ಹೇಳುತ್ತೇನೆ. ನಮ್ಮ ದೇಶದಲ್ಲಿ ಬಲಯುತವಾದ ಸರ್ಕಾರ ಇದ್ದರೂ ನಮ್ಮ ಗಡಿ ಪ್ರಶ್ನೆಯನ್ನು ಇನ್ನೂ ಅಂತಿಮವಾಗಿ ತೀರ್ಮಾನ ಮಾಡಲಿಲ್ಲ. ಆ ರೀತಿ ತೀರ್ಮಾನ ಮಾಡದೆ ಇರುವಾಗ ಕೇವಲ ಮೈಸೂರು ಗಡಿ ಪ್ರಶ್ನೆಯನ್ನು ತೆಗೆದುಕೊಂಡಿರುವುದನ್ನು ನೋಡಿದರೆ ಈಗ ಇಲ್ಲಿ ಇರತಕ್ಕ ಒಂದು ಸರ್ಕಾರದಮೇಲೆ ಕೇಂದ್ರ ಸರ್ಕಾರ ತನ್ನ ಸೇಡನ್ನು ತೀರಿಸಿಕೊಂಡು ಈ ಸರ್ಕಾರವನ್ನು ನಾಶ ಮಾಡಬೇಕೆಂದು ಇರಬಹುದು. ಇದರಲ್ಲಿ ನನಗೇನೂ ಅಡ್ಡಿಯಿಲ್ಲ. ನಾವು ಅದಕ್ಕಾಗಿ ವ್ಯಸನ ಪಡುತ್ತಾ ಇಲ್ಲ. ಆದರೆ ನಿಜವಾಗಿ ನಾಶವಾಗುವವರು ಜನಸಾಮಾನ್ಯರು. 1947ರ ಹೋರಾಟದಲ್ಲಿ ಲೀಡರ್ ಆಗಿರತಕ್ಕವರು ಅದರಲ್ಲಿಯೂ ಮುಂದಾಳುಗಳಾಗಿರತಕ್ಕವರು ತಮ್ಮ ಪ್ರಾಣಗಳನ್ನು ಕೊಟ್ಟಿಲ್ಲ. ಆ ಸಂದರ್ಭದಲ್ಲಿ ಪ್ರಾಣಗಳನ್ನು ಕೊಟ್ಟವರೇ ಬೇರೆ. ಈ ದೇಶದಲ್ಲಿ ಸ್ವಾತಂತ್ರ್ಯ ಬರಬೇಕಾದರೆ ಐದು ಜನರನ್ನು ಫಾಸಿಗೆ ಹಾಕಿದರು. ಇವತ್ತು ಕನ್ನಡ ರಾಜ್ಯದಲ್ಲಿ ಹೋರಾಟವಾದರೆ ಜನಸಾಮಾನ್ಯರು ಹೆಚ್ಚು ಸಾಯುತ್ತಾರೆ. ಈಗಾಗಲೇ ಅನೇಕ ಕಡೆಗಳಲ್ಲಿ ಅಶ್ರುವಾಯು

ಬಿಟ್ಟಿದ್ದಾರೆ, ಲಾಠಿ ಚಾರ್ಜು ಆಗಿದೆ. ಯಾವ ಸರ್ಕಾರವಿದ್ದರೂ ಅದನ್ನು ಮಾಡಬೇಕಾಗಿದೆ. ಇವತ್ತು ಇದು ಕನ್ನಡನಾಡಿನ ಪ್ರಶ್ನೆ. ನಮ್ಮ ಪಕ್ಕದ ರಾಜ್ಯದಲ್ಲಿರುವ ಅಣ್ಣ ತಮ್ಮಂದಿರ ಪ್ರಶ್ನೆ. ಮಹಾರಾಷ್ಟ್ರದವರು ಬೇರೆಯಲ್ಲ ಕನ್ನಡದವರು ಬೇರೆಯಲ್ಲ, ತೆಲುಗಿನವರು ಬೇರೆಯಲ್ಲ, ಬ್ರಿಟಿಷರು ಹಾಕಿಹೋದಂಥ ವಿಷ ಬೀಜ ಇವತ್ತು ಬೆಳೆದು ಮರವಾಗಿದೆ. ಇವತ್ತು ಮಹಾರಾಷ್ಟ್ರ-ಮೈಸೂರಿನ ಗಡಿ ಪ್ರಶ್ನೆಯ ಬಗ್ಗೆ ನಮ್ಮ ಸ್ನೇಹಿತರಲ್ಲಿ ಒಂದು ಪ್ರಾರ್ಥನೆ ಮಾಡುತ್ತೇನೆ. ಇಂಡಿಕೇಟ್ ಮತ್ತು ಸಿಂಡಿಕೇಟ್ ಬೇರೆಯಲ್ಲ. ನನಗೆ ಇವತ್ತು ಗಡಿ ಪ್ರಶ್ನೆ ಮುಖ್ಯ. ನಮ್ಮ ದೇಶದ ಪ್ರಶ್ನೆ ಮತ್ತು ನಮ್ಮ ಭಾರತದ ಪ್ರಶ್ನೆ ಬಹು ಮುಖ್ಯ. ಈ ಪ್ರಶ್ನೆಯನ್ನು ಎದುರಿಸುವಾಗ ನಮ್ಮ ನಮ್ಮಲ್ಲಿ ವ್ಯತ್ಯಾಸವೇನೂ ಇಲ್ಲ. ಇದಕ್ಕೆ ನಮ್ಮ ಪೂರ್ಣ ಸಹಕಾರವನ್ನು ಕೊಡುವುದಕ್ಕೆ ತಯಾರಿದ್ದೇವೆ. ಈ ಗಡಿ ಪ್ರಶ್ನೆಯ ಬಗ್ಗೆ ಬಹಳವಾಗಿ ಎಚ್ಚರ ವಹಿಸಿ ಒಂದು ಅಂತ್ಯ ತೀರ್ಮಾನಕ್ಕೆ ಬರಬೇಕು. ಈಗಿರತಕ್ಕ ಸಿಂಡಿಕೇಟ್ ಮತ್ತು ಇಂಡಿಕೇಟ್ ಎಂಬ ವ್ಯತ್ಯಾಸವಿಲ್ಲದೆ ಎಲ್ಲರೂ ಒಂದಾಗಿ ಡೆಲ್ಲಿಗೆ ಹೋಗಬೇಕು. ಕೇಂದ್ರ ಸರ್ಕಾರದಲ್ಲಿರತಕ್ಕ ಶ್ರೀಮತಿ ಇಂದಿರಾಗಾಂಧಿಯವರನ್ನು ಭೇಟಿ ಮಾಡ ಬೇಕು ಮತ್ತು ಪಾರ್ಲಿಮೆಂಟ್ ಸದಸ್ಯರನ್ನು ಭೇಟಿ ಮಾಡಬೇಕು. ಅಲ್ಲಿ ಹೋಗಿ ಉತ್ತಮವಾದ ತೀರ್ಮಾನಗಳನ್ನು ದೊರಕಿಸಿಕೊಂಡು ಬರಬೇಕು. ಇಲ್ಲದಿದ್ದರೆ ಈ ಒಂದು ಸಮಸ್ಯೆಯಿಂದ ಏನಾದರೂ ಈ ದೇಶದಲ್ಲಿ ಪ್ರಾಣಹಾನಿಗಳು ಆದರೆ, ಅದಕ್ಕೆ ನೀವೇ ಜವಾಬ್ದಾರರು ಎಂಬುದಾಗಿ ಹೇಳಿ ನನ್ನ ಮಾತುಗಳನ್ನು ಇಲ್ಲಿಗೆ ಮುಕ್ತಾಯ ಮಾಡುತ್ತೇನೆ.—ಜೈ ಹಿಂದ್.

Sri H. SIDDAVEERAPPA.—Sir, with your permission, I would like to move the following amendment to the substitute motion :

"That in my substitute motion in the last but one line after the words 'for adjustments' the following words may be added :

'for adjustments of Karnatak areas like Kasargod in Kerala, Talewadi and Hosur in Tamil Nadu and Madaksira in Andhra Pradesh as provided in the States Reorganisation Act, 1966'."

Mr. SPEAKER.—Amendment moved :

'That in my substitute motion in the last but one line after the words 'for adjustments' the following words may be added :

'for adjustments of Karnatak areas like Kasargod in Kerala, Talewadi and Hosur in Tamil Nadu and Madaksira in Andhra Pradesh as provided in the States Reorganisation Act, 1956'."

Sri H. SIDDAVEERAPPA.—Sir, the main purpose of my amendment is that my friends expressed a doubt that my substitute motion as it stands precludes or bars the consideration of other Kannada areas like Kasargod, Talewadi, Hosur and Madaksira. I did not expressly put it in my motion because I mentioned that there is a provision in the States Reorganisation Act itself to take these matters to the Zonal Councils. However, I do not wish that it should be misunderstood that my party is opposed to the inclusion of these areas. It is with a view to clarify this position that I have moved this amendment. I am thankful to you, Sir, for giving me an opportunity to do so.

† ಶ್ರೀ ಪಿ. ತಿಮ್ಮಯ್ಯ (ಬಸವನಗುಡಿ).—ಅಧ್ಯಕ್ಷರೇ, ನನಗೆ ಇವತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ತಮ್ಮನ್ನು ಅಭಿನಂದಿಸುತ್ತೇನೆ. ನನಗೆ ಈ ಸಭೆಯಲ್ಲಿ ಮಾತನಾಡುವುದಕ್ಕೆ ಏನಾದರೂ ಅವಕಾಶವನ್ನು ಕೊಟ್ಟರೆ, ನಾನು

(ಶ್ರೀ ಪಿ. ತಿಮ್ಮಯ್ಯ)

ರಸಗುಲ್ಲಾ ಮಾತುಗಳನಾಡುತ್ತೇನೆ. ರಸಗುಲ್ಲಾ ತಿನ್ನುವುದಕ್ಕೇನೋ ಚಂದ. ಈಗ ಈ ಗಡಿ ಸಮಸ್ಯೆಯ ಬಗ್ಗೆ ಮಾನ್ಯ ಶ್ರೀ ಸಿದ್ಧವೀರಪ್ಪನವರೂ ಮತ್ತು ಮಾನ್ಯ ಶ್ರೀ ಗೋಪಾಲಗೌಡರು ನಿರ್ಣಯಗಳನ್ನು ತಂದಿದ್ದಾರೆ. ಈಗ ಮೈಸೂರು ಗಡಿ ಪ್ರಶ್ನೆ ರಾಜ್ಯದ ಸುತ್ತಲೂ ಇರುವಾಗ ನಾನು ನಿಮಗೆ ಕೈಜೋಡಿಸಿ ಹೇಳುವುದೇನೆಂದರೆ, ಪ್ರತಿಯೊಬ್ಬರೂ ನಮ್ಮ ನಾಡಿಗೋಸ್ಕರ ಎಲ್ಲರೂ ಒಮ್ಮತ ಮನಸ್ಸಿನಿಂದ ಸೇರಿಕೊಂಡು ಈ ಪ್ರಶ್ನೆಯನ್ನು ತೀರ್ಮಾನ ಮಾಡಬೇಕು. ಏಕೆಂದರೆ ಯಾರೇ ಆಗಲೀ ನಮ್ಮ ಪಕ್ಕದ ಮನೆಯವರು ನಮ್ಮನ್ನು ದೂರುವಾಗ, ನಮಗೆ ಎಷ್ಟು ಆತ್ಮಗೌರವ ಹೋಗುತ್ತದೆನ್ನುವುದನ್ನು ನಾವು ಈ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳಬೇಕು. ಆ ಭಾವನೆ ಈಗ ಪ್ರತಿಯೊಬ್ಬರಿಗೂ ಈ ಸಮಸ್ಯೆ ಬಗ್ಗೆ ಬರಬೇಕಾಗಿದೆ. ನಮ್ಮ ನಾಡು ಕನ್ನಡ ನಾಡು. ಸಾವಿರಾರು ವರ್ಷಗಳಿಂದಲೂ ವಿಜಯನಗರದ ಸಂಸ್ಥಾನಾಧೀಶರು ಮತ್ತು ಇತರರು ಈ ಕನ್ನಡ ಸಾಮ್ರಾಜ್ಯವನ್ನು ಕಟ್ಟಿದ್ದಾರೆ. ಅಂದಮೇಲೆ ಅಂತಹ ಒಂದು ಸಂಸ್ಥಾನದಲ್ಲಿ ಅದರಲ್ಲಿಯೂ ಕನ್ನಡ ನಾಡಿನಲ್ಲಿರುವ ಕೆಲವು ಪ್ರಾಂತಗಳನ್ನು ಬೇರೆ ರಾಜ್ಯದವರು ತೆಗೆದುಕೊಂಡು ಹೋಗಲು ಪ್ರಯತ್ನ ಮಾಡುತ್ತಾರೆಂದರೆ, ಅದು ಬಹಳ ಅನ್ಯಾಯ. ಇದು ಕಳ್ಳತನ. ಮಹಾರಾಷ್ಟ್ರದವರು ನಮ್ಮ ಮನೆಯಲ್ಲಿ ಕಳ್ಳತನಮಾಡುವುದಕ್ಕೆ ಬಂದಿರುವುದು ಅನ್ಯಾಯ. ನಮ್ಮ ರಾಜ್ಯದ ಒಂದು ಭಾಗವನ್ನು ಕದಿಯುವುದಕ್ಕೆ ಮಹಾರಾಷ್ಟ್ರದವರು ಹೊರಟಿದ್ದಾರೆ. ನಮ್ಮನ್ನು ಅವಮಾನಪಡಿಸುವುದಕ್ಕೆ ಮರಾಟಿಗರು ಹೊರಟಿದ್ದಾರೆ. ಇದರಿಂದ ಮುಂದೆ ನಾವು ಬಹಳ ಕೆಟ್ಟ ದಿನಗಳನ್ನು ನೋಡಬೇಕಾಗುತ್ತದೆ. ನಾವೆಲ್ಲಾ ಹಿಂದೆ ಬಹಳ ಒಳ್ಳೆಯ ದಿನಗಳನ್ನು ನೋಡಿದ್ದೆವು. ಇಂತಹ ಒಳ್ಳೆಯ ದಿನಗಳು ಮುಂದೆ ಬರುವುದಿಲ್ಲ ಎನ್ನುವ ಮಾತನ್ನು ನಾನು ಘಂಟಾಘೋಷವಾಗಿ ಹೇಳುತ್ತೇನೆ. 1970ನೇ ಇಸವಿ ಬಹಳ ಗಂಡಾಂತರದ ವರ್ಷ. 1971ನೇ ಇಸವಿಯನ್ನು ನಾವು ನೋಡುವುದು ಕಷ್ಟವಾಗುತ್ತದೆ. ಅದ್ದರಿಂದ ಈ ವರ್ಷ ನಾವು ಬಹಳ ಜಾಗರೂಕತೆಯಿಂದ ಇರುವುದು ಒಳ್ಳೆಯದು. ಶಾಂತಿ, ಸಮರಸ, ನ್ಯಾಯ, ವಿಶ್ವಾಸ ಮತ್ತು ಪ್ರೀತಿಯಿಂದ ನಾವೆಲ್ಲರೂ ಒಂದಾಗಿ ಕೇಂದ್ರ ಸರ್ಕಾರದ ಮುಂದೆ ವ್ಯಾಜ್ಯ ಮಾಡದಿದ್ದರೆ ಮುಂದೆ ನಮಗೆ ಬಹಳ ಅನ್ಯಾಯವಾಗುತ್ತದೆಂದು ಎಚ್ಚರಿಕೆ ಕೊಡುತ್ತಿದ್ದೇನೆ. ಇಂತಹ ಸಮಯದಲ್ಲಿ ಇಂಡಿಕೇಟ್ ಮತ್ತು ಸಿಂಡಿಕೇಟ್‌ನ ಪಕ್ಷಗಳು ಇತರೇ ಪಕ್ಷಗಳೊಡನೆ ಕೂಡಿಕೊಂಡು ಒಂದು ಸೈನ್ಯವನ್ನು ಕಟ್ಟಿ ಅದಕ್ಕೆ ಕರ್ಣಾಟಕ ಸೈನ್ಯ ಎಂದು ಹೆಸರಿಡಬೇಕು. ಮಹಾರಾಷ್ಟ್ರದಲ್ಲಿ ಈಗಾಗಲೇ ಶಿವಸೈನ್ಯ ಇದೆ. ಈ ರೀತಿ ನಾವು ಸಹ ಕರ್ಣಾಟಕ ಸೈನ್ಯ ಎಂಬುದಾಗಿ ಒಂದು ಸೈನ್ಯವನ್ನು ಕಟ್ಟಿಕೊಂಡು ಗಡಿ ಬಗ್ಗೆ ಹೋರಾಟವನ್ನು ದಕ್ಷತೆಯಿಂದ ಮಾಡಿ ಒಂದು ಅಂಗುಲ ಭೂಮಿಯನ್ನು ಸಹ ಬಿಟ್ಟುಕೊಡಬಾರದು. ಮಾನ್ಯ ಮುಖ್ಯಮಂತ್ರಿಗಳು ಸಹ ಒಂದು ಅಂಗುಲ ಭೂಮಿಯನ್ನು ಸಹ ಬಿಟ್ಟುಕೊಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ನಾನು ಅವರನ್ನು ವಿಶಾಲಮನಸ್ಸಿನಿಂದ ಅಭಿನಂದಿಸುತ್ತೇನೆ. ಮತ್ತು ಅವರು ಆ ಕೆಲಸವನು ಮಾಡುತ್ತಾರೆಂಬ ಭರವಸೆ ನನಗೆ ಇದೆ. ಮೊನ್ನೆ ಶ್ರೀ ವಾಟಾಳ್ ನಾಗರಾಜ್ ಅವರು ತಾಳವಾಡಿ ವಿಷಯದ ಬಗ್ಗೆ ಮಾತನಾಡುತ್ತಾ ನನ್ನ ಮೇಲೆ ಒಂದು ಆಪಾದನೆ ಮಾಡಿದ್ದಾರೆ. ನಾನು ಅವರ ಬಗ್ಗೆ ಹೇಳಿದ್ದು ನಿಜವಾದರೆ ನಾನು ರಾಜಿನಾಮೆ ಕೊಡುತ್ತೇನೆ ಎನ್ನುವ ವಿಷಯವನ್ನು ಸಹ ವಾಟಾಳ್ ನಾಗರಾಜ್ ಹೇಳಿದ್ದಾರೆ. ನಾನು ಯಾವಾಗಲು ಸುಳ್ಳು ಹೇಳುವುದಿಲ್ಲ. ಈ ಹೌಸ್ ದೇವರ ಹೌಸ್. ಜವಾಬ್ದಾರಿ ಹೌಸ್ ಆಗಿದೆ. ಇದು ಬೇಜವಾಬ್ದಾರಿ ಹೌಸ್ ಅಲ್ಲ. ನಾನು ಆ ದಿನ ದೇವರ ಹಾಗೆ ಹೇಳಿದ್ದೇನೆ. ನಾನು ಆ ರೀತಿ ಹೇಳಿದ್ದು ಸುಳ್ಳು ಎಂದು ಅವರು ಹೇಳಿದ್ದಾರೆ. ನಾನು ಹೇಳಿದ ವಿಷಯ ನಿಜ. ಆದ್ದರಿಂದ ಅವರೇ ರಾಜೀನಾಮೆ ಕೊಡಬೇಕು. ಎಲ್ಲಿಯಾದರೂ 3 ಜನ ಹೋಗಿ ತಾಳವಾಡಿಯಲ್ಲಿ ಚಳುವಳಿ ನಡೆಸುವುದಕ್ಕೆ ಸಾಧ್ಯವಾಗುತ್ತದೆಯೇ ? ಆತನ ಹಿಂದೆ ಅನೇಕ ಮಕ್ಕಳು ಸಹ ಹೋಗಿದ್ದರು. ಆ ಮಕ್ಕಳ ತಂದೆ ತಾಯಿಗಳು ನನ್ನ ಹತ್ತಿರ ಬಂದು ತಮ್ಮ ಕಷ್ಟವನ್ನು ಹೇಳಿಕೊಂಡರು. ಸಂಸಾರದ ಗುಟ್ಟು ಆ ಮನುಷ್ಯನಿಗೆ ಗೊತ್ತಿಲ್ಲ. ಆತನು ಮದುವೆಯಾಗಿದ್ದರೆ ಸಂಸಾರದ ಗುಟ್ಟು ಏನು ಎಂಬುದು ಗೊತ್ತಾಗುತ್ತಿತ್ತು. ಆತ ಗುಂಡುಗೋವಿ. ಆತನಿಗೆ ಹೆಣ್ಣು ಮಕ್ಕಳ ಕಷ್ಟ ಏನು ತಿಳಿಯುತ್ತದೆ. ಯಾರಿಗೆ ದಯಧರ್ಮ ಇದೆಯೋ ಅಂತಹವರ ಹತ್ತಿರ ತಮ್ಮ ಕಷ್ಟವನ್ನು ಹೇಳಿಕೊಳ್ಳಲು ಹೆಣ್ಣುಮಕ್ಕಳು ಬರುತ್ತಾರೆ. ನನ್ನ ಹತ್ತಿರ ಕೆಲವು ಹೆಣ್ಣುಮಕ್ಕಳು ಬಂದು ತಮ್ಮ ಹುಡುಗರು ಚಳುವಳಿಯಲ್ಲಿ ಭಾಗವಹಿಸಲು ತಾಳವಾಡಿಗೆ ಹೋಗಿದ್ದಾರೆಂಬ ವಿಷಯವನ್ನು ಹೇಳಿದರು. ಅಂತಹ ಸಮಯದಲ್ಲಿ ನನ್ನ ಕೈಲಾದ ಸಹಾಯ ಮಾಡುವುದು ನನ್ನ ಧರ್ಮ. ಆದರಂತೆ ನಾನು ಕೈಲಾದ ಸಹಾಯ ಮಾಡುತ್ತೇನೆ ಎಂಬ ಭರವಸೆಯನ್ನು ಸಹ ಕೊಟ್ಟೆ. ಅಸೆಂಬ್ಲಿಯಲ್ಲಿ ಬಂದು ಆ ವಿಚಾರವನ್ನು ಸಹ ಹೇಳಿದೆ. ಮಾನ್ಯ ವಾಟಾಳ್‌ನಾಗರಾಜ್ ಅವರು ನಾನು ಆ ರೀತಿ ಹೇಳಿದ್ದು ತಪ್ಪು, ಅದನ್ನು ವಾಪಸ್ ತೆಗೆದುಕೊಳ್ಳ

ಬೇಕೆಂದು ಹೇಳಿಕೆ ಕೊಟ್ಟರು. ಯಾವುದು ಸರಿ ಯಾವುದು ತಪ್ಪು ಎಂಬುದು ಮಾನ್ಯ ಸಭೆಗೆ ಗೊತ್ತಿವೆ. ಆದ್ದರಿಂದ ಆ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ನಮ್ಮ ರಾಜ್ಯ ಸಂಸ್ಕೃತಿ ದೃಷ್ಟಿಯಿಂದ ಒಳ್ಳೆಯ ಹೆಸರನ್ನು ಪಡೆದಿದೆ. ಈ ರಾಜ್ಯದ ಜನರಲ್ಲಿಯೂ ಕೂಡ ಬಿಸಿ ರಕ್ತ ಇದೆ. ನಾವು ಮಹಾರಾಷ್ಟ್ರದವರಿಗೆ ಸೋಲುವುದು ಸರಿಯಲ್ಲ. ಆದಕ್ಕಾಗಿ ನಾವು ಸಹ ಒಂದು ಸೈನ್ಯವನ್ನು ಕಟ್ಟುವುದು ಒಳ್ಳೆಯದು. ಆ ರೀತಿ ಒಂದು ಸೈನ್ಯವನ್ನು ಕಟ್ಟಿ ಕೇಂದ್ರದೊಡನೆ ಹೋರಾಟ ಮಾಡದಿದ್ದರೆ ನಮಗೆ ಅನ್ಯಾಯ ವಾಗುತ್ತದೆಂದು ಹೇಳುತ್ತೇನೆ. ಕೊನೆಯಾದಾಗಿ ನಾನು ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುವು ದೇನೆಂದರೆ, ಎಲ್ಲರಿಗೂ ಹೇಳುವಂತೆ ನನಗೂ ಸಹ ಬೆಲ್ ಹೊಡೆದು ಕುಳಿತುಕೊಳ್ಳಬೇಕೆಂದು ಹೇಳ ಬೇಡಿ. ಆ ರೀತಿ ಬೆಲ್ ಹೊಡೆದರೆ ನಾನು ಕುಳಿತುಕೊಳ್ಳುವುದಿಲ್ಲ. ರಾಜಾ ಎಂದು ಕೇವಲ ಬಾಯಿ ಮಾತಿನಿಂದ ಹೇಳಿದರೆ ಸಾಲದು ಆ ಒಂದು ವಿಶ್ವಾಸ ತಮ್ಮ ಹೃದಯದಲ್ಲಿಯೂ ಸಹ ಇರಬೇಕು. ಕಷ್ಟ ಬಂದಾಗ ನಾವುಗಳು ಮಾತನಾಡುವುದಕ್ಕೆ ಸಾಕಷ್ಟು ಅವಕಾಶ ಕೊಡಬೇಕು. ಆ ರೀತಿ ಅವಕಾಶ ಕೊಡದೆ ಕುಳಿತುಕೊಳ್ಳಿ ಎಂದು ಹೇಳುವುದು ತಮ್ಮ ಗೌರವಕ್ಕೆ ತಕ್ಕುದ್ದಲ್ಲ. ನಮಗೆಲ್ಲಾ ಮಾತನಾಡಲು ಅವಕಾಶ ಕೊಡುವುದಕ್ಕೇ ನೀವು ಇರುವುದು. ಈಗ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೂ ಮತ್ತು ನಮ್ಮ ದೇಶಕ್ಕೂ ಎರಡು ಕೈಜೋಡಿಸಿ ನಮಸ್ಕಾರ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ತಾವು ಮೊದಲೇ ಬಂದು ಮಾತನಾಡಬೇಕಾಗಿತ್ತು. ಕೊನೆಯಲ್ಲಿ ಬಂದು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿದರೆ ಏನು ಮಾಡುವುದು.

ಶ್ರೀ ಜಿ. ದುಗ್ಗಪ್ಪ.—ಪ್ರಧಾನಿ ಇಂದಿರಾ ಗಾಂಧಿಯವರು ಈ ರಾಜ್ಯಕ್ಕೆ ವಿರೋಧವಾಗಿ ದ್ದಾರೆಂಬುದು ಅವರು ಕಳಿಸಿರುವ ಪ್ರಪೋಸಲ್ಸ್‌ನಿಂದ ಗೊತ್ತಾಗುತ್ತದೆ ಎಂಬತಕ್ಕಂಥ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಈ ಒಂದು ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಆಫೀಸ್ ಮೂಲಕ ತಿಳಿಸಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಮುಖ್ಯಮಂತ್ರಿಯವರು ಇದನ್ನು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೆ ಎಂಬ ಬಗ್ಗೆ ಮೊದಲು ಒಂದು ಸ್ಟೇಟ್‌ಮೆಂಟ್ ಕೊಡಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ.—ಪಾಯಿಂಟ್ ಆಫ್ ಆರ್ಡರ್ ಸರ್.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಿ. ದುಗ್ಗಪ್ಪ.—ನಾನು ಮುಖ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದು ಇಷ್ಟೇ ಪ್ರಧಾನ ಮಂತ್ರಿಯವರು ನಮ್ಮ ರಾಜ್ಯಕ್ಕೆ ವಿರೋಧವಾಗಿದ್ದಾರೆ ಎಂದು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಅದರ ಬಗ್ಗೆ ಒಂದು ನಿಖರವಾದ ಸ್ಟೇಟ್‌ಮೆಂಟ್ ಕೊಟ್ಟು ನಂತರ ಅವರು ಭಾಷಣ ಮಾಡಿದರೆ ಒಳ್ಳೆಯದಾಗುತ್ತದೆಂದು ನಾನು ಅವರನ್ನು ಬೇಡಿಕೊಳುತ್ತೇನೆ.

Mr. SPEAKER.—It is left to the Hon. Chief Minister. The Chair cannot dictate to him. He has heard the hon. Member. It is left to the Hon. Chief Minister to reply in his own way. It is not correct for Sri Duggappa to intervene without the permission of the Chair and make a speech.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರ ಮತ್ತು ಮೈಸೂರಿನ ಗಡಿ ವಿವಾದದ ಬಗ್ಗೆ ಇತ್ತೀಚಿನ ಕೆಲವು ಡೆವಲಪ್‌ಮೆಂಟ್‌ಗಳ ಬಗ್ಗೆ ಕಳೆದ ಮೂರು ದಿವಸಗಳಿಂದ ಈ ಸಭೆಯಲ್ಲಿ ದೀರ್ಘವಾಗಿ ಚರ್ಚೆಯಾಗಿದೆ. ವಿಷಯ ಏನು ಎಂಬುದು ಮಾನ್ಯ ಸಭೆಯ ಕೆಲವು ವಿರೋಧ ಪಕ್ಷದ ನಾಯಕರಿಗೆ ಚೆನ್ನಾಗಿ ಗೊತ್ತಿದೆ. ಮತ್ತು ಪತ್ರಿಕೆ ಗಳಲ್ಲಿಯೂ ಕೂಡ ಈ ವಿಷಯ ಬಂದಿದೆ. ಇದೇ ತಿಂಗಳು 19ನೇ ತಾರೀಖು ಕೇಂದ್ರದಿಂದ ಇಬ್ಬರು ಅಧಿಕಾರಿಗಳು ಗಡಿ ಪ್ರಶ್ನೆ ಬಗ್ಗೆ ಕೆಲವು ಸಲಹೆಗಳನ್ನು ತೆಗೆದುಕೊಂಡು ಬಂದು ನನ್ನ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಅವತ್ತಿನ ದಿವಸ ನಾನು ಅವರ ಜೊತೆಯಲ್ಲಿ ದೀರ್ಘವಾಗಿ ಚರ್ಚೆ ಮಾಡ ಬೇಕಾದ ಪರಿಸ್ಥಿತಿ ಬಂತು. ಮತ್ತು ಮನೆಗೆ ಹೋಗುವುದಕ್ಕೆ ಸಾಕಷ್ಟು ಸಮಯವೂ ಆಗಿತ್ತು. ಸಾಧ್ಯವಾಗಿದ್ದರೆ ನಾನು ಆ ದಿನವೇ ವಿರೋಧಪಕ್ಷದ ನಾಯಕರೊಡನೆ ಆ ಬಗ್ಗೆ ವಿಚಾರ ಮಾಡೋಣ ಎಂಬ ವಿಚಾರವನ್ನು ಸಹ ಇಟ್ಟುಕೊಂಡಿದ್ದೆ. ಆದರೆ ಆವೊತ್ತು ಸಾಕಷ್ಟು ಸಮಯ ಸಿಕ್ಕಲಿಲ್ಲ. ಎರಡನೆಯ ದಿವಸ ಯಾರು ಯಾರು ವಿರೋಧಪಕ್ಷದ ನಾಯಕರು ಇಲ್ಲಿ ಇದ್ದರು ಅವರನ್ನು ನಾನು ಕರೆಸಿಕೊಂಡು ಕೇಳಿದೆ. ಮೀಟಿಂಗಿಗೆ ಬರುವುದಕ್ಕೆ ಯಾರು ಯಾರಿಗೆ ಸಾಧ್ಯವಿತ್ತೋ ಅವರುಗಳನ್ನೆಲ್ಲಾ ನಾನು ಆಹ್ವಾನಿಸಿದೆ. ರಾತ್ರಿ 8½—9 ಗಂಟೆಗೆ ಮೂರು ಜನ ವಿರೋಧಪಕ್ಷದ ನಾಯಕರು ನನ್ನ ಜೊತೆಯಲ್ಲಿ ಚರ್ಚೆ ಮಾಡುವುದಕ್ಕೆ ಬಂದರು. ಅವೊತ್ತಿನ ದಿವಸ ಕೇಂದ್ರದಿಂದ ಏನು ಒಂದು

(ಶ್ರೀ ವೀರೇಂದ್ರ ಪಾಟೀಲ್)

ಸಲಹೆಗಳು ಬಂದಿವೆ ಎನ್ನುವ ವಿಚಾರವನ್ನು ಅವರಿಗೆ ನಾನು ಪೂರ್ತಿಯಾಗಿ ತಿಳಿಸಿದ್ದೇನೆ. ನಾನು ಏತಕ್ಕೆ ವಿಚಾರವನ್ನು ಹೇಳುತ್ತೇನೆ ಎಂದರೆ ಕೇಂದ್ರದ ಸಲಹೆ ಅಥವಾ ಪ್ರಪೋಜಲ್‌ಗಳು ಅವು ನನಗೆ ಬಹಳ ಮಟ್ಟಿಗೆ ದಿಗ್ಭ್ರಮೆ ಮಾಡಿತು. ಆಗ ನಾನು ವಿಚಾರ ಮಾಡಿದೆ ಇದು ಕೇವಲ ವೀರೇಂದ್ರ ಪಾಟೀಲರ ಪ್ರಶ್ನೆಯಲ್ಲ. ಅಥವಾ ನಮ್ಮ ಸಂಸ್ಥೆಯ ಪ್ರಶ್ನೆಯಲ್ಲ, ಈ ಪ್ರಶ್ನೆ ಇಡೀ ರಾಜ್ಯದ ಪ್ರಶ್ನೆ. ಎಲ್ಲಾ ಪಕ್ಷಗಳ ಪ್ರಶ್ನೆ. ಇಂಥಾ ಒಂದು ಪ್ರಶ್ನೆಯನ್ನು ನಾನು ಅವರಿಗೆ ತಿಳಿಸಲಾರದೆ ಹೋಗಿ ನಾನು ನನ್ನ ಮಟ್ಟಿಗೆ ಇಟ್ಟುಕೊಂಡು ಅದನ್ನು ವಿಚಾರ ಮಾಡೋಣ ಎನ್ನುವ ದೃಷ್ಟಿಯಿಂದ ಹೋದರೆ ಬಹುಶಃ ನಾಳೆ ಅನೇಕ ಮಾನ್ಯ ಸದಸ್ಯರು ಈ ಮನೆಯಲ್ಲಿ ನನ್ನನ್ನು ದೂಷಿಸಬಹುದು. ಈ ಪ್ರಶ್ನೆ ಬಂದಾಗ ನೀವು ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ, ಕಾನ್‌ಫಿಡೆನ್ಸ್‌ನಲ್ಲಿ ತೆಗೆದು ಕೊಳ್ಳಲಿಲ್ಲ, ಮುಖ್ಯ ಮಂತ್ರಿಗಳು ಅವರ ಮನಸ್ಸಿಗೆ ಬಂದಂತೆ ಮಾಡಿದ್ದಾರೆ ಎನ್ನುವ ಒಂದು ದೂಷಣೆಗೆ ನಾನು ಒಳಗಾಗುತ್ತೇನೆ, ಅದಕ್ಕಾಗಿ ನಾನು ಈ ವಿಚಾರವನ್ನು ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಎಲ್ಲರೂ ಸೇರಿ ಇದನ್ನು ತೀರ್ಮಾನ ಮಾಡುವುದಕ್ಕೆ ಎಲ್ಲಾ ವಿರೋಧಪಕ್ಷದ ನಾಯಕರು ಬೆಂಗಳೂರಿನಲ್ಲಿ ಇಲ್ಲ, 23ನೇ ತಾರೀಖು ಎಲ್ಲಾ ವಿರೋಧಪಕ್ಷದ ನಾಯಕರು ಮತ್ತು ಅನೇಕ ಮಾನ್ಯ ಸದಸ್ಯರೂ ಬೆಂಗಳೂರಿಗೆ ಬರುತ್ತಾರೆ, 23ನೇ ತಾರೀಖು ಮತ್ತೊಮ್ಮೆ ನಾವೆಲ್ಲರೂ ಸೇರೋಣ ಎಂದು ಹೇಳಿ ಅದರಂತೆ ಎಲ್ಲರಿಗೂ ಇನ್‌ವಿಟೇಷನ್ ಕಳುಹಿಸಿ 23ನೇ ತಾರೀಖು ಮತ್ತೆ ನನ್ನ ಆಫೀಸಿನಲ್ಲಿ ಒಂದು ಸಭೆ ಸೇರಿಸಿದೆ. ಅವೊತ್ತು ಎಲ್ಲಾ ಮಾನ್ಯ ಸದಸ್ಯರೂ ಈ ಪ್ರಶ್ನೆ ನಮ್ಮ ಪ್ರಶ್ನೆಯಲ್ಲ, ಯಾವುದೇ ಪಕ್ಷದ ಪ್ರಶ್ನೆಯಲ್ಲ, ನಮ್ಮ ರಾಜ್ಯದ ಪ್ರಶ್ನೆ, ಎಡೂವರೆ ಕೋಟಿಯ ಜನತೆಯ ಪ್ರಶ್ನೆ, ಆದ್ದರಿಂದ ಆ ಪಕ್ಷ ಈ ಪಕ್ಷ ಎನ್ನುವ ಯಾವ ಪಕ್ಷ ಮತಬೇಧವೂ ಇಲ್ಲದೆ ಎಲ್ಲರೂ ಒಂದಾಗಿ ಕರ್ನಾಟಕಕ್ಕೆ ಅನ್ಯಾಯ ವಾಗದಂತೆ ಅವರು ಎಂದರೆ ಕೇಂದ್ರ ಸರ್ಕಾರದವರು ನಮ್ಮ ಮೇಲೆ ಯಾವುದೇ ಒಂದು ನಿರ್ಣಯವನ್ನು ಹೇರದಂತೆ ನಾವೆಲ್ಲರೂ ನೋಡಿಕೊಳ್ಳಬೇಕು ಎಂದು ತೀರ್ಮಾನವಾಯಿತು. ಆಗ ಅನೇಕ ವಿರೋಧಪಕ್ಷದ ನಾಯಕರು ಒಂದು ರೆಜುಲ್ಯೂಷನ್ ಆಗಬೇಕು ಎಂದು ವ್ಯಕ್ತ ಮಾಡಿದರು. ರೆಜುಲ್ಯೂಷನ್ ಆಗಬೇಕು ಎಂದಾಗ ನಾನು ಶ್ರೀಮಾನ್ ಸಿದ್ಧವೀರಪ್ಪನವರನ್ನು ಎರಡು ಸಲ ಕೇಳಿದಾಗ ಅವರು ಹೇಳಿದರು ಈ ಬಗ್ಗೆ ನಾನು ಈವೊತ್ತು ಏನೂ ಹೇಳುವುದಕ್ಕಾಗು ವುದಿಲ್ಲ, ನಾನು ನಮ್ಮ ಪಕ್ಷದ ಸದಸ್ಯರನ್ನು ವಿಚಾರಿಸಿ ಅವರ ವಿಚಾರವನ್ನು ತಿಳಿದುಕೊಂಡು ನಂತರ ಬಂದು ಹೇಳುತ್ತೇನೆ, ಒಂದು ರೆಜುಲ್ಯೂಷನ್ ಈ ಸಭೆಯಲ್ಲಿ ಬರಬೇಕಾದರೆ ಅದರ ಕಾಪಿಯನ್ನು ನನಗೆ ಕೊಡಿ ನಾನು ಅದನ್ನು ತೆಗೆದುಕೊಂಡು ಹೋಗಿ ನನ್ನ ಪಕ್ಷದ ಸದಸ್ಯರ ಜೊತೆಯಲ್ಲಿ ಚರ್ಚೆ ಮಾಡಿ ನಂತರ ಹೇಳುತ್ತೇನೆ ಎಂದು ಹೇಳಿದ್ದರು. 23ನೇ ತಾರೀಖು ಸಬ್‌ಸ್ಟ್ಯಾಂಟೀವ್ ಮೋಷನ್ ಮಂಡಿಸುವ ಪರಿಸ್ಥಿತಿ ಬರುವುದರಿಂದ ಮತ್ತು ಇಂಥಾ ಒಂದು ಪರಿಸ್ಥಿತಿಯಲ್ಲಿ ಎಲ್ಲಾ ಮಾನ್ಯ ಸದಸ್ಯರೂ ಒಂದು ಕಡೆ ಒಂದು ಜೊತೆಯಲ್ಲಿ ಹೋಗಬೇಕಾದ ಪರಿಸ್ಥಿತಿ ಇರುವುದರಿಂದ ನಮ್ಮ ಐಕ್ಯತೆಯನ್ನು ಪ್ರದರ್ಶನ ಮಾಡಬೇಕಾದ ಪರಿಸ್ಥಿತಿ ಇರುವುದರಿಂದ ಅನೇಕ ವಿರೋಧಪಕ್ಷದ ನಾಯಕರು ಹೇಳಿದರು, ಯಾವುದೋ ಒಂದು ನೆಪದಿಂದ ಚರ್ಚೆ ಪ್ರಾರಂಭವಾಗಲಿ ಸಬ್‌ಸ್ಟ್ಯಾಂಟೀವ್ ಮೋಷನ್ ನಾಳೆ ಮೂವ್ ಮಾಡಬಹುದು, ಅಷ್ಟರೊಳಗೆ ವಿರೋಧಪಕ್ಷದ ನಾಯಕರು ತಮ್ಮ ತಮ್ಮ ಪಾರ್ಟಿ ಸದಸ್ಯರೊಡನೆ ವಿಚಾರ ವಿನಿಮಯ ಮಾಡಿ ನಾಳೆ ಒಂದು ನಿರ್ಣಯ ತೆಗೆದುಕೊಳ್ಳಬಹುದು ಎನ್ನುವ ಒಂದು ಪ್ರಶ್ನೆ ಬಂತು. ಯಾರು ಸಬ್‌ಸ್ಟ್ಯಾಂಟೀವ್ ಮೋಷನ್ ಮೂವ್ ಮಾಡಬೇಕು ಎನ್ನುವ ಪ್ರಶ್ನೆ ಬಂದಾಗ ನಾನು ಹೇಳಿದೆ ನಾನು ಈಗಾಗಲೇ ಈ ಬಗ್ಗೆ ಒಂದು ನಿಲುವೆಯನ್ನು ತೆಗೆದು ಕೊಂಡಿದ್ದೇನೆ. ನನ್ನ ಹತ್ತಿರ ಕೇಂದ್ರದಿಂದ ರಿಟರ್ನ್ ಪ್ರಪೋಜಲ್ ಬಾರದೆ ನಾನು ಏನು ಹೇಳುವುದಕ್ಕಾಗುವುದಿಲ್ಲ, ಈಗಾಗಲೇ ನಾನು ಒಂದು ನಿಲುವೆಯನ್ನು ಒಂದು ಸ್ಟ್ಯಾಂಡನ್ನು ತೆಗೆದುಕೊಂಡಿದ್ದೇನೆ. ಆದ್ದರಿಂದ ನಾನು ಒಂದು ಮೋಷನ್ ಮೂವ್ ಮಾಡಿದರೆ ನಾನು ಈ ಬಗ್ಗೆ ಒಂದು ನಿಲುವೆಯನ್ನು ತೆಗೆದುಕೊಂಡಿದ್ದೇನೆ ಎಂದು ಅರ್ಥವಾಗುತ್ತದೆ. ನಾನು ಈಗಾಗಲೇ ಕೇಂದ್ರಕ್ಕೆ ತಿಳಿಸಿದ್ದೇನೆ, ನಿಮ್ಮ ಪ್ರಪೋಜಲ್ ಅನ್ನು ರೈಟಿಂಗ್‌ನಲ್ಲಿ ಕಳುಹಿಸಿ ನಾನು ಅದನ್ನು ಸ್ಟಡಿ ಮಾಡುತ್ತೇನೆ, ಎಂದು ಹೇಳಿದ್ದೇನೆ. ಈ ಬಗ್ಗೆ ವಿರೋಧ ಪಕ್ಷದವರೊಡನೆ ಚರ್ಚೆ ಮಾಡುವುದಕ್ಕೆ, ಡಿಸ್‌ಕಸ್ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ, ನಾನು ಮೋಷನ್ ಮೂವ್ ಮಾಡಿದ ಮೇಲೆ ಒಂದು ಸ್ಟ್ಯಾಂಡ್ ಕ್ಲಿಯರ್ ಮಾಡಿದ ಹಾಗಾಯಿತು ಎಂದು ನಾನು ಹೇಳಿದಾಗ ಮಾನ್ಯ ಸದಸ್ಯರು ಹಾಗಾದರೆ ಅದು ಬೇಡ ನಾವೇ ಯಾರಾದರೂ ಉಳಿಕೆಯವರು ಮಾಡೋಣ, ಆದರೆ ಅದನ್ನು ಯಾರು ಮೂವ್ ಮಾಡಬೇಕು ಎಂಬುದನ್ನು ನಾಳೆ ನಿರ್ಣಯ ಮಾಡಬಹುದು ಎನ್ನುವ ಪ್ರಶ್ನೆ ಬಂತು. ಈ ವಿಚಾರಗಳನ್ನು ನಾನು ಏತಕ್ಕೆ ಹೇಳುತ್ತೇನೆ ಎಂದರೆ ಮಾನ್ಯ ಸದಸ್ಯರಾದ

ಶ್ರೀ ಸಿದ್ಧವೀರಪ್ಪನವರು ಒಂದು ವಿಚಾರವನ್ನು ಹೇಳಿದ್ದಾರೆ ಅದು ಏನೆಂದರೆ ಮುಖ್ಯ ಮಂತ್ರಿಗಳು ನನ್ನನ್ನು ವಿಶ್ವಾಸದಲ್ಲಿ ತೆಗೆದುಕೊಂಡಿಲ್ಲ, ನಮ್ಮ ಸಹಕಾರ ಅವರಿಗೆ ಬೇಕಾಗಿಲ್ಲ, ಅದಕ್ಕಾಗಿ ಅವರು ಈ ರೀತಿ ಹೇಳಿದ್ದಾರೆ, ನಮ್ಮ ಮೋಷನ್‌ನಂತಹದೇ ಶ್ರೀಮಾನ್ ಗೋಪಾಲಗೌಡರು ಒಂದು ಮೋಷನ್ ಮೂವ್ ಮಾಡಿದ್ದಾರೆಂದು ಹೇಳಿದ್ದಾರೆ. ನಾನು ಅವನ್ನು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಶ್ರೀಮಾನ್ ಗೋಪಾಲಗೌಡರ ಮೋಷನ್ ಯಾವರೀತಿಯಿಂದ ಬಂತೋ ನನಗೆ ಗೊತ್ತಿಲ್ಲ. ಅವರು ಅದನ್ನು ತಮ್ಮ ಭಾಷಣದಲ್ಲಿ ಸ್ಪಷ್ಟೀಕರಣ ಮಾಡಬಹುದು ಎಂದು ಕಾಣುತ್ತದೆ. ಮೋಷನ್ ವಿಚಾರದಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರ ಪಾರ್ಟಿಯಲ್ಲಿ ಏನು ಹೇಳಿದರೋ ಅದು ನಮಗೆ ಗೊತ್ತಿಲ್ಲ ಅಂದು ಆ ಮೋಷನ್ ಬಗ್ಗೆ ನಾನು ಯಾವ ವಿರೋಧಪಕ್ಷದವರ ಜೊತೆಯಲ್ಲಿಯೂ ಮಾತನಾಡಲಿಲ್ಲ. ನಾನು ಯಾವುದೋ ಒಂದು ಕಡೆ ಒಂದು ಕೆಲಸಕ್ಕೆ 4½ ಗಂಟೆಗೆ ಹೋದವನು ರಾತ್ರಿ 9 ಗಂಟೆಗೋ 10 ಗಂಟೆಗೋ ಮನೆಗೆ ಬಂದೆ. ಆ ಮೋಷನ್ ಏನಾಯಿತು, ಯಾರಿಗೆ ಸರ್ಕ್ಯುಲೇಟ್ ಮಾಡಿದರು ಏನು ಎಂಬುದೇ ನನಗೆ ಗೊತ್ತಿಲ್ಲ. ನಾನು ಪಾರ್ಟಿ ಮೀಟಿಂಗಿಗೆ ಹೋದಾಗ......

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ನಾನು ಈ ಬಗ್ಗೆ ಒಂದು ಎಕ್ಸ್‌ಪ್ಲನೇಷನ್ ಕೊಡಬೇಕಾಗಿದೆ. ಅಂದು 1½ ಗಂಟೆ ಸಮಯದಲ್ಲಿ ತಮ್ಮ ಛೇಂಬರಿನಲ್ಲಿ ಶ್ರೀ ವಿ. ಎನ್. ಪಾಟೀಲರಿಗೆ ಸಂಬಂಧಪಟ್ಟ ಯಾವುದೋ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಅಧ್ಯಕ್ಷರ ಛೇಂಬರ್‌ನಲ್ಲಿ ಎಲ್ಲರೂ ಸೇರಿದ್ದೆವು. ಆಗ ಮಾನ್ಯ ಮುಖ್ಯ ಮಂತ್ರಿಗಳೂ ಅಲ್ಲಿ ಇದ್ದರು. ಆಗ ಅಲ್ಲಿ ಶ್ರೀಮಾನ್ ಗೋಪಾಲಗೌಡರು ಇದ್ದರೋ ಇಲ್ಲವೋ ಗೊತ್ತಿಲ್ಲ. ಶ್ರೀಮಾನ್ ಶಿವಪ್ಪನವರು ಇದ್ದರು ಎಂದು ಕಾಣುತ್ತದೆ. ಆಗ ನಾವು ಈ ವಿಚಾರವನ್ನು ಮಾತನಾಡುತ್ತಿದ್ದೆವು. ಆಗ ನಾನು ಹೇಳಿದೆ ಇದು ರಾಜಕೀಯ ಕಾಂಟ್ರವರ್ಸಿಯಾಗುತ್ತದೆ. ಆದ್ದರಿಂದ ಬೇರೆ ಕಡೆ ಕುಳಿತುಕೊಂಡು ಮಾತನಾಡೋಣ ಎಂದು ಹೇಳಿದೆ. ಆ ನಂತರ ನಾವು ಛೇಂಬರ್‌ನಿಂದ ಹೊರಗಡೆ ಬರುವಾಗ ಶ್ರೀಮಾನ್ ವೀರೇಂದ್ರ ಪಾಟೀಲರು ಮೋಷನ್ನಿನ ಒಂದು ಕಾಪಿಯನ್ನು ನನ್ನ ಕೈಯಲ್ಲಿ ಕೊಟ್ಟರು. ಆಗ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದೆ ಈ ನಿರ್ಣಯವನ್ನು ಯಾರು ಮೂವ್ ಮಾಡುತ್ತಾರೆ ಎಂದು. ಆಗ ಅವರು ಹೇಳಿದರು ಅದನ್ನು ನಾಳೆ 11 ಗಂಟೆಗೆ ತೀರ್ಮಾನ ಮಾಡೋಣ ಎಂದು ಹೇಳಿದರು. ನಾನು ಆಗಲೇ ಹೇಳಿದ್ದೇನೆ ನಿಮ್ಮ ಜೊತೆಯಲ್ಲಿ ಈ ನಿರ್ಣಯದ ವಿಚಾರದಲ್ಲಿ ನಾವೆಲ್ಲರೂ ಕುಳಿತುಕೊಂಡು ಯೋಚನೆ ಮಾಡಬೇಕು ಎನ್ನುವ ದೃಷ್ಟಿಯಿಂದ, ನಮ್ಮ ಪಾರ್ಟಿಯ ಒಂದು ಸ್ಪೆಷಲ್ ಮೀಟಿಂಗ್ ಕರೆದು ನಾವು ಸಾಯಂಕಾಲ 6 ಗಂಟೆಗೆ ಸೇರಿದೆವು. ನಾವೆಲ್ಲರೂ ಕುಳಿತುಕೊಂಡು ಮಾತನಾಡುವಾಗ ಶ್ರೀಮಾನ್ ಗೋಪಾಲಗೌಡರ ಹೆಸರಿನಲ್ಲಿ ಆ ನಿರ್ಣಯ ಬಂದದ್ದು ಗೊತ್ತಾಯಿತು. ನಿನ್ನೆಯ ದಿವಸ ನಾವೆಲ್ಲರೂ 11 ಗಂಟೆಗೆ ಒಟ್ಟಿಗೆ ಸೇರಿ ಯೋಚನೆ ಮಾಡೋಣ ಎಂದು ನಮಗೆ ಟೈಮ್ ಕೊಟ್ಟು ಆಗಲೇ 7 ಗಂಟೆಗೆ ಆರ್ಡರ್ ಪೇಪರ್‌ನಲ್ಲಿ ಅದು ಬಂದಮೇಲೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕಾಂಟ್ಯಾಕ್ಟ್ ಮಾಡಬೇಕೆಂದು ಪ್ರಯತ್ನ ಮಾಡಿದೆ. ಆದರೆ ಅವರು ಸಿಕ್ಕಲಿಲ್ಲ. ಅವರಿಗೆ ನಮ್ಮ ಸಹಕಾರ ಬೇಕೇ ಅಥವಾ ಬೇಡವೇ ಎಂದು ಯೋಚನೆ ಮಾಡುತ್ತಿರುವಾಗ ಈ ನಿರ್ಣಯ ಬಂತು. ಅವರು ಸಹಜವಾಗಿ ನಿರ್ಣಯವನ್ನು ಕಳುಹಿಸಿಕೊಟ್ಟಿದ್ದಾರೆ ಎನ್ನುವ ಒಂದು ಅಭಿಪ್ರಾಯ ಬಂತು. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಏತಕ್ಕೆ ಈ ವಿಷಯವನ್ನು ಹೇಳಿದೆ ಎಂದರೆ ತಮ್ಮ ಭಾಷಣದಲ್ಲಿ ಈ ವಿಷಯಗಳನ್ನು ತಾವು ಹೇಳಿದ್ದೀರಿ, ಅದಕ್ಕೆ ನಾನು ಸ್ಪಷ್ಟೀಕರಣ ಕೊಡಬೇಕಾಗಿದೆ. ಅವರ ಭಾಷಣದಲ್ಲಿ ನನ್ನ ಮೇಲೆ ಛಾರ್ಜ್ ಮಾಡಿದ್ದಾರೆ. ನಮ್ಮ ಕೋ ಆಪರೇಷನ್ ಇವರಿಗೆ ಬೇಕಾಗಿಲ್ಲ, ನಮ್ಮನ್ನು ಅವರ ಸಂಗಡ ಕರೆದುಕೊಂಡು ಹೋಗುವುದಕ್ಕೆ ಅವರು ತಯಾರಿಲ್ಲ ಎಂದು ಇನ್ನೂ ಏನೇನೋ ಅನೇಕ ಪದಗಳನ್ನು ಉಪಯೋಗ ಮಾಡಿದ್ದಾರೆ.

9-00 P.M.

ಮಾನ್ಯ ಅಧ್ಯಕ್ಷರೇ, ತಮ್ಮ ಛೇಂಬರಿನಲ್ಲಿ ಸಬ್‌ಸ್ಟ್ಯಾಂಟಿವ್ ಮೋಷನ್ ಯಾವ ರೀತಿ ಇರಬೇಕೆಂದು ಪ್ರಶ್ನೆ ಬಂದಾಗ, ತಾವು ಹೇಳಿದಿರಿ ರೂಲ್ ನಂ. 279ರ ಪ್ರಕಾರವೋ ಅಥವಾ ಬೇರ್‍ಯಾವುದೋ ರೂಲ್ ಪ್ರಕಾರ ಒಂದು ಮೋಷನ್ ಬರಬಹುದು ಎಂದು. ಸಬ್‌ಸ್ಟ್ಯಾಂಟಿವ್ ಮೋಷನ್ ಯಾವ ರೀತಿ ಇರಬೇಕೆಂಬುದು ಅಲ್ಲಿ ಚರ್ಚೆಗೆ ಬರಲಿಲ್ಲ.

Mr. SPEAKER.—Now I would like to inform the hon. Members that we had extended the time up to 9-00 p.m. Now it is 9-00 p.m. I would like to know from the hon. Members whether the time be extended up to 9-30 p.m.

Sri H. SIDDAVEERAPPA.—Sir, let us adjourn now and let the reply be continued tomorrow or on Monday.

ಶ್ರೀ ಎಲ್. ಶ್ರೀಕಂಠಯ್ಯ.—ಮಾನ್ಯ ಮುಖ್ಯ ಮಂತ್ರಿಯವರು ಈಗ ಪ್ರಾರಂಭ ಮಾಡಿದ್ದಾರೆ. ಅದು ಒಂಭತ್ತೂವರೆ ಗಂಟೆಗೆ ಮುಗಿಯುತ್ತದೆಂದು ನನಗೆ ಭರವಸೆ ಇಲ್ಲ. ಮಾನ್ಯ ಗೋಪಾಲಗೌಡರು ಅನೇಕ ವಿವರಣೆಗಳನ್ನು ಕೊಡಬೇಕಾಗಿದೆ, ನಾನೂ ಕೊಡಬೇಕಾಗಿದೆ. ಹೆಚ್ಚು ತಡವಾದರೆ ನಮಗೆ ಅಲ್ಲಿ ಊಟ ಕೂಡ ಸಿಗುವುದಿಲ್ಲ. ಆದ್ದರಿಂದ ಅದನ್ನು ಈಗಲೇ ಇತ್ಯರ್ಥ ಮಾಡಬೇಕು.

ಶ್ರೀ ಎಸ್. ಚನ್ನಯ್ಯ.—ಸ್ವಾಮಿ, ಒಂದು ಸಾರಿ ಇತ್ಯರ್ಥ ಮಾಡಿದ ಮೇಲೆ ಅದು ಅಲ್ಲಿಯೇ ನಿಲ್ಲಬೇಕು. ಅಲ್ಲದೆ ಪ್ರತಿ ಸಾರಿ ಮುಂದುವರಿಸುತ್ತಾ ಹೋದರೆ ನಮಗೆ ಕೂತುಕೊಳ್ಳಲು ಆಗುವುದಿಲ್ಲ. ನಾನು ಕಾಯಿಲೆ ಮನುಷ್ಯ. ನಾನು ಎಷ್ಟು ಔಷಧಿ ತೆಗೆದುಕೊಳ್ಳಬೇಕಾಗಿದೆ. ಈ ರೀತಿ ಮಾಡಿದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಹೇಳುವುದು, ನಾಳೆಯ ದಿವಸ ಖಾಸಗೀ ನಿರ್ಣಯದ ಕಾರ್ಯಕಲಾಪಗಳು ಇವೆ. ಬಹಳ ಜನ ಸದಸ್ಯರು ಊರಿಗೆ ಈಗಾಗಲೇ ಹೋಗಿದ್ದಾರೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ನೀವು ಒಪ್ಪುವುದಾದರೆ ಸೋಮವಾರ ದಿವಸ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—9-45ರ ವರೆಗೆ ಏಕೆ ಕೂತುಕೊಳ್ಳಬಾರದು ? ಅದಕ್ಕೆ ಮೊದಲು ಮುಗಿಸಿದರೆ, ಬಹಳ ಒಳ್ಳೇದಾಯ್ತು.

ಶ್ರೀ ಎಸ್. ಗೋಪಾಲಗೌಡ.—ಹೀಗೆ 5-5 ನಿಮಿಷ ಮುಂದುವರಿಸಿಕೊಂಡು ಹೋದರೆ ನೀವು ಅಪಾಯಕ್ಕೆ ಸಿಕ್ಕುತ್ತೀರಿ. ನನಗೂ ಪರ್ಸನಲ್ ಎಕ್ಸಪ್ಲನೇಶನ್ ಕೊಡಲು ಸಾಧಾರಣ ಅರ್ಧ ಗಂಟೆ ಬೇಕಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸುಮಾರು 10 ಗಂಟೆಯ ವರೆಗೆ ಮಾಡಿ. ನಾವು ಒಪ್ಪಿಕೊಂಡಿದ್ದೇವೆ, ಇವತ್ತು ಮುಗಿಸಬೇಕೆಂದು.

Mr. SPEAKER.—I will request the hon. Member to be brief in making his personal explanation. Then we shall sit up to 9-45 p.m.

Sri H. SIDDAVEERAPPA.—Sir, are you going to adjourn the House at 9-30 p.m. or not ?

Sri S. SIVAPPA.—Sir, every one of us have agreed that reply should be over to-day.

Sri R. DAYANANDA SAGAR.—It is humanly impossible to sit beyond 9-30 p.m. Why do you make us suffer ?

Sri H. SIDDAVEERAPPA.—Sir, the reply may be taken up tomorrow.

Mr. SPEAKER.—Hon. Member Sri Siddaveerappa is making a suggestion that the reply be taken up tomorrow. If the House is prepared to forgo non-official business tomorrow I have no objection.

Sri VEERENDRA PATIL.—Sir, the House is aware that if my reply has commenced late at 9 O'clock, I am not responsible for that.

Sri H. SIDDAVEERAPPA.—Yes. You are not responsible for that. You must have full time to have your say in the matter also.

Sri VEERENDRA PATIL.—Sir, if any hon. member derives conclusion by my uttering a sentence it becomes difficult for me to express my views. I had started saying that if my reply has commenced at 9 O'clock I am not responsible for that. Because so many members were anxious to express their views on this vital problem you were kind

enough to give time to them to speak. I never objected to it. Now I must have my full say in the matter: I can very well appreciate the impatience of hon. Members because it is already 9.10 P.M. Now since the hon. Members are prepared to sit for one hour extra tomorrow, I have absolutely no objection to reply tomorrow. But the reply may commence immediately after the Question Hour. After the reply, you can take up the non-official business. At the same time, hon. Member Sri Gopala Gowda who is the mover of the resolution and against whom some hon. Members have cast aspersions should have some time to make personal explanation and justify his stand.

Sri K. PUTTASWAMY.—Sir, you have made it very clear that all these substantive motions are coming in as amendments to the main motion. As a sort of concession, you may give opportunities to all those persons who have moved these substantive motions to clarify their position by way of reply.

Sri VEERENDRA PATIL.—Sir, it is for the hon. Speaker to decide to give opportunity to all these hon. Members who have moved the substantive motions on this subject. I do not stand in your way. It is not at all my intention also to stifle the debate. Only when you called upon me to reply, I stood up to reply.

Mr. SPEAKER.—Now the House will rise to meet again tomorrow at 8-30 A.M.

The House adjourned at Fifteen Minutes past Nine of the Clock to meet again at Thirty Minutes past Eight of the Clock on Saturday, the 28th February, 1970.